Purchase Rate of Sugarcane by the Ugar Sugar Factory, Belgaum.

Q.—1546. SRI V. L. PATIL (Raibag).—

Will the Government be pleased to state :—

(*a*) whether it is a fact that Ugar Sugar Factory in Belgaum district made an agreement with Bombay Government to purchase sugarcane for Rs. 45 per ton for three years;

(*b*) whether they are aware that the Factory paid two years and not paid third year at the agreed rate;

(*c*) whether it is a fact that the Central Government asked the factory to pay at the rate of Rs. 45 according to the contract made with the Government;

(*d*) if so, the reasons for not insisting upon the Factory to pay Rs. 45 per ton as per the contract;

(*e*) whether they have received any representations from the sugarcane growers to ask the said Factory to pay the agreed price for the year 1956-57 ?

A.—SRI H. S. RUDRAPPA (Minister for Agriculture).—

(*a*) So far as this Government are aware, it was mutually agreed between the Government of Bombay and the Deccan Sugar Factories Association, of which the Sugar Works Ltd., is a member to pay a price of Rs. 45 per ton of sugarcane for the season 1956-57.

(*b*) According to information available with Government, the Factory did not at first pay the price of Rs. 45 for the season 1956-57.

(*c*) Yes.

(*d*) The factory has since paid the the price of Rs. 45 per ton for the cane in respect of which agreement was entered into prior to 1st November 1956, *i.e.*, prior to re-organisation of States, on which date the agreement ceases to operate. From 1st November 1956 the price linking formula for 1956-57 will be applicable and the Factory would be liable to pay an additional price under this formula.

(*e*) Yes.

BUDGET FOR 1958-59—GENERAL DISCUSSION.

(Debate continued.)

SRI B. BASAVALINGAPPA (Bangalore South—S.C.).—Mr. Speaker, Sir, I am very happy that the Hon'ble Minister for Finance has presented a surplus Budget. I feel a surplus Budget will lead us to mental satisfaction. Sri Mohamed Imam is here. He knows when the Central Budget was presented in Parliament it was received with dull response. As a person who is interested in the developmental activities of the State, I feel that I also have the responsibility for this Budget. The Finance Minister has stated that we must cut the coat according to the cloth. But this is not a happy note to the people who are prepared to make utmost sacrifices and also engage themselves in complete activity in the path of progress of the country.

SRI U. M. MADAPPA (Chamarajanagar).—On a point of order, Sir. According to the list of business, certain Bills have to be introduced.

MR. SPEAKER.—I have been responsible to postpone it.

SRI B. BASAVALINGAPPA.—Sir, when I went through the Budget, I did not find any increased provision for the developmental schemes and to implement the Five-Year Plan to meet the needs of the people. I wish that hereafter at least the Finance Minister—I am very sorry he is not here—will present a Budget with increased provision for developmental activities of the State. Last time when I spoke on the Budget I had made certain remarks about the preparation of the Budget and I am happy to say that those remarks have been met with success since certain alterations, regarding revised figures, have been introduced. The Public Accounts Committee and the Estimates Committee which ought to have met last year have not met and as a result we find that certain irregularities which would have been observed by these committees are not before us. The Audit Report and the Accounts for the year 1956-57 covering the period from 1st April to 30th October 1956 have been

furnished to us. After those dates we do not find the Audit Report and the reports of the Accounts Committee. I feel that there is a short fall in the expenditure due to the non-implementation of the items that were sanctioned in the previous Budget. When I went through the Budget I found that the financial position of the State was very sound and solid. The assets are more than public debts and also the loans raised by the State Government and also granted by the Central Government. Sri Mahomed Sait yesterday was observing that the debts were more than the income. I do not agree with him. We are now launching on a very enterprising work of implementing the Five-Year Plan by using our own resources for the developmental activities of the State. In such an activity we must also be prepared to bear certain debts to see that the purpose is fulfilled. I see that the allocation of assets and liabilities of the integrated areas and the State have not been finalised. I do not know who is responsible for this. I do not know whether they are going to finalise the assets and liabilities of respective Governments.

I wish to make certain suggestions regarding the increase in the land revenue of the State. The land revenue of the State has not been revised. Survey settlement has not been done and the Government very often have been telling us that they are going to complete it very shortly but they have not done so. I do not know when they are going to complete the survey settlement and bring in uniformity in the laws and in the levy of revenue. You are aware that in the Bombay area we find that the levy of the revenue on wet land is more than the levy of revenue on the wet land in old Mysore State. After integration whatever the benefits which are conferred on a section of the people of this State must be uniformly shared by all persons living in the State. That has not been done. Whether the benefit accrues to the people of the old Mysore State or to the people coming from other areas, it must be implemented uniformly very soon so that all people living in the State will be very happy. In my modest estimation, the land revenue will be doubled if the uniform levy is introduced in the State.

2-30 P.M.

As regards the bus rate, there is a suggestion in the Budget that it should be increased, I feel that there must be a uniform bus rate throughout the State. We must be prepared to make certain sacrifices if we are to implement the Five-Year Plan. Regarding the Small Savings Scheme, I feel that it has not been sufficiently popularised by the officers who are entrusted with this work.

Another point I wish to make is that the loans and advances made by the Government to the local authorities and individuals for various purposes are not recovered. I do not know why the officers are reluctant to recover the loans due to the Government. If the Government makes very earnest and honest efforts to recover the loans due to the Government, I think we will be able to implement the Plan without any strain. If the Government does that, we can embark upon several works and fulfil the needs of the people in several respects. Therefore, I suggest that the Government should make earnest attempts to recover the arrears of loans granted by them.

In the Budget I see that the capital outlay which creates permanent assets to the State has been considerably reduced. I have heard with rapt attention the argument of some members of this House that by creating permanent assets we would pass on certain burdens to the posterity. I for one feel that the assets created permanently are assets not only to ourselves but also to the posterity. We are prepared to bear any amount of burden if thereby permanent assets are created. For the developmental work they have allotted only Rs. 297·63 lakhs which is very insufficient and I feel it should be doubled or trebled.

Regarding the Kolar Gold Mines there is a deficit of about Rs. 38 lakhs. I happened to visit the Gold Mines. I went to a section where gold is actually moulded. There I found that the officer who was entrusted with the work of removing gold and keeping it

(SRI B. BASAVALINGAPPA)

was not a sufficiently responsible officer who could be entrusted with that work. I also found that the people who were employed there were not sufficiently responsible. They were all labourers and are not paid well. I do not know why the Government have not thought over this matter. I do not know what is the reason for the loss that is caused in the Gold Mines.

There was a committee appointed by the Government for the preparation of the History of Freedom Movement. They have allotted nearly Rs. 20,54,074. Five years are over and still the person in charge of it has not shown much improvement in this work. I have seen one book sent to us for information. Except that, I do not know what he has done for the last five years. I suggest that the Government must take active steps to see that this work is completed in a very short time so that we can avoid extra expenditure.

Then, I come to the very important subject of social welfare. When I was reading a novel written by M. Gorky, I was reminded of a small episode. After the revolution in Russia, a husband and wife and their daughter go to a village with a view to reform the people in a village and there they find so many vagabonds, murderers, thieves, thugs and other anti-social elements. As soon as they went there they were jeered, were laughed at, and were insulted. The young lady could not bear this sight and she said, "Let us go back." The father said instantly "You should not forget that they are our people, and they are Russians." I would repeat it here. We have not approached the real problem of a society with such a bent of mind. We, as the intelligentsia of the society, must approach this problem with a firm determination to reform the society. We are now living in a country which is known for so many distinctions and disparities. In this country, there are Harijans, there are poor people and there are unsocial elements, but we must reform them, make them good and able citizens of this country' equal partners in the great enterprise of Democracy. With this background, I suggest that what we have been doing is not proper and is not a good approach. Suppose we go to a village and meet a murderer or a thug or a Harijan or a thief, we have a bent of mind to tell him, "You are a bad man, you are a murderer, you are a thug, you are a thief, you are a Harijan, you are an untouchable and so on." I feel that that should not be the attitude of the intelligentsia of the society. We must now decide to improve the lot of these persons, elevate their standards and make them good citizens. This must be the basic approach of the Government towards this problem. There is the Social Welfare Board. They are not doing anything worth mentioning. After independence if we do not take steps to improve the lot of the weaker sections of the people, I do not know what we should say. We are trying to elevate the people who are already well settled and secured in society. We have not done anything to improve the lot of the people who are downtrodden and who feel they are denied of the opportunities of a decent living in society and who are yet to be elevated as citizens of this fair country. There is the Women Welfare Board of which one lady has been appointed as Chairman. She is also the Chairman of the Red Cross Society. The work of the Red Cross Society is more comprehensive and takes away the full time of the lady. I cannot understand why she should be appointed as the Chairman of the Women Welfare Board also which requires full time of that lady and her other colleagues on the Board. I, therefore, suggest that the Government should revise its policy in this behalf and appoint different persons in the respective places. There is no dearth of women who are agile, enthusiastic and active enough to see that these ideas are implemented.

In the old Mysore Sri R. Gopalaswamy Iyer and Sri Narasimharaja Wadeyar, the father of the present Governor, were responsible for bringing about some renascence in the life of Scheduled Castes. They are the

pioneers who made us what we are today. In fact, I am proud of Sri R. Gopalaswamy Iyer who was responsible for my elevation. Such men have worked for the elevation of the Scheduled Castes. They started hostels all over the State in each taluk and in each district headquarters. They started the University hostels exclusively for Harijans and we see that several graduates have come out and are occupying responsible positions in the society and Government. If we go to North Karnatak, we will find that there is not even a single hostel for the Scheduled Castes run by Government. I know that there are Backward Class Hostels.

Sir, I suggested to the Education Minister six months ago that Government must start some free Hostels in Ex-Hyderabad and Ex-Bombay areas. They have not provided any money for this purpose in the Budget. They have provided Rs. 27,000 for the purpose of starting backward class hostels. The Government are insulting us without doing any substantial work for the amelioration of these persons who have to be ameliorated. I suggest the Government will make up their mind to start free boarding hostels in all the districts of the integrated areas as well as the areas of the old Mysore State, to start with.

Sir, the Government arranged for the Mysore State Depressed Class Seminar in Kengeri in the year 1954. The Hon'ble Minister for Local Self-Government who is also in charge of the Scheduled Castes, was also the Chairman of one of the committees constituted under its auspices. Even after he became the Minister, he has been sleeping over those recommendations of the seminar. I do not know what are his difficulties. We have been pressing him in the policy committee meetings that their suggestions and recommendations must be implemented. He refuses to implement them. I do not know what are his difficulties. Whether his colleagues are coming in his way of implementing these suggestions, is not known to us. He seems to have no mind to do it. For the construction of houses, Sir, last year there was a provision of 29 lakhs by way of State contribution; this year, they have reduced it to 11 lakhs. I do not know what the Hon'ble Minister has been doing in this direction. For the education of the Scheduled Castes, they have provided last year Rs. 4,34,000; this year they have reduced it to Rs. 2,50,000. It is a horrible thing. When we want to pool our resources to do some substantial work, and when there is a cry all over for the amelioration of the Scheduled Castes, we are really going backward and I do not know why the Government is not keen in implementing the directions and directive principles of the Constitution for the amelioration of the Scheduled Castes. Sir, the social conditions of the Scheduled Castes in the north Karnataka areas and other areas are horrible. I would like to tell you what is happening in those areas, during the Holy festivities. The Scheduled Castes women have been taken in procession in public streets by non-Scheduled Castes men. Do you tolerate this, I ask. I represented to the Government and requested that it should be stopped. It is not only an insult to the Scheduled Castes but also to all the civilised people in the land. Sri Poonacha to whom I represented the matters said, 'If it is a custom, how can we stop it?' I told him that it would be fair to allow all women to be taken in the public street without any distinction. It is a matter of shame that such customs are allowed to exist and what is more, for the Government to permit such things to be continued in the name of custom even in the civilised times. Depressed class people are living like dumb cattle without proper education, without proper housing facilities, without property to lean back. It is a horrible state of affairs. Every one of us here is determined to see that sufficient minimum amenities are provided to these people. I must go one step further and declare that as long as these depressed class people are allowed to live in perpetual want, starvation and misery, this democracy will never survive and it will be a mere mockery.

(SRI B. BASAVALINGAPPA)

Regarding Land Reforms, Sir, I wish to say this much : I was a member of the Jatti Committee, and in that capacity I was one of the authors of that Report. Hon'ble Members have given so many suggestions and passed adverse remarks. I could not reply at that stage, because I could neither say for or against. Ours is an infant democracy. We have to establish fair traditions for the prosperity of the nation. I have the honour to belong to the Congress Party which has set down its policies in the Election Manifesto. I am reading this Manifesto. We are pledged to implement what is declared in this Manifesto. If we do not carry out these pledges, I think we have no right to expect to be returned once again by the electorate. The Congress election manifesto on land reforms reads as under :—

> "On the land, all the intermediaries should be progressively removed so that the land is owned by the cultivator himself. The principle of ceiling on land is accepted and should be progressively introduced so as to bring about a better distribution of the land."

My submission to the Hon'ble Members of this House is that as long as I remain a member of the Party to which I am proud to belong, I will try to carry out all the pledges given at the time of election. If I fail to carry out the pledges being a member of the Party, that will be a violation of the trust that has been placed in me by my electorate. This should be the right tradition, which every member of the other party should follow.

We are now in the period of the Second Five-Year Plan. What has been said has got to be implemented by the Government as well as by the Members of the Assembly. I feel that the recommendation of the Planning Commission must be implemented very sincerely and with a religious fervour and with all the determination that we can command. After the formation of Karnataka, I have been urging on the floor of this House that we should have uniform laws. I do not know why the Government is yet hesitating. I do not know whether it is out of any fear that it may be difficult to bring in uniform laws. I do not know what difficulties lie in their way. I take this opportunity that they will have the support of all the members of this House if the Government take courage and bring forward uniform laws. Sir, I conclude my speech by mentioning a few words, uttered by Swami Vivekananda.

> "What the country wants is muscles of iron, nerves of steel and gigantic will power which will accomplish the purpose even if it meant going to the bottom of the sea and meet death face to face."

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ 1958 ಮತ್ತು 1959 ನೆಯ ಸಾಲಿನ ಮುಂಗಡ ಪತ್ರವನ್ನು ಸ್ವಾಗತ ಮಾಡುತ್ತಾ ಕೆಲವೊಂದು ಸೂಚನೆಗಳನ್ನು ಮಾಡಲು ನಾನು ಬಯಸುತ್ತಿದ್ದೇನೆ. 1954 ನೆಯ ಇಸವಿಯಿಂದ ನಾನು ಈ ರಾಜ್ಯದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿದ್ದು ಈಗ ಒಂದು ವರ್ಷದಲಾಗಾಯ್ತು ಈ ಅಸೆಂಬ್ಲಿಯಲ್ಲಿದ್ದೇನೆ. ಈ ನಾಲ್ಕು ವರ್ಷಗಳಲ್ಲಿ ನಮ್ಮ ಮುಂದೆ ಬಂದ ಮುಂಗಡ ಪತ್ರವು ಖೋತಾಪತ್ರವಾಗಿರುತ್ತಿತ್ತು. ರಾಜ್ಯ ವಿಂಗಡಣೆಯಿಂದ ಇನ್ನೂ ಕೆಲವಾರು ವರ್ಷಗಳು ನಾವು ಇದೇ ತರಹ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಈಗಲೂ ನಮ್ಮ ಮುಂಗಡ ಪತ್ರ ಕೊರತೆಯ ಪತ್ರವಾಗಿಯೇ ಇರುತ್ತದೆ ಎಂದು ನಾವು ಎಣಿಸಿದ್ದೆವು.

ಆದರೆ, ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ದಕ್ಷತೆಯಿಂದ ಹಿಂದೂಸ್ಥಾನದ ಹಣಕಾಸಿನ ನಿಯೋಗದ ಮುಂದೆ ನಮ್ಮ ಹಣಕಾಸಿನ ಕಷ್ಟ ಪರಿಸ್ಥಿತಿಯನ್ನು ಚೆನ್ನಾಗಿ ಅವರಿಗೆ ಮನವರಿಕೆಯಾಗುವ ರೀತಿಯಲ್ಲಿ ನಮ್ಮ ಸರ್ಕಾರದ ಪರವಾಗಿ ಮಂಡಿಸಿ ಇನ್ನು ಐದು ವರ್ಷಗಳ ತನಕ ನಮ್ಮ ಖೋತಾವನ್ನು ನೀಗಲು ಪ್ರತಿವರ್ಷ ಆರು ಕೋಟಿ ರೂಪಾಯಿಗಳನ್ನು ಬರುವಂತೆ ಮಾಡಿದ್ದು ಬಹಳ ಸಂತೋಷಕರವಾಗಿದೆ. ನಾವು ಈಗ ಹೊಸ ರಾಜ್ಯವನ್ನು ಕಟ್ಟಬೇಕೆಂದಿದ್ದೇವೆ. ನಮ್ಮ ರಾಜ್ಯ ದೊಡ್ಡದಾಗಿದೆ. ನಮ್ಮಲ್ಲಿ ಅನೇಕ Resources ಇವೆ. ನಮ್ಮ ರಾಜ್ಯದ ಉತ್ಪತ್ತಿಯನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ. ಇಂಥ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಅನೇಕ ಮಿತ್ರರು ಹೇಳಿದ ಹಾಗೆ ಸಾಲದ ಹೊರೆ ಬೇರೆ ಜಾಸ್ತಿಯಾಗುತ್ತಿದೆ; ಇದೇರೀತಿ ಸಾಲದ ಹೊರೆ ಜಾಸ್ತಿಯಾಗುತ್ತಿದ್ದರೆ ನಮ್ಮ ಹಣಕಾಸಿನ ಪರಿಸ್ಥಿತಿ ವಿಕೋಪಕ್ಕೆ ಹೋಗಿ ನಮಗೆ ಕ್ಲಿಷ್ಟ ಸಮಸ್ಯ ಬರುತ್ತದೆಂದು ಹೇಳಿದ್ದಾರೆ. ಇದು ಒಂದು ದೃಷ್ಟಿಯಿಂದ ಒಪ್ಪುವ ಮಾತಾಗಿ, ಆ ದೃಷ್ಟಿಯಿಂದ ನಮ್ಮ resourcesಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಲ್ಲದೆ, ನಮ್ಮ ದೇಶದ ಆಸ್ತಿಯನ್ನು, ಸ್ವತನ್ನು ಬೆಳೆಸುವ ದೃಷ್ಟಿಯಿಂದಲೂ ಈ Recourcesನ್ನು ರೂಢಿಸಬೇಕಾಗಿದೆ. ಆದ್ದರಿಂದ ನಮಗೆ ಸಾಲವಷ್ಟೇ

ಇದ್ದರೂ ಕೂಡ, ಇನ್ನು ಕೆಲವಾರು ವರ್ಷಗಳಲ್ಲೇ ನಮಗೆ ಈಗಿನಂತೆ ಇಮ್ಮಡಿಯಾಗಿ, ಮುಮ್ಮಡಿಯಾಗಿ ಲಾಭ ಬರುವ ನಿರೀಕ್ಷೆಯಿರುವುದರಿಂದ, ನಾವು, ಧೈರ್ಯವಾಗಿ ಸಾಲಮಾಡಿಯಾದರೂ ಕೂಡ ನಮ್ಮ resourcesನ್ನು ರೂಢಿಸಲಿಕ್ಕೆ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ.

ಸ್ವಾಮಿ, ಈಗ ನಮ್ಮ ರಾಜ್ಯದಲ್ಲಿ ಇದುವರೆಗೂ ಪ್ಲಾನ್‌ಗಳು ತಯಾರಾಗುತ್ತಿರುವುದು ಕೇವಲ ಸಿಟಿಗಳ ಮತ್ತು ಪಟ್ಟಣಗಳ ಬೆಳವಣಿಗೆಗೆ ಆಗಿವೆ. ಇತ್ತೀಚೆಗೆ ಹಿಂದೂಸ್ಥಾನದ ಸರ್ಕಾರದವರು ಕೂಡ ಜಿಲ್ಲಾ ಮಟ್ಟದಲ್ಲಿ ಪ್ಲಾನುಗಳು ತಯಾರಾಗಬೇಕು, ಮುಖ್ಯವಾಗಿ ಹಳ್ಳಿಗಳು ಏಳಿಗೆಗೆ ಬರಬೇಕೆಂದು ಹೇಳಿದ್ದಾರೆ. ಇದು ಕಾರ್ಯಗತವಾಗುತ್ತಿಲ್ಲ. ಇದಕ್ಕೆ ಕಾರಣಗಳೇನೆಂಬುದನ್ನು ಆಡಳಿತ ಸೂತ್ರವಹಿಸಿರುವ ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ವಿನಯದಿಂದ ಪ್ರಾರ್ಥಿಸುತ್ತೇನೆ.

ಆ ಮೇಲೆ, ಪ್ರತಿವರ್ಷವೂ ಮುಂಗಡ ಪತ್ರವನ್ನು ತಯಾರಿಸುವಾಗ ತಮ್ಮ ಕೈಕೆಳಗಿನ ಆಫೀಸರುಗಳ ಮೂಲಕ ಯಾವಯಾವ ಕೆಲಸ ಕಾರ್ಯಗಳಿವೆಯೆಂದು ತಿಳಿದು ಮಾಡುತ್ತಿದ್ದಾರೆ. ಇದು ಮಾಡುವುದು ಸೂಕ್ತವಾದರೂ ಕೂಡ ಈ ಸಂದರ್ಭದಲ್ಲಿ ನಾನೊಂದು ಸೂಚನೆಯನ್ನು ಕೊಡಬಯಸುತ್ತೇನೆ. ಮುಂಗಡ ಪತ್ರ ಬರುವ ಪೂರ್ವದಲ್ಲಿ ಆಯಾ ಭಾಗದಲ್ಲಿರತಕ್ಕ ಖಾಸಗಿ ಸದಸ್ಯರುಗಳನ್ನು ಕರೆಸಿಕೊಂಡು ಜಿಲ್ಲಾ ಮಟ್ಟದಲ್ಲಿ ಸಮಾಲೋಚನೆ ನಡೆಸಿ ಆಯಾ ಭಾಗದಲ್ಲಿ ಏನೇನು ಕೆಲಸ ಕಾರ್ಯಗಳಾಗಬೇಕು ಎಂಬುದನ್ನು ನೋಡಿ ಅದಕ್ಕೆ ಪ್ರಾಶಸ್ತ್ಯಕೊಡಬೇಕೆಂದು ಹೇಳುತ್ತೇನೆ. ಸದಸ್ಯರುಗಳಾದ ನಾವು ನಮ್ಮ ತಾಲ್ಲೂಕಿನ ಅಥವ ಜಿಲ್ಲೆಯ ನಾನಾ ಭಾಗಗಳನ್ನು ಸಂಚರಿಸಿ ಡಿಸ್ಟ್ರಿಕ್ಟ್ ಆಫೀಸರ ಜೊತೆಯಲ್ಲಿ ಕುಳಿತು ನಾವು ಹಿಂದೆ ಏನೇನು ಸೂಚನೆಗಳನ್ನು ಮಾಡಿದ್ದೇವೋ ಅವೆಲ್ಲಾ ಈಗ ನೋಡಿದರೆ ಬಿಟ್ಟು ಹೋಗಿವೆಯೆಂದು ಗೊತ್ತಾಗುತ್ತದೆ. ಇದು ದುರ್ದೈವ, ಯಾವ ಕಾರಣದಿಂದ ಬಿಟ್ಟುಹೋಗಿವೆಯೋ ಗೊತ್ತಿಲ್ಲ. ಐದು ವರ್ಷಕ್ಕೊಮ್ಮೆ ನಾವು ಚುನಾವಣಾ ಕಾಲದಲ್ಲಿ ಪ್ರಚಾರ ಮಾಡುವಾಗ್ಗೆ ಪದೇಪದೇ ಹೇಳುತ್ತಿದ್ದೇವೆ, ಹಿಂದುಳಿದ ಪ್ರದೇಶಗಳನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ಹಾಗಿರುವಲ್ಲಿ, ಈ ಹೊತ್ತಿನ ದಿವಸ ನಮಗೆ ಪತ್ರಗಳು ಬರುತ್ತವೆ, 'ನೀವು ನಿಮ್ಮ ಮಾತು ಉಳಿಸಿಕೊಂಡಿಲ್ಲ, ಮುಂದಿನ ಚುನಾವಣೆಗಳಲ್ಲಿ ನೀವು ಬರುವುದಿಲ್ಲ' ಎಂದು. ಹೀಗಾಗಿ ನಾವು ಕಷ್ಟ ಪರಿಸ್ಥಿತಿಗೆ ಬಂದಿದ್ದೇವೆ. ಎಲ್ಲಾ ಪ್ರದೇಶಗಳನ್ನೂ ಒಂದೇ ಸಾರಿಗೆ ಅಭಿವೃದ್ಧಿ ಪಡಿಸುವುದಕ್ಕಾಗುವುದಿಲ್ಲ, ನಿಜ. ಒಂದು ಕುಟುಂಬದಲ್ಲಿ ಹತ್ತು ಜನರನ್ನೂ ಒಂದೇ ರೀತಿ ನೋಡಿಕೊಳ್ಳುವುದಕ್ಕಾಗುವುದಿಲ್ಲ. ಅಂದ ಮಾತ್ರಕ್ಕೇ ಮಕ್ಕಳಲ್ಲಿ ಒಬ್ಬನ ಮೇಲೆ ಪ್ರೀತಿ ಜಾಸ್ತಿಯಿದೆ, ಇನ್ನೊಬ್ಬನ ಮೇಲೆ ಪ್ರೀತಿಯಿಲ್ಲವೆಂದಲ್ಲ. ಹಣಕಾಸಿನ ಸ್ಥಿತಿ ಚೆನ್ನಾಗಿಲ್ಲದಿರುವುದರಿಂದ ವ್ಯತ್ಯಾಸ ಮಾಡಬೇಕಾಗಿಬರುತ್ತದೆ. ಬೆಂಗಳೂರಿನಲ್ಲಿ ಒಬ್ಬನು ಓದುತ್ತಿರುತ್ತಾನೆ, ಅಂಥವನಿಗೆ ನಾಲ್ಕಾರು ಧೋತ್ರ, ಷರಾಯಿಗಳನ್ನು ಹೆಚ್ಚಿಗೆ ಹೊಲಿಸಿಕೊಡಬೇಕಾಗುತ್ತದೆ. ಇನ್ನೊಬ್ಬ ಹಳ್ಳಿಯಲ್ಲಿದ್ದು ನೇಗಿಲು ಹಿಡಿಯುತ್ತಿದ್ದರೆ ಅವನಿಗೆ ಒಂದು ಧೋತ್ರ ಕೊಟ್ಟರೆ ಸಾಕೆಂದು ಭಾವಿಸುತ್ತಾನೆ. ಇದೇ ರೀತಿ ಸರ್ಕಾರದಲ್ಲೂ ನೂರಾರು ಭಾಗಗಳಿಂದ ಬೇಡಿಕೆಗಳು ಬರುತ್ತಿದ್ದರೆ ನೂರನ್ನೂ ಮಾಡಿಕೊಡುವುದಕ್ಕಾಗುವುದಿಲ್ಲ. ನಮಗೆ ಯಾವುದರಿಂದ ನಾವು ಖರ್ಚು ಮಾಡಿದ ಹಣಕ್ಕೆ ಮೂಲ ಬಂಡವಾಳಕ್ಕೆ ಹೆಚ್ಚಿಗೆ ಉತ್ಪತ್ತಿ ಬರುತ್ತದೋ ಅಂಥ ಬೇಡಿಕೆಯನ್ನು ಮೊದಲು ಮಾಡುವುದು ಸಾಧುವೆಂದು ಎಲ್ಲರಿಗೂ ಗೊತ್ತಿದೆ. ಆದರೆ ಸರ್ಕಾರದ ಈಗಿನ ನೀತಿ ಹೇಗಿದೆ? ಕೇವಲ ಯಾರು ಪದೇ ಪದೇ ಬಂದು ಸರ್ಕಾರದವರನ್ನು ಒತ್ತಾಯ ಪಡಿಸುತ್ತಾರೋ ಅಂಥವರ ಕೆಲಸ ಕಾರ್ಯಗಳೇ ಆಗುತ್ತವೆ. ಮೇಲಿಂದ ಮೇಲೆ ಮಂತ್ರಿಗಳಲ್ಲಿಗೆ ಹೋಗುವುದು ಸರಿಯಿಲ್ಲವೆಂದು ಯಾರು ಭಾವಿಸುತ್ತಾರೋ ಅವರ ಕೆಲಸ ಆಗುವುದೇ ಇಲ್ಲ. ಒಂದು ಡಿಸ್ಟ್ರಿಕ್ಟ್‌ನಲ್ಲಿ ಏಳೆಂಟು ಕ್ಷೇತ್ರಗಳಿದ್ದು, ಒಂದು ಕ್ಷೇತ್ರದಲ್ಲಿ ಎಲ್ಲಾ ಕೆಲಸಗಳೂ ಬಿಟ್ಟುಬಿಡದೆ ಆಗುತ್ತಿದ್ದು, ಮಿಕ್ಕ ಕ್ಷೇತ್ರಗಳಲ್ಲಿ ಏನೂ ಆಗದೆ ಇದ್ದರೆ, ಆ ಕ್ಷೇತ್ರದ ಜನ ಏನು ಹೇಳುತ್ತಾರೆ? ಪಕ್ಕದ ಕ್ಷೇತ್ರದವನು ಚೆನ್ನಾಗಿ ಕೆಲಸ ಮಾಡುವಂಥವನು, ನಮ್ಮ ಕ್ಷೇತ್ರದವನು ಕೈಲಾಗದವನು ಎಂದು ಆಡಿಕೊಳ್ಳುವುದಿಲ್ಲವೇ? ನಾನೂ ಕಳೆದ ನಾಲ್ಕಾರು ವರ್ಷಗಳಿಂದ ನೋಡುತ್ತಿದ್ದೇನೆ. ಬಳ್ಳಾರಿ ಜಿಲ್ಲೆ ಬಹಳ ಹಿಂದುಳಿದಿದೆ. ಮದ್ರಾಸ್ ಪ್ರಾಂತ್ಯದಲ್ಲಿ ಅಲ್ಪಸಂಖ್ಯಾತರಾಗಿದ್ದೆವು; ಅಲ್ಲಿ ನಮ್ಮ ಮಾತುಗಳಿಗೆ ಮಾನ್ಯತೆಯಿಲ್ಲವೆಂದು ತಿಳಿದು ಇಲ್ಲಿ ಬಂದರೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಳ್ಳಬಹುದೆಂಬ ಆಶೋತ್ತರಗಳನ್ನಿಟ್ಟುಕೊಂಡು ಇಲ್ಲಿಗೆ ಬಂದೆವು. ಆದರೆ ದುರ್ದೈವವಶಾತ್ ಇಲ್ಲಿಯೂ ಬಳ್ಳಾರಿಗೇನೂ ಪ್ರಯೋಜನವಾಗಿಲ್ಲ. ಬಡ್ಜೆಟಿನಲ್ಲೇನೋ ಹಣವನ್ನೊದಗಿಸುತ್ತಾರೆ. ಉದಾಹರಣೆಗೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಮೂರು-ನಾಲ್ಕು ರಸ್ತೆಗಳನ್ನು ಕೈಕೊಳ್ಳಬೇಕೆಂದು ಬಡ್ಜೆಟ್ಟಿನಲ್ಲಿ ನಮೂದಿಸಿದ್ದಾರೆ. ಆದರೆ ಅವೊಂದೂ ಕಾರ್ಯಗತವಾಗಿಲ್ಲ. ಹೀಗೆ ಬಡ್ಜೆಟಿನಲ್ಲಿ ಸೇರಿಸಿಯೂ ಮಾಡದೇ ಹೋದರೆ ಯಾವ ಪುರುಷಾರ್ಥಸಾಧನೆಯಾದಂತಾಗುತ್ತದೆ?

ಒಬ್ಬ ಸದಸ್ಯರು.—ನೀವು ಅವರ ಪ್ರೀತಿ ಗಳಿಸಿಕೊಂಡಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ವೇಳೆ ಬಹಳ ಕಡಮೆಯಿರುವುದರಿಂದ, ಮಧ್ಯೆ interrupt ಮಾಡಿ ನಮ್ಮ ವೇಳೆಗೆ ಹಾನಿ ತರುವುದು ಸಭೆಯ ಗೌರವಕ್ಕೆ ಅನುಚಿತಕಾರ್ಯವೆಸಗಿದಂತಾಗುತ್ತದೆಂದು ನಾನು ಭಾವಿಸುತ್ತೇನೆ.

ಸ್ವಾಮಿ, ಕಳೆದ ಸಲ ಲೋಕೋಪಯೋಗಿ ಶಾಖೆಯ ಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಸಂಚಾರ ಮಾಡುವಾಗ ನಮ್ಮ ತಾಲ್ಲೂಕಿನವರು ಬರೆದುಕೊಂಡ ಕೆಲವು ಕಾರ್ಯಗಳನ್ನು ಕೂಡಲೆ ಕಾರ್ಯಗತಮಾಡಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ಹೇಳಿದರು. ಹಣವಿಲ್ಲದ ಕಾರಣದಿಂದ ಸುಮ್ಮನಿರುವುದು ಸರಿಯಲ್ಲ, ಕೆಲಸ ಅಗತ್ಯವಾಗಿದ್ದರೆ ಯಾವ ರೀತಿಯಿಂದಲಾದರೂ ಮಾಡೋಣವೆಂದು ಹೇಳಿದರು. ಆದರೆ ಬಡ್ಜೆಟನ್ನು ನೋಡಿದರೆ ನನ್ನ ಕ್ಷೇತ್ರದಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲವೆಂದು ಕಾಣುತ್ತದೆ. ಅನೇಕ ಸಲ ಇಂಥಿಂಥ ಕೆಲಸಕಾರ್ಯಗಳನ್ನು ಮಾಡಬೇಕೆಂದು ಹೇಳಿ ಮಂತ್ರಿವರ್ಯರುಗಳಿಗೆ ಈ ಜಿಲ್ಲೆಯ ಸಭಾಸದಸ್ಯರು ಮೆಮೊರಾಂಡಂಗಳನ್ನು ಕೊಟ್ಟಿದ್ದೇವೆ. ಅದಕ್ಕೆ ಯಾವ ತರಹ ಲಕ್ಷ್ಯವನ್ನೂ ಕೊಟ್ಟಿಲ್ಲ. ಇದನ್ನು ನೋಡಿ ವ್ಯಸನವಾಗುತ್ತದೆ. ಮಾನ್ಯ ಆರೋಗ್ಯ ಸಚಿವರು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ಅವರ ಜೊತೆಗೆ ನಾನೂ ಇದ್ದೆ. ಹೊಸಪೇಟೆ ಆಸ್ಪತ್ರೆಗೆ ಅವರು ಸಂದರ್ಶನವಿತ್ತರು. ಅಲ್ಲಿ bed strength ಬಹಳ ಕಡಮೆ ಇದ್ದು, ಸ್ಥಳಾವಕಾಶವಿಲ್ಲದೆ ಅನೇಕ ರೋಗಿಗಳು ಕೆಳಗೆ ಮಲಗಿಕೊಂಡಿದ್ದುದನ್ನು

(ಶ್ರೀ ಎಂ. ಎಂ. ಪಾಟೀಲ್)

ಅವರು ಸ್ವತಃ ನೋಡಿಕೊಂಡು ಇದಕ್ಕೆ ಹಣ ಒದಗಿಸಿ ಕೊಡುತ್ತೇನೆಂದು ಹೇಳಿದ್ದರು. ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ಹಾಗೆ ಹಣವನ್ನು ಒದಗಿಸಿದಂತೆ ಕಾಣಲಿಲ್ಲ. ಕೆಲವೊಂದು ಬಾಬುಗಳಲ್ಲಿ lumpsum ಹಣವಿದೆ. ಅದರಲ್ಲಿ ಪ್ರೊವೈಡ್ ಮಾಡುತ್ತಾರೋ ಏನೋ ಗೊತ್ತಿಲ್ಲ. ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು, ಅವರು ಹೇಳಿರುವುದನ್ನು ಪೂರೈಸಿಕೊಡಬೇಕು ಎಂದು.

3 P.M.

ಇದೇ ರೀತಿ ಬಳ್ಳಾರಿ ಜಿಲ್ಲೆಯಲ್ಲಿ ತಾಲ್ಲೂಕಿನ ಯಾವತ್ತು ಹೆಡ್‌ಕ್ವಾರ್ಟರುಗಳಲ್ಲಿ ಈಗಿರತಕ್ಕ ರೂರಲ್ ಆಸ್ಪತ್ರೆಗಳಿಗೆ ಬದಲಾಗಿ ಸರ್ಕಾರಿ ಆಸ್ಪತ್ರೆಗಳನ್ನು ಮಾಡಿ ಬಡಜನರಿಗೆ ಸಹಾಯ ಮಾಡಬೇಕು. ಬಡಜನರಿಗೆ, ತಮ್ಮ ಹಣಕಾಸಿನ ಪರಿಸ್ಥಿತಿಯಿಂದ ದೂರ ವಿರತಕ್ಕ ಪಟ್ಟಣ ಪ್ರದೇಶದಲ್ಲಿ ಹೋಗಿ ತಮ್ಮ ಖಾಯಿಲೆಗಳನ್ನು ತೋರಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ನಮ್ಮ ಜಿಲ್ಲೆಯ ಹೊಸಪೇಟೆ ಮತ್ತು ಬಳ್ಳಾರಿಯಲ್ಲಿ ಮಾತ್ರ ಅಂಥ ದೊಡ್ಡ ಆಸ್ಪತ್ರೆಗಳಿವೆ. ನಮ್ಮ ಜಿಲ್ಲೆ ವಿಸ್ತಾರದಲ್ಲಿ ಬಹಳ ದೊಡ್ಡದಾಗಿದೆ. ಸುಮಾರು ನೂರು ಮೈಲಿಯಷ್ಟು ದೂರದಿಂದ ಜನರು ಬರಬೇಕಾಗುತ್ತದೆ. ಇಷ್ಟು ದೂರದಿಂದ ಬಂದು, ಖಾಯಿಲೆಯನ್ನು ತೋರಿಸಿ ಔಷಧಿಯನ್ನು ತೆಗೆದುಕೊಂಡು ತಮ್ಮ ರೋಗಗಳನ್ನು ನಿವಾರಣೆಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ. ಇದನ್ನೆಲ್ಲ ಗಮನದಲ್ಲಿಟ್ಟು ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿಯೂ ಸರ್ಕಾರಿ ಆಸ್ಪತ್ರೆಗಳನ್ನು ತೆರೆದು ಅಲ್ಲಿ bed strength ಹೆಚ್ಚುಮಾಡಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಹಡಗಲಿ ಪಕ್ಕದಲ್ಲಿರತಕ್ಕ ಒಂದು ಹಳ್ಳಕ್ಕೆ cause-way ಹಾಕಬೇಕಾಗಿದೆ. ಇದನ್ನು ಮಾನ್ಯ ಸಚಿವರಾದ ವೀರಣ್ಣಗೌಡರು ಸ್ವತಃ ನೋಡಿಕೊಂಡು ಬಂದಿದ್ದಾರೆ. ಈ ಹಳ್ಳಕ್ಕೆ ಅಡ್ಡವಾಗಿ ಒಂದು ಒಡ್ಡು ಹಾಕಿರುವುದರ ದೆಸೆಯಿಂದ ನೀರಿನ ಮಟ್ಟ ಹೆಚ್ಚಿದೆ. ಇದರ ದೆಸೆಯಿಂದ ಹಳ್ಳವನ್ನು ದಾಟುವುದಕ್ಕಾಗುವುದಿಲ್ಲ. ಇದರಿಂದ ಬಹಳ ಕಷ್ಟ ಪರಿಸ್ಥಿತಿ ಇದೆ ಎಂದು ಮೇಲಿಂದ ಮೇಲೆ ಹೇಳಿದ್ದೇವೆ. ಇದನ್ನು ಪರಿಶೀಲನೆ ಮಾಡಿ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿಕೊಟ್ಟು ಕೆಲಸವನ್ನು ಕೈಗೊಳ್ಳಬೇಕು. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ್ಗೆ ಅಲಗೂರು, ಚಿಕ್ಕ ಹಗರಿ ಬಳಿ ಒಂದು ಸೇತುವೆ ಹಾಕಬೇಕು ಎಂದು ಒಂದು ಮೆಮೊರಾಂಡಂ ಕೊಟ್ಟಾಗ್ಗೆ ಅಲ್ಲಿ ಒಂದು ಸೇತುವೆ ಆಗಬೇಕಾದ ಅಗತ್ಯವಿರುವುದರಿಂದ ಅದನ್ನು ಮಾಡಿಸಿಕೊಡುತ್ತೇವೆ ಎಂದು ಮಾತು ಕೊಟ್ಟಿದ್ದರು. ಈ ವಿಷಯದಲ್ಲಿ ಅವರಿಗೆ ಮೆಮೊರಾಂಡಂ ಕೊಟ್ಟು ಪತ್ರಗಳನ್ನು ಬರೆದು ಕೇಳಿಕೊಂಡಿದ್ದೇವೆ. ಅದು ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಲ್ಲ. ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ್ಗೆ ಕೆಲವೊಂದು ಏನೇನು ಮಾತುಗಳನ್ನು ವಚನಗಳನ್ನು ಕೊಟ್ಟಿದ್ದಾರೆ ಅವನ್ನು ಪೂರೈಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿ ಹಲವಾಗಲ, ಗರ್ಭಗುಡಿ, ಹಾಬರಡ ಮೂಲಕ ಒಂದು ಹೊಸ ರೋಡ್ ಆಗಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಸಿದ್ದೆ. ಸಾಧ್ಯವಾದಷ್ಟುಮಟ್ಟಿಗೂ ಅದನ್ನು ಮಾಡಿಕೊಡುತ್ತೇವೆಂದು ಹೇಳಿದ್ದರು. ಎಲ್ಲಕ್ಕಿಂತ ಅತಿಮುಖ್ಯವಾದ ಒಂದು ವಿಷಯವನ್ನು ಹೇಳಬೇಕೆಂದರೆ ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಎರೆ ಭೂಮಿ ಇದೆ. ಆ ಜಮೀನಿನಲ್ಲಿ ಹತ್ತಿ ಮತ್ತು ಸೇಂಗಾ ವಿಶೇಷವಾಗಿ ಬೆಳೆಯುತ್ತಿದ್ದಾರೆ. ನಮಗೆ ಹತ್ತಿ ವ್ಯಾಪಾರಕ್ಕೆ ಒಂದು ದೊಡ್ಡ ಮಾರ್ಕೆಟ್ ಎಂದರೆ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಕೇಂದ್ರವಾಗಿದೆ. ಹುಬ್ಬಳ್ಳಿಗೆ ನಮ್ಮಿಂದ ಮಾಲನ್ನು ತೆಗೆದುಕೊಂಡು ಹೋಗಬೇಕಾಗಿದ್ದರೆ ಈಗ ಹರಿಹರದ ಬಳಿ ಇರುವ ಬ್ರಿಡ್ಜ್ ಬಿಟ್ಟರೆ ನಮ್ಮ ಜಿಲ್ಲೆಯಲ್ಲಿ ಇನ್ನೆಲ್ಲಿಯೂ ಬ್ರಿಡ್ಜ್ ಇಲ್ಲ. ಆಕಾರಣ ಹೊಳಲು ಹತ್ತಿರ ಒಂದು ಬ್ರಿಡ್ಜ್ ಆಗಬೇಕೆಂದು ಕೇಳುತ್ತಿದ್ದೇವೆ. ಹಿಂದಿನ ಬೊಂಬಾಯಿ ಸರ್ಕಾರದಲ್ಲಿ ಈ ಸೇತುವೆ ಆಗಬೇಕಾದ ಅಗತ್ಯವಿದೆ ಎಂದು ಒಪ್ಪಿಕೊಂಡಿದ್ದರು. ಇದನ್ನು ನಮ್ಮ ಸರ್ಕಾರದವರು ಕಾರ್ಯಗತ ಮಾಡಬೇಕು. ಇದರಿಂದ ವ್ಯಾಪಾರ ಸೌಲಭ್ಯವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಿದೆ. ನಾವು ಬೆಳೆದ ಮಾಲನ್ನು ಸುಲಭವಾಗಿ ಸಾಗಿಸಿಕೊಂಡು ಹೋಗಲು ಅವಕಾಶವಾಗಿ, ಸಾಗಾಣಿಕೆಯ ಖರ್ಚುಗಳು ಕಡಮೆಯಾಗಿ ರೈತರು ಬೆಳೆದ ಮಾಲಿಗೆ ಹೆಚ್ಚಿನ ಧಾರಣೆ ಬರುವುದರಿಂದ ಜನರ ಆರ್ಥಿಕಮಟ್ಟ ಜಾಸ್ತಿಯಾಗುತ್ತದೆ; ದೇಶದ ಅರ್ಥಿಕ ಸಂಪತ್ತು ಅಭಿವೃದ್ಧಿಯಾಗುತ್ತದೆ. ದೇಶದ ಜನರಿಗೆ ಹೆಚ್ಚು ಅನುಕೂಲವಾಗುವಂಥ, ಇಂಥ ಕಾರ್ಯಗಳನ್ನು ತೀವ್ರವಾಗಿ ಮಾಡಬೇಕೆಂದು ಸೂಚನೆ ಮಾಡಬಯಸುತ್ತೇನೆ.

ಆದರೆ ನಾವು ಒಂದು ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಮನೆಯಲ್ಲಿ ಮೂರು ನಾಲ್ಕು ದಿವಸದಲಾಗಾಯ್ತು ಅನೇಕರು ಅನೇಕ ವಿಷಯಗಳನ್ನು ಹೇಳುತ್ತಿದ್ದಾರೆ. ರಾಜ್ಯ ವಿಸ್ತಾರವಾದ ಮೇಲೆ ನಮ್ಮ ಬೇಡಿಕೆಗಳೂ ಜಾಸ್ತಿ ಪೂರೈಸಲ್ಪಟ್ಟಿಲ್ಲವೆನ್ನುವ ಭಾವನೆ ಇದೆ. ಬೇಡಿಕೆಗಳನ್ನು ಹೆಚ್ಚಿಗೆ ಇಡಬೇಕಾದದ್ದು ಸಹಜ. ಏಕೆಂದರೆ 100-150 ವರ್ಷಗಳಿಂದ ಬ್ರಿಟಿಷರ ಆಡಳಿತದಲ್ಲಿದ್ದ ನಾವು ಯಾವ ಅಭಿವೃದ್ಧಿ ಕಾರ್ಯಗಳನ್ನೂ ಮಾಡಿಕೊಳ್ಳದೆ ಇರುವುದರ ದೆಸೆಯಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿ ಹತ್ತು ವರ್ಷಗಳಾದಮೇಲೆ ನಾವು ಏನು ಸಂಪಾದನೆ ಮಾಡಿದೆವು ಎಂದು ಯೋಚನೆ ಮಾಡಿದಾಗ್ಗೆ ನಾವು ಸಂಪಾದನೆ ಮಾಡಿದ್ದು ಏನೂ ಸಾಲದು ಎಂದು ಕಾಣುತ್ತದೆ. ಅದರಲ್ಲಿಯೂ ಕೂಡ ಒಂದು ವರ್ಷದಲಾಗಾಯ್ತು ಹೊಸ ಸಂಸ್ಥಾನವಾಗಿದೆ. ಹೊಸ ಸಂಸ್ಥಾನವಾದಮೇಲೆ ಆಡಳಿತ ನಡೆಸತಕ್ಕವರಿಗೆ ಯಾವ ಯಾವ ಕಷ್ಟಗಳು ಬರುತ್ತವೆನ್ನುವುದನ್ನು ಕೂಡ ನಾವು ಸೂಕ್ಷ್ಮವಾಗಿ ವಿಚಾರ ಮಾಡಬೇಕು. Services integration ಆಗಬೇಕಾದರೆ ಅನೇಕ ಕಾನೂನುಗಳನ್ನು ಸಮನ್ವಯ ಮಾಡಬೇಕಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಆಡಳಿತದ ಜವಾಬ್ದಾರಿ ಜಾಸ್ತಿ ಇರುತ್ತದೆ, ಆಡಳಿತದಲ್ಲಿ ಕಷ್ಟಗಳಿರುತ್ತವೆ. ಒಂದು ರೀತಿಯಲ್ಲಿ ಇಂಥ ಕಷ್ಟಗಳಲ್ಲಿಯೂ ಕೂಡ ಕೆಲವೊಂದು ಅಭಿವೃದ್ಧಿ ಕಾರ್ಯಗಳನ್ನು ಧೈರ್ಯವಾಗಿ ಮಾಡಿದ್ದಾರೆ ಮತ್ತು ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಿದ್ದಾರೆ. ಒಂದು ವರ್ಷದ ಕೆಳಗೆ ಕೊರತೆ ಬಡ್ಜೆಟ್ ಇದ್ದುದನ್ನು ಈ ವರ್ಷ surplus budget ಮಾಡಿ 14 ಲಕ್ಷ ರೂಪಾಯಿಗಳಷ್ಟು ಉಳಿತಾಯ ತೋರಿಸಿದ್ದಾರೆ. ಇದು ಈಗಿನ ಸರ್ಕಾರದ ಆಡಳಿತ ದಕ್ಷತೆಯಿಂದ ಆಗಿದೆ ಎನ್ನುವುದನ್ನು ಅರಿತುಕೊಳ್ಳಬೇಕಾಗುತ್ತದೆ.

ಸ್ವಾಮಿ, ನಾನು ಇನ್ನೂ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಮುಂದೆ ತರಬೇಕೆಂದಿದ್ದೆ. ಆದರೆ ನನಗೆ ಸಮಯ ಸಿಕ್ಕದೆ ಇರುವ ದೆಸೆಯಿಂದ, ನನ್ನ

ಭಾಷಣವನ್ನು ಅಷ್ಟು ಬೆಳೆಸಲಿಕ್ಕೆ ಹೋಗುವುದಿಲ್ಲ. ಅದಕ್ಕೆ ಪೂರ್ವದಲ್ಲಿ, ಒಂದು ಬಹು ಮುಖ್ಯವಾದ ವಿಷಯವನ್ನು ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ಅದು ಯಾವುದೆಂದರೆ, ನಾವು ಬಹುದಿವಸದಿಂದಲೂ ಕೂಡ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ, ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿರತಕ್ಕಂಥ ಈ ಭೂಸಮಸ್ಯೆಯನ್ನು ಹೋಗಲಾಡಿಸುತ್ತೇವೆಂದು ಹೇಳಿದ್ದೇವೆ. ಅದನ್ನು ಸಾಧಿಸಲಾಗಿಲ್ಲವೆಂದು ನನ್ನ ಆ ಕಡೆಯ ಮಿತ್ರರು ಟೀಕೆ ಮಾಡುತ್ತಾ ಇದ್ದಾರೆ. ನಾನು ಆ ಟೀಕೆಗಳನ್ನು ಸ್ವಾಗತ ಮಾಡುತ್ತಾ, ಆ ಸ್ನೇಹಿತರಿಗೆ ಹೇಳಬೇಕಾಗಿದೆ. ಈ ಭೂ ಸಮಸ್ಯೆಯನ್ನು ಪರಿಹರಿಸುವ ಕಾರ್ಯಕ್ರಮಗಳಲ್ಲಿ ಸ್ವಲ್ಪ ನಿಧಾನವಾಗಿದೆಯೆಂದು. ಈಗ ನಮ್ಮ ಮುಂದೆ ಜತ್ತಿ ಸಮಿತಿಯವರ ಭೂ ಸುಧಾರಣಾ ವರದಿ ಬಂದಿದೆ. ನಾನು ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಕೆಲವು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ: "ಈ ವರದಿಯನ್ನು ನಾವು ಒಪ್ಪುವುದಿಲ್ಲ, ಇದರಿಂದ ಭೂ ಹಿಡುವಳಿ ಕಡಮೆಯಾಗುತ್ತದೆ. ಆಹಾರದ ಉತ್ಪನ್ನ ಕಡಮೆಯಾಗುತ್ತದೆ" ಎಂದು. ಭೂರಹಿತನಾದವನು ಜಮೀನು ಸಾಗುಮಾಡುತ್ತಿರುವುದರಿಂದ, ಅಂತಹ ಗೇಣಿಗೆ ಮಾಡಿರುವ ಜಮೀನುಗಳಲ್ಲಿ ಹೆಚ್ಚು ಉತ್ಪನ್ನ ಮಾಡಲಿಕ್ಕೆ ಸಾಧ್ಯವಿಲ್ಲ. ಒಡೆತನ ಇರದ ದೆಶೆಯಿಂದ, ಜಮೀನಿಗೆ ಬೇಕಾದ ಗೊಬ್ಬರ ವಗೈರೆ, ಹಾಕಿಕೊಳ್ಳಲಿಕ್ಕೆ ಆಗುವುದಿಲ್ಲ. ಭೂಮಾಲೀಕನು ಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಹಣ ಕೊಡದೆ ಇರುವುದರಿಂದ ರೈತನು ಅವನ ಹಣವನ್ನು ಉಪಯೋಗಿಸಬೇಕಾದ ಪರಿಸ್ಥಿತಿ ಇದೆ. ರೈತನು ಅವನ ಹಣವನ್ನು ಜಮೀನಿಗೆ ಉಪಯೋಗಿಸಿದರೆ, ಮುಂದಿನ ವರ್ಷ ಅವನು ಹೆಚ್ಚಿನ ಗೇಣಿಯನ್ನು ಕೊಡಲಿಲ್ಲವೆಂದು ಭೂಮಾಲೀಕನು ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬಹುದು, ರೈತನು ಜಮೀನನ್ನು ಬಿಡುವ ಪರಿಸ್ಥಿತಿ ಬರಬಹುದು. ರೈತನಿಗೆ ಜಮೀನು ಅಭಿವೃದ್ಧಿಪಡಿಸೋಣವೆಂದರೆ ತಕ್ಕ ರಕ್ಷಣೆ ಇಲ್ಲ. ಭೂಮಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಸಕಲ ಸಾಧನ ಸಲಕರಣೆಗಳನ್ನು ಒದಗಿಸಿಕೊಂಡು ಆಹಾರೋತ್ಪತ್ತಿಯನ್ನು ಹೆಚ್ಚಿಸುವ ಅವಕಾಶವಿರಬೇಕಾದರೆ, ಈ ಕಾನೂನು ಜಾರಿಗೆ ಬರಬೇಕು ಎಂದು ನಿವೇದನ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು ನನಗೆ ಇಷ್ಟೊಂದು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಸ್ವಾಮಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಸಾಧಾರಣವಾಗಿ ಹತ್ತು ವರ್ಷಕ್ಕೆ ಮೇಲ್ಪಟ್ಟಾದರೂ, ಕೆಲವು ಸಣ್ಣಸಣ್ಣ ಅನುಕೂಲತೆಗಳು ನಮ್ಮ ಗ್ರಾಮಾಂತರ ಜನರಿಗೆ ಇನ್ನೂ ಸಿಕ್ಕಿಲ್ಲ. ಈಗ್ಯೆ 30-40 ವರ್ಷಗಳ ಹಿಂದೆ ಜನಸಂಖ್ಯೆ ಎಷ್ಟಿತ್ತೋ, ಅದರ ಎರಡರಷ್ಟು ಜನಸಂಖ್ಯೆ ಈಗ ಹಳ್ಳಿಗಳಲ್ಲಿ ಬೆಳೆದಿದೆ. ಆದ್ದರಿಂದ ಗ್ರಾಮಗಳಲ್ಲಿ ಮೊದಲನೆಯ ಕೆಲಸ ಆಗಬೇಕಾದ್ದು ಯಾವುದೆಂದರೆ: ಗ್ರಾಮಠಾಣೆ ಸಲುವಾಗಿ ಜಾಗೆ ಒದಗಿಸಿ ಕೊಡಬೇಕು. ಹಳ್ಳಿಯ ಜನರು ಈ ಸಂಬಂಧದಲ್ಲಿ ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟು ಈಗಾಗಲೆ 10-12ವರ್ಷಗಳೂ ಆಗಿದ್ದರೂ,ಅವರ ಬೇಡಿಕೆಗಳು ಇನ್ನೂ ಕಾರ್ಯಗತವಾಗದೆ ಹಾಗೆಯೇ ಉಳಿದಿವೆ. ಆದ್ದರಿಂದ ಮಾನ್ಯ ಮಂತ್ರಿಗಳಾಗಲಿ, ಸಭೆಯ ನಾಯಕರಾಗಲಿ, ಗ್ರಾಮಗಳಿಗೆ ಹೋಗಿ ಖರೆಯಾಗಿ ನೋಡಿದರೆ ಅಲ್ಲಿ ಸ್ಥಳಾಭಾವದ ಪರಿಸ್ಥಿತಿ ಹೇಗಿದೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳು ಖುದ್ದಾಗಿ ಬಂದರೆ ಆ ಕುಂದು ಕೊರತೆಯ ನಿವಾರಣೆಯಾಗುತ್ತದೆ. ಇಲ್ಲದಿದ್ದರೆ ನಮ್ಮ ಕೆಲಸ ಆಗುವುದಿಲ್ಲ ಎನ್ನುವ ಸಂಶಯ ಬಂದಿದೆ. ರಾಷ್ಟ್ರೀಯ ವಿಸ್ತರಣ ಕಾರ್ಯಗಳ ಸಂಬಂಧದಲ್ಲಿ, ಗ್ರಾಮ ಸುಧಾರಕರೂ, ಡೆವಲಪ್‌ಮೆಂಟ್ ಅಧಿಕಾರಿಗಳೂ, ಗ್ರಾಮಗಳಲ್ಲಿ ಮನೆಗಳು ಬೇರೆಬೇರೆಯಾಗಿ ಇರಬೇಕು, ತಿಪ್ಪೆಗಳನ್ನು ಊರ ಹೊರಗೆ ಹಾಕಬೇಕೆಂದು ಹಳ್ಳಿಯವರಿಗೆ ಹೇಳಿದ್ದಾರೆ. ಗ್ರಾಮದ ಮಧ್ಯೆ ತಿಪ್ಪೆ ಹಾಕಬಾರದು. ಆದರೆ ಹಳ್ಳಿಯವನಿಗೆ ಊರಿನ ಹೊರಗೆ ಒಂದು ಗೇಣು ಜಾಗವಿಲ್ಲ. ಊರಿನ ಹೊರಗೆ ತಿಪ್ಪೆ ಹಾಕುವುದಕ್ಕೆ ಸ್ವಲ್ಪ ಸ್ಥಳವೂ ಇಲ್ಲದ್ದರಿಂದ, ಕೆಲವು ಗ್ರಾಮಗಳವರು ಊರೊಳಗೇ ಅದನ್ನು ಹಾಕುತ್ತಾರೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಗ್ರಾಮಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳುವ ಸಲುವಾಗಿ ತಕ್ಷಣ ಗ್ರಾಮಠಾಣೆ ವಿಸ್ತರಣಾ ಕೆಲಸವನ್ನು ತೆಗೆದುಕೊಳ್ಳಬೇಕು. ಸರ್ಕಾರದವರು ಈ ಕೆಲಸವನ್ನು ಮೊದಲು ತೆಗೆದುಕೊಳ್ಳಬೇಕು. ಇವೊತ್ತು ಅರ್ಜಿ ಕೊಟ್ಟರೆ, ಅದು ಫೈಲ್‌ನಲ್ಲಿ ಹತ್ತು ವರ್ಷ ಇರುತ್ತದೆ. ಆದ್ದರಿಂದ ದಯೆಯಿಟ್ಟು ಇಂಥ ಕೆಲಸವನ್ನು ತೀವ್ರವಾಗಿ ತೆಗೆದುಕೊಂಡು ಹಳ್ಳಿಯ ಜನರಿಗೆ ಮನೆಕಟ್ಟಲು ಹಾಗು ತಿಪ್ಪೆ ಹಾಕಿಕೊಳ್ಳಲಿಕ್ಕೆ ಜಾಗ ಒದಗಿಸಿಕೊಡಬೇಕು.

ಎರಡನೆಯದಾಗಿ ಒಕ್ಕಲುತನದ ಬಗ್ಗೆ ಈಗಾಗಲೆ ನಮ್ಮ ಸರ್ಕಾರದಿಂದ ಸ್ವಲ್ಪ ಕಾರ್ಯನಡೆದಿದೆ. ಹೈದರಾಬಾದ್ ಕರ್ಣಾಟಕದಲ್ಲಿ ಒಕ್ಕಲುಗಳಿಗೆ ಸರಿಯಾದ ಗೊಬ್ಬರ ಮತ್ತು ಟ್ರಾಕ್ಟರುಗಳು ಇಲ್ಲದೆ ವ್ಯವಸಾಯದ ಅಭಿವೃದ್ಧಿ ಕುಂಠಿತ ಆಗಿ ಬಿಟ್ಟಿದೆ. ಸರ್ಕಾರ ಈ ವಿಚಾರವನ್ನು ಕೂಡಲೆ ಪರಿಶೀಲನೆಗೆ ತೆಗೆದುಕೊಂಡು, ಒಡ್ಡು ಕೆಲಸ ಯಥಾ ಪ್ರಕಾರ ಪುನಃ ಪ್ರಾರಂಭವಾಗುವಂತೆ, ಹಾಗು ಟ್ರ್ಯಾಕ್ಟರನ್ನು ಕರದಿಂದ ಹೊಡೆಯುವ ವ್ಯವಸ್ಥೆ ಮಾಡುವುದರ ಮೂಲಕ, ಏರ್ಪಾಡುಗಳನ್ನು ಮಾಡಬೇಕು. ತಕಾವಿ ಕೇವಲ ಹಣ ಕೊಡುವದರಿಂದ ನಮ್ಮ ಆಹಾರೋತ್ಪನ್ನದ ಪ್ರಮಾಣ ಬದಲಾವಣೆಯಾಗುವುದಿಲ್ಲ. ರೈತರಿಗೆ, 200, 300 ಸಾವಿರ ರೂಪಾಯಿಯವರೆಗೆ ಕೊಟ್ಟರೂ ಉಪಯೋಗವಾಗುವುದಿಲ್ಲ. ಹಣದಲ್ಲಿ ಹೆಚ್ಚಿನ ಭಾಗವನ್ನು ಟ್ರ್ಯಾಕ್ಟರ್ ಹೊಡಿಲಿಕ್ಕೂ ಬೀಜ ಗೊಬ್ಬರ ರೂಪವಾಗಿ ಕೊಡಲಿಕ್ಕೂ ಉಪಯೋಗಿಸಬೇಕು. ತಕಾವಿ ಹಣದಲ್ಲಿ ಒಂದು ರೂಪಾಯಿನಲ್ಲಿ ಹತ್ತು ಆಣೆಯನ್ನು ಮೇಲೆ ಹೇಳಿದ ರೀತಿಯಲ್ಲಿ ದೊರಕಿಸಿಕೊಟ್ಟು, ಮಿಕ್ಕ ಆರು ಆಣೆಯನ್ನು ಮಾತ್ರ ಕ್ಯಾಷ್ ರೂಪದಲ್ಲಿ ರೈತರಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಭಾವಿಗಳನ್ನು ತೋಡುವ ಸಲುವಾಗಿ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೊಡಬೇಕು. 1957-1958ನೆ ಸಾಲಿನಲ್ಲಿ ನಮ್ಮ ಕುಷ್ಟಗಿ ತಾಲ್ಲೂಕಕ್ಕೆ ಸರಕಾರದಿಂದ ಭಾವಿ ತೆಗೆಯಲು ಏನೂ ಹಣ ಕೊಟ್ಟಿರುವದಿಲ್ಲ. ಮತ್ತೆ ಹಾಗೆ ಕೊಟ್ಟ ಹಣ ಸರಿಯಾಗಿ ವಿನಿಯೋಗಿಸಲ್ಪಡುತ್ತಿದೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷಿಸಬೇಕು. ಇದಕ್ಕಾಗಿ ಮೇಲ್ಪಟ್ಟ ಅಧಿಕಾರಿಗಳು ಮೇಲಿಂದ ಮೇಲೆ ನಡೆದಿರುವ ಕಾರ್ಯಗಳನ್ನು ಚೆಕ್ ಮಾಡಬೇಕು. ಇನ್ನೂ ನಮ್ಮ ತಾಲೂಕಿನಲ್ಲಿ ಭಾವಿ ತೆಗೆದು ನೀರಾವರಿಮಾಡಲು1957-1958ನೆ ಸಾಲಿನಲ್ಲಿ ನೂರಾರು ಅರ್ಜಿಗಳು ಸರ್ಕಾರಕ್ಕೆ ಬಂದಿದ್ದವು. ಅವುಗಳು ಇದುವರೆಗೂ ಮಂಜೂರಾಗದೆ ಹಾಗೆಯೇ ಇವೆ.

(ಶ್ರೀ ಇ. ಪುಂಡಲೀಕಪ್ಪ)

ನಮ್ಮ ತಾಲ್ಲೂಕಿಗೆ ತುಂಗಭದ್ರಾ ಯೋಜನೆಯ ಸೌಲಭ್ಯ ಇರುವುದಿಲ್ಲ. ಕಾರಣ ಹೆಚ್ಚಿನ ಹಣವನ್ನು ಭಾವಿ ತೆಗೆಯಲು ರೈತರಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ವಿದ್ಯಾಭ್ಯಾಸ ದೃಷ್ಟಿಯಿಂದ ನಮ್ಮ ಹೈದರಾಬಾದ್ ಕರ್ಣಾಟಕ ಯಾವಾಗಲೂ ಹಿಂದುಳಿದ ಪ್ರದೇಶವೆಂದು ಹೇಳಲಾಗಿದೆ. ಅದು ಅಲ್ಲ. ಯಾವಾಗಲೂ ನಮ್ಮ ಪ್ರದೇಶ ಕಡೆಗಣಿಸಿದ ಪ್ರದೇಶವಾಗಿ ಹೋಗಿದೆ. ಹಾಗೆ ಕಡೆಗಣಿಸದೆ, ನಮ್ಮ ಪ್ರದೇಶಕ್ಕೆ ವಿದ್ಯಾವಸತಿ ಸಲುವಾಗಿ ಸಾಕಷ್ಟು ಅನುಕೂಲತೆಗಳನ್ನು ಒದಗಿಸಿ ಕೊಡಬೇಕು. ಆ ಪ್ರದೇಶದಲ್ಲಿ ಎರಡು ಸಾವಿರ ಜನ ಸಂಖ್ಯೆಗೆ ಒಂದು ಸ್ಕೂಲ್ ಇದೆ. ಹಾಗು 40 ಸಾವಿರ ಜನ ಸಂಖ್ಯೆಗೆ ಒಂದು ಮಿಡಲ್ ಸ್ಕೂಲು ಇದೆ ಇನ್ನೊಂದು ಕಡೆ, ಬೊಂಬಾಯಿ ಕರ್ಣಾಟಕದಲ್ಲಿ ನೋಡಿದರೆ ಇನ್ನೊಂದು ಪ್ರಮಾಣದಲ್ಲಿದೆ. ಮೈಸೂರಿನಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಶಾಲೆಗಳಿವೆ. ಆದ್ದರಿಂದ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಕನಿಷ್ಟಪಕ್ಷ 500 ಜನಸಂಖ್ಯೆಗೆ ಒಂದು ಪ್ರಾಥಮಿಕ ಶಾಲಾ 15 ಸಾವಿರ ಜನಸಂಖ್ಯೆಗೆ ಒಂದು ಮಿಡ್ಲ ಸ್ಕೂಲು, 20 ಸಾವಿರ ಜನಸಂಖ್ಯೆಗೆ ಒಂದು ಹೈಸ್ಕೂಲು ಆಗಬೇಕೆಂದು ನಾನು ಸರ್ಕಾರಕ್ಕೆ ಸೂಚಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 160 ಗ್ರಾಮುಗಳ ಪೈಕಿ ಕೇವಲ 75 ಗ್ರಾಮುಗಳಲ್ಲಿ ಪ್ರಾಥಮಿಕ ಶಾಲೆಗಳು ಇವೆ. ಆದ್ದರಿಂದ ಬೊಂಬಾಯಿ ಕರ್ನಾಟಕ ಮತ್ತು ಮೈಸೂರು ಭಾಗಗಳಲ್ಲಿ ಯಾವ ರೀತಿ ಪ್ರತಿಯೊಂದು ಗ್ರಾಮದಲ್ಲೂ ಕೂಡ ಶಾಲೆಗಳು ಇವೆಯೋ ಆ ರೀತಿ ಹೈದರಾಬಾದು ಕರ್ನಾಟಕದಲ್ಲೂ ಶಾಲೆಗಳ ವ್ಯವಸ್ಥೆ ಆಗಬೇಕೆಂದು ಸರ್ಕಾರದವರಿಗೆ ನಿರ್ಬಂಧವಾಗಿ ಹೇಳುತ್ತೇನೆ.

ಮೂರನೆಯದಾಗಿ, ಔಷಧೋಪಚಾರ. ಹೈದರಾಬಾದು ಕರ್ನಾಟಕದಲ್ಲಿ ಕೇವಲ ಒಂದು ತಾಲ್ಲೂಕಿಗೆ ಒಂದು ದವಾಖಾನೆ ಇದೆ. ಬೇರೆ ಕಡೆಯಲ್ಲಿರುವಂತೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ದವಾಖಾನೆಗಳ ವ್ಯವಸ್ಥೆ ಆಗಬೇಕು. ಈಗ ಹಳ್ಳಿಯೊಳಗೆ ಎಷ್ಟೋ ಜನರು ನಮ್ಮ ರೈತ ಬಾಂಧವರಿಗೆ ಔಷಧ ಕೊಡುತ್ತಾ ಇದ್ದಾರೆ. ಅಂತಹ ಜನರಿಗೂ ಕೂಡ ಪ್ರೋತ್ಸಾಹ ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ಸಾರ್ವಜನಿಕ (ಆನಂದ ಸೇವಾ ಟ್ರಸ್ಟು) ಸಂಸ್ಥೆ ಇದೆ. ಅದು ತನ್ನ ಕಾರ್ಯಕ್ಷೇತ್ರದಲ್ಲಿ ಆಯುರ್ವೇದದ ರೀತ್ಯ ಒಂದು ಕಾಲೇಜನ್ನು ತೆಗೆಯಬೇಕೆಂದು ಒಂದು ಸ್ಕೀಂ ಇಟ್ಟುಕೊಂಡಿದ್ದೆ. ಅದನ್ನು ಮಂತ್ರಿಗಳ ಮುಂದೆ ಇಟ್ಟಿದ್ದರು, ಆಗ ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಸಾರಿಗೆ ಸೌಕರ್ಯದ ವಿಷಯ. ನಮ್ಮ ತಾಲ್ಲೂಕು ಪೂರ್ವ, ಪಶ್ಚಿಮ 60 ಮೈಲಿ ಉತ್ತರ ದಕ್ಷಿಣ 20 ಮೈಲಿ ಇದೆ. ಇಂಥ ಪ್ರದೇಶದಲ್ಲಿ ಕೇವಲ 20 ಮೈಲಿ ಮಾತ್ರ ರಸ್ತೆ ಇದೆ, ಬಾಕಿ ಭಾಗಗಳಲ್ಲಿ ರಸ್ತೆಯೇ ಇಲ್ಲ. ಆದ್ದರಿಂದ ನಮ್ಮ ಪ್ರದೇಶದಲ್ಲಿ ರಸ್ತೆ ಸೌಕರ್ಯ ಹೆಚ್ಚಿಗೆ ಆಗಬೇಕು. ಮತ್ತು ಈ ವರ್ಷದ ಬಡ್ಜೆಟ್‌ನಲ್ಲಿ ತೆಗೆದುಕೊಂಡಂಥ ಕೆಲಸಗಳನ್ನು ತೀವ್ರ ಗತಿಯಿಂದ ಮಾಡಿ ಪೂರೈಸಬೇಕು. ಹಿಂದೆ ಹೈದರಾಬಾದ್ ಸರ್ಕಾರದವರು ತೆಗೆದುಕೊಂಡಂಥ ಕುಷ್ಟಗಿ ತ್ಯಾಗಿಗುಂಪಾ ಕಾರ್ಯಗಳು ಇದುವರೆಗೂ ಇನ್ನೂ ಕಾರ್ಯಗತವಾಗಿಲ್ಲ. ಮಾನ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಂಡಿದ್ದರೂ ಕೂಡ ಅದು ಹಾಗೆಯೇ ಇದೆ. ಅದೂ ಕೂಡ ತೀವ್ರಗತಿಯಿಂದ ಆಗಿ ನಮ್ಮ ತಾಲ್ಲೂಕಿನ ನಾಲ್ಕು ಕಡೆ ಭಾಗಕ್ಕೂ ರಸ್ತೆ ಸೌಕರ್ಯ ಮಾಡಿಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಈಗ ತೆಗೆದುಕೊಳ್ಳಬೇಕಾದ ರಸ್ತೆಗಳು ಕೆಳಗೆ ಕಾಣಿಸಿದ ಪ್ರಕಾರ ಇದೆ. ಕುಷ್ಟಗಿ-ಕೊಪ್ಪಳ-ವಿಡು ಬೆಯಾರ್‌ವರಿಗೆ ಆಗಿದೆ ಮುಂದೆ ಕೊಪ್ಪಳವರಿಗೂ ತೆಗೆದುಕೊಳ್ಳಬೇಕು. ಸಣ್ಣರಸ್ತೆಗಳು (1) ಗೂಡೂರು ಸಿಟಿ (2) ಮುರಡಿ ಕಾಲಕಾಲೇಶ್ವರ್ (3) ಉಲ್ಯಾಳ ವಿಲಕಲ್ಲ-ವಾಯಾ-ಹುಲಗೋರು (4) ಹನುಮಸಾಗರ್ ವಿಲ್ಹಾಳ ಇವು ಸಣ್ಣ ರಸ್ತೆಗಳಿಂದ ರಾಯಚೂರ್, ಬಿಜಾಪುರ, ಧಾರವಾಡ ಜಿಲ್ಲಾಕ್ಕೆ ಹೆಚ್ಚು ಸಂಬಂಧ ಬೆಳೆಯುತ್ತದೆ.

ಸಹಕಾರ ಸಂಘಗಳು. ಈಗ ದೇಶದಲ್ಲಿ ಪ್ರತಿಯೊಂದೂ ಕೂಡ ಸಹಕಾರ ಸಂಘಗಳ ಮೂಲಕವೇ ನಡೆಯಬೇಕು, ಆದರಿಂದಲೇ ದೇಶ ಮುಂದಕ್ಕೆ ಬರಬೇಕೆಂದು ನಮ್ಮ ಸರ್ಕಾರದ ಆಶಯವಾಗಿದೆ. ಈ ಸಹಕಾರ ಸಂಘಗಳ ವಿಚಾರ ಹೇಳುವುದಾದರೆ, ಜನರು ಹಣ ಒಟ್ಟುಗೂಡಿಸಿ ನಾಲ್ಕಾರು ತಿಂಗಳಾದರೂ ಕೂಡ ಸೊಸೈಟಿಗಳು ರಿಜಿಸ್ಟರ್ ಆಗುವುದಿಲ್ಲ. ಸೊಸೈಟಿಗಳ ಮೂಲಕ ರೈತರು ಹಣವನ್ನು ಸಾಲವಾಗಿ ಪಡೆಯಬೇಕೆಂದರೆ ಸಕಾಲಕ್ಕೆ ಸಿಕ್ಕುವುದಿಲ್ಲ. ಸುಗ್ಗಿಯ ವೇಳೆಯಲ್ಲಿ ದುಡ್ಡು ಕೊಟ್ಟರೆ ಅದರಿಂದ ಪ್ರಯೋಜನವಾಗುವುದಿಲ್ಲ. ಅದ್ದರಿಂದ ಭೂಮಿಗೆ ಬೀಜ ಬೀಳುವದಕ್ಕೆ ಮೊದಲೆ ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಸಹಕಾರಿ ಸಂಘಗಳ ಮೂಲಕ ಹಣ ಸಿಕ್ಕುವುದೂ ಕೂಡ ತೀವ್ರ ಗತಿಯಿಂದ ಆಗಬೇಕು. ಮತ್ತು ಒಕ್ಕಲಿಗರಿಗೆ ವೇಳೆಗೆ ಸರಿಯಾಗಿ ಹಣ ಸಿಕ್ಕುವಂತಹ ವ್ಯವಸ್ಥೆ ಆಗಬೇಕು. ಹೈದ್ರಾಬಾದ್ ಕರ್ನಾಟಕದಲ್ಲಿ ಸಹಕಾರಿ ಸಂಘದಲ್ಲಿ ಸಾಲ ತೆಗೆದುಕೊಳ್ಳಬೇಕಾದರೆ ರಿಜಿಷ್ಟ್ರಾರ್ ಆಫೀಸಿನಲ್ಲಿ ಬಂದು ರಿಜಿಷ್ಟರ್ ಮಾಡಿಸಿಕೊಡಬೇಕಾಗುತ್ತದೆ. ಇದರಿಂದ ರೈತನು 30-40 ಮೈಲಿ ಆಫೀಸಿಗೆ ಬರಬೇಕಾದರೆ ಬಹಳ ಕಷ್ಟ. ಆದ್ದರಿಂದ ಮುಂಬೈ ಕರ್ನಾಟಕದಲ್ಲಿ ರಿಜಿಸ್ಟರ್ ಪದ್ಧತಿ ಏನು ಅದೆಯೋ ಅದನ್ನೇ ಇಲ್ಲಿಯೂ ಜಾರಿಗೆ ಕೊಡಬೇಕು.

ಇನ್ನು ಸಣ್ಣ ಕೈಗಾರಿಕೆಗಳ ವಿಚಾರ ಹೇಳುವುದಾದರೆ, ನಮ್ಮ ಹಳ್ಳಿಗಳಲ್ಲಿ ಅನೇಕ ಸಣ್ಣ ಸಣ್ಣ ಕೈಗಾರಿಕೆಗಳು ಇವೆ. ಇದರ ಸಲುವಾಗಿ ನಮ್ಮ ಸರ್ಕಾರದವರು ಲಕ್ಷ ಗಟ್ಟಲೆ ಹಣವನ್ನು ಸಾಲವಾಗಿ ಕೊಡುತ್ತಾರೆ. ಆದರೆ ಈ ಸಾಲ ಕೊಡುವ ಪ್ರೊಸೀಜರ್ ನೋಡಿದರೆ ಬಹಳ ತೊಂದರೆ ಇದೆ. ಸಿಕ್ಕುವುದೇ ಕಷ್ಟ. ಯಾವನಾದರೂ ಒಬ್ಬ ಬಡಗಿ ಬಂದು 100 ರೂಪಾಯಿ ಸಾಲಪಡೆಯಬೇಕೆಂದರೆ ಅವನು ಇರುವ ಕಡೆಯಿಂದ ಆಫೀಸಿಗೆ ಬಂದು ತೆಗೆದುಕೊಳ್ಳಲಿಕ್ಕೆ 20 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಸಾಧಾರಣವಾಗಿ ಒಂದು ಫಾರಂ ಭರ್ತಿ ಮಾಡಬೇಕಾದರೆ ಅನೇಕ ವಿಷಯಗಳನ್ನು ತಿಳಿಸಬೇಕಾಗುತ್ತದೆ. ಇಂತಹ ಅನೇಕ ಫಾರಂಗಳು ಇರುತ್ತವೆ. ಆದ್ದರಿಂದ ಈ ಕೈಗಾರಿಕೆಗಳನ್ನು ಬೆಳವಣಿಗೆಮಾಡುವ ದೃಷ್ಟಿಯಿಂದ ನಮ್ಮ ಸರ್ಕಾರದವರು ಆದಷ್ಟು ಆಯಾ ತಾಲ್ಲೂಕಾಗಳಲ್ಲಿ ಸಣ್ಣ ಕೈಗಾರಿಕೆ ಜನರಿಗೆ ಸಾಲಸಿಗುವಂತೆ ಮಾಡಿದಲ್ಲಿ ಕೈಗಾರಿಕೆಗೆ ಉತ್ತೇಜನ ಕೊಟ್ಟಂತಾಗುತ್ತದೆಂದು ಆ ರೀತಿ ವ್ಯವಸ್ಥೆಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಲೋಕಲ್ ಬೋರ್ಡ್ ಡೆವಲಪ್‌ಮೆಂಟ್ ವರ್ಕ್ಸ ಬೇಕಾದಷ್ಟು ನಡೆಯುತ್ತಿವೆ.

ಕೆಲಸಮಾಡಿಸುವವರು ಮಾಡಿಸುತ್ತಾರೆ ಬಿಲ್ ಪಾಸ್ ಆಗುತ್ತದೆ. ಎಷ್ಟು ವರ್ಷ ಆದರೂಕೂಡ ಓವರ್ ಸೀಯರು ಮತ್ತು ಲೋಕಲ್ ಇಂಜಿನಿಯರು ಹೋಗಿ ಕೆಲಸ ಸರಿಯಾಗಿ ಆಗಿದೆಯೋ ಎಂಬುದನ್ನು ನೋಡುವುದಿಲ್ಲ. ಅದೂ ಅಲ್ಲದೆ ಎಷ್ಟೋ ಕಡೆಗಳಲ್ಲಿ ಆಗಬೇಕಾದ ಕೆಲಸ ಆಗದೇ ಹಾಗೆಯೇ ನಿಂತುಹೋಗಿದೆ ಅದರಿಂದ ಎಷ್ಟೋ ಕಡೆ ದುಡ್ಡು ಕೂಡ ಲ್ಯಾಪ್ಸ್ ಆಗುತ್ತಿದೆ. ಆದಕಾರಣ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ವಿಷಯಕ್ಕೆ ಹೆಚ್ಚು ಮನಸ್ಸು ಹಾಕಬೇಕು. ಸರಿಯಾಗಿ ಕೆಲಸ ಆಗುವಂತೆ ನೋಡಬೇಕು. ಇನ್ನು ಕೆಲವು ಕಡೆ ಅರ್ಧ ಕೆಲಸ ಆಗಿರುತ್ತದೆ, ಹಣ ಕೊಡುವುದಿಲ್ಲ. ಅಂತಹ ಸಂದರ್ಭದಲ್ಲಿ ಓವರ್‌ಸೀಯರು ಹೋಗಿ ಬಿಲ್‌ಪಾಸ್ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಕೆಲಸ ಆಗದೆ ಹೋದ ಪಕ್ಷದ ಹಳ್ಳಿ ಜನರಿಗೆ ಬಹಳ ಬೇಜಾರಾಗಿ ಎಷ್ಟು ಹುರುಪಿನಿಂದ ಕೆಲಸ ಕಾರ್ಯಗಳು ಆಗಬೇಕೋ ಅಷ್ಟು ಹುರುಪಿನಿಂದ ಆಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಹೆಚ್ಚು ಗಮನಕೊಟ್ಟು ಹಳ್ಳಿಯಲ್ಲಿ ಆಗಬೇಕಾದ ಕೆಲಸಗಳು ತೀವ್ರವಾಗಿ ಆಗುವಂತೆ ಮಾಡಲು ಕೆಳಗಿನ ಅಧಿಕಾರಿಗಳಿಗೆ ಮೇಲಿಂದ ಮೇಲೆ ಬರೆಯಬೇಕೆಂದು ಅವರಿಗೆ ನಮ್ರತಾಪೂರ್ವಕವಾಗಿ ವಿನಂತಿಮಾಡಿಕೊಳ್ಳುತ್ತೇನೆ. 1958-1959 ಬಜೆಟ್ಟಿನಲ್ಲಿ ಸೇರಿಸಿದ ಕೆಲಸಗಳನ್ನು ಮೇಲಿಂದ ಮೇಲೆ ಮಂತ್ರಿಗಳು ನೋಡಿ ಅವು ಕಾರ್ಯಗತ ಆಗುವ ಹಾಗೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇಷ್ಟು ಹೇಳಿ ನಾಲ್ಕು ಮಾತುಗಳನ್ನಾಡಲಿಕ್ಕೆ ನನಗೆ ಅಧ್ಯಕ್ಷರು ಪರವಾನಗಿ ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಗಳನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Smt. VIJAYA RAGHAVENDRA RAO (Chitapur).—Mr. Speaker, Sir, I rise to welcome the surplus budget for 1958-59. Despite the fact that the Government has focussed its attention on Agriculture and Food in the First Plan, limited knowledge has been achieved as far as the almost inexhaustible source of valuable food from the sea is concerned. Mysore now exhibits a coast line of about 200 miles. The annual production of fish is approximately estimated to be a lakh and fifty-five thousand tons. Even then, let me invite the attention of the Government to the revenue and expenditure estimates of Fisheries. The former is Rs. 2.58 lakhs and the latter is about Rs. 53.33 lakhs. Actually, the development of fisheries should yield better results as far as revenue is concerned. The fall in revenue may be due to the lack of mechanised fishing thereby limiting the field of operation and resulting in the poor production of fish. An equally important factor responsible for the unsatisfactory results of our fishing is the lack of proper management of the fish trade. Add to this the conservative nature of our fisherman and his socio-economic conditions. The industry is further handicapped by lack of control over the price and distribution of fish. The increase in the revenue will soon be felt if the basic needs of the industry, namely, mechanised fishing, supply of ice and cold storage facilities are supplied.

The budget estimate for 1957-58 for the exploration of minerals was Rs. 7.88 lakhs as against the revised estimate for the same year of Rs. 5.31 lakhs. This difference, as the Government says, is due to the non-implementation of the scheme. This is not fair at least with regard to the scientific departments. The Government believes in the industrialisation of the country and the basis of any major industry is nothing but science. In this connection, I would like to say that the disparity between the scientists in the Universities and those in administrative positions should be minimised. In this connection, we should also realise that familiarity in research means an experience in observation, disciplined analysis and application of knowledge which improves the value of an administrator. So, the scientists with research experience must be taken into the laboratories of big industries.

Thirdly, the increase in the forest expenditure is due to conservancy and work. The budget estimate is Rs. 136.17 lakhs. I appreciate this. This provision also includes the expenditure in connection with wild life preservation work. It is well known to all interested in wild life that there is quick need to preserve these species. Some of them such as the lion, the tiger and cheetah are becoming extinct. So, our State should help in the preservation of these wild fauna and leave it to the nature to develop in its own phase. The estimate of expenditure may be higher than this. We should put a stop to the destruction of the wild fauna.

In the education field, I am particularly interested in the Vocational Institutes for ladies. In Gulbarga there is

(SMT. VIJAYA RAGHAVENDRA RAO)

one vocational institute and that is the only institute of that kind in that area. The budget estimate for this institute is about Rs. 18,700. Now here in the budget speech our Finance Minister has mentioned nothing regarding the construction of a building for this institute. Of course, this institute is not having either a building or the hostel facilities. If the latter were there, the ladies from Raichur and Bidar Districts would have gone to Gulbarga and taken advantage of this institute. This institute trains ladies in tailoring, cooking, leather work, painting, etc. I, therefore, feel that the Government should reconsider this estimate.

With these few words, I thank the Chair for having given me an opportunity to take part in this debate.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನಾಲ್ಕು ಮಾತುಗಳ ನ್ನಾಡಲು ನನಗೆ ಅವಕಾಶಕೊಟ್ಟಿದ್ದಕ್ಕೆ ತಮಗೆ ಕೃತಜ್ಞನಾಗಿದ್ದೇನೆ. ಅನೇಕ ಸದಸ್ಯರು ಈಗಾಗಲೇ ಮಾತನಾಡಿ ಆಯವ್ಯಯ ಪಟ್ಟಿಯ ಮೇಲೆ ಟೀಕೆ ಮಾಡಿದ್ದಾರೆ. ನನಗೆ ಕೊಟ್ಟಿರತಕ್ಕ ವೇಳೆ ಕಡಮೆಯಾಗಿದೆ. ಆದರೂಕೂಡ ನಾಲ್ಕು ಮಾತುಗಳನ್ನು ಹೇಳುತ್ತೇನೆ. ನಮ್ಮ ಅರ್ಥಸಚಿವರಾದ ಶ್ರೀ ಟಿ. ಮರಿಯಪ್ಪನವರ ಆರೋಗ್ಯ ಚೆನ್ನಾಗಿ ಇರದೇಇದ್ದರೂಕೂಡ ಬಹಳ ಶ್ರಮ ತೆಗೆದುಕೊಂಡು ಈ ವರ್ಷದ ಬಡ್ಜೆಟ್ಟನ್ನು ತಯಾರುಮಾಡಿದ್ದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ನಮ್ಮ ರಾಜ್ಯದ ಆದಾಯ ಸುಮಾರು 30 ಕೋಟಿ ರೂಪಾಯಿ. ಇದರಲ್ಲಿ 27 ಕೋಟಿ ರೂಪಾಯಿ ಸಂಬಳಸಾರಿಗೆಗೆ ಆಗಿಹೋಗುವುದು. ಉಳಿದ ಹಣ ಸಾಲದರೂಪದಲ್ಲಿ ಪಡೆಯಲಾಗುತ್ತಿದೆ. ಇದು ಸತ್ಯವಾಗಿರತಕ್ಕ ಮಾತು. ಆದುದರಿಂದ ಯಾವ ಕೆಲಸಕ್ಕೂ ಏನು ಹೇಳಿದರೂ ಸರಕಾರ ಹಣ ಇಲ್ಲಎಂದು ಹೇಳುವುದು ಆಗಿದೆ. ಹೀಗಾದರೆ ದುಡ್ಡು ಎಲ್ಲಿಂದ ಬರುತ್ತದೆ ? ಸರ್ಕಾರ ಆಡಳಿತ ಖರ್ಚ ಕಡಮೆಮಾಡಿ ದೇಶದಲ್ಲಿ ಉತ್ಪತ್ತಿ ಜಾಸ್ತಿಮಾಡಬೇಕು. ಇನ್ನು ಸ್ಟೋರ್‌ಪರ್ಚೆಸ್ ಕಮಿಟಿ ವಿಚಾರ ಹೇಳುತ್ತೇನೆ. ಸರಕಾರಕ್ಕೆ ಬೇಕಾಗುವ ಸಾಮಾನುಗಳನ್ನು ಈ ಸ್ಟೋರ್ ಪರ್ಚೇಜ ಕಮಿಟಿ ಕೊಳ್ಳುತ್ತದೆ. 10 ಲಕ್ಷ ರೂಪಾಯಿ ಬೆಲೆಬಾಳುವ ಔಷಧವನ್ನು ಟೆಂಡರ್ ಕರೆಯದೆ ಕೊಂಡುಕೊಂಡಿದೆ. ಇದರ ಅರ್ಥವೇನು ? ವಿರೋಧಿ ಪಕ್ಷದವರು ಸುಳ್ಳುಹೇಳುತ್ತಾರೆ ಎಂದು ಅನ್ನುವುದು ತಪ್ಪು. ಸರ್ಕಾರವನ್ನು ದೂಷಿಸಬೇಕೆಂದು ನಾನು ಹೇಳುತ್ತಿಲ್ಲ. ಸರ್ಕಾರದ ಆಡಳಿತದಲ್ಲಿ ಸರ್ಕಾರದ ಕಣ್ಣಿಗೆ ಕಾಣದೆ ಅನಾಹುತ ತಪ್ಪುಗಳು ನಡೆಯುತ್ತಾ ಇವೆ. ಇದನ್ನೆಲ್ಲಾ ನೋಡಿದರೆ ತೋಳಕ್ಕೆ ಕುರಿ ಕಾಯಿ ಎಂದರೆ ನನಗೆ ಸಂಬಳ ಬೇಡ ಅಂದಿತು ಎಂದ ಹಾಗೆ ಇದೆ. ತಪ್ಪುಮಾಡಿದವರನ್ನು ಬಲಿಹಾಕಬೇಕು. ಸರ್ಕಾರದಲ್ಲಿ ಜನರ ವಿಶ್ವಾಸ ಇಲ್ಲದಂತಾಗಿದೆ ಎಂದು ಅನಿಸುತ್ತದೆ. ಇಂಥ ಕೆಲಸಗಳ ಬಗ್ಗೆ ಜಾಗ್ರತೆ ಕೂಲಂಕಷ ಪರೀಕ್ಷೆ ಮಾಡಿಸಿ ವಿಚಾರಣೆ ನಡೆಸಿ ಅನ್ಯಾಯಮಾಡಿದವರ ಮೇಲೆ ಕೂಡಲೇ ಯೋಗ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು N.E.S. ಅಂದರೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬಗ್ಗೆ ಹೇಳುವದಾದರೆ ಅಲ್ಲಿ ತುಂಬ ಲೋಪದೋಷಗಳು ಇವೆ. ಕಾಫಿ ಕುಡಿಯುವುದಕ್ಕೆ, ನಾಯಿಗೆ ಖಾಯಿಲೆಯಾದರೆ ಆಸ್ಪತ್ರೆಗೆ ಜೀಪ್ ತೆಗೆದುಕೊಂಡುಹೋಗುತ್ತಾರೆ. ಆಸ್ಪತ್ರೆಯಿಂದ ಔಷಧಿ ತರಲು ಜೀಪ್ ಕಳಿಸುತ್ತಾರೆ. ಈ ರೀತಿ ಕೆಲಸ ನಡೆದಿದೆ. ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ social organisers ಅಂದರೆ ಸಾಮಾಜಿಕ ಶಿಕ್ಷಣ ವ್ಯವಸ್ಥಾಪಕರು ಇದ್ದಾರೆ. ಚಿಕ ಚಿಕ್ಕ ಹೆಣ್ಣು ಮಕ್ಕಳು ಬಿ.ಎ., ಬಿ.ಎಸ್‌ಸಿ., ಆದಕೂಡಲೇ ಹಳ್ಳಿಗಳಿಗೆ ಹೋಗಿ ಯಾವ ಅನುಭವವೂ ಇಲ್ಲದೆ ಏನು ತಾನೆ ಕೆಲಸ ಮಾಡಬಲ್ಲರು ? ಈ ಕೆಲಸಕ್ಕೆ ಕೊಂಚ ವಯಸ್ಸಾದವರನ್ನು 30-40 ವರ್ಷ ಅನುಭವವಿದ್ದವರನ್ನು ನೇಮಿಸಿಕೊಳ್ಳಬೇಕು. ಈ B.D.O. V.L.W. ಇವರ ಜೊತೆಗೆ ಇಂಥ ಚಿಕ್ಕ ಹೆಣ್ಣುಮಕ್ಕಳು ಪಕ್ಕದಲ್ಲಿ ಕುಳಿತುಕೊಂಡರೆ, ಸ್ವಲ್ಪ ಆಲೋಚನೆಮಾಡಬೇಕು, ಸ್ವಾಮಿ. ಇದನ್ನೆಲ್ಲಾ ಹೇಳುವುದು ಬಹಳ ಕಷ್ಟವಾಗುತ್ತದೆ. ಬಹಳ ಅನಾಹುತ ಆಗುತ್ತಾ ಇದೆ. ಆದುದರಿಂದ ದಯವಿಟ್ಟು ಸರಕಾರ ಇದನ್ನು ಗಮನಿಸಬೇಕು.

3-30 P.M.

ತುಮಕೂರು ಜಿಲ್ಲೆಯ ಅಗ್ರಿಕಲ್‌ಚರ್ ಡಿಪೋದಲ್ಲಿ 43,900 ರೂಪಾಯಿಗಳ ಮಿಸ್-ಅಪ್ರೋಪ್ರಿಯೇಷನ್ ಆಗಿದೆಯೆಂದು ಒಪ್ಪಿಕೊಂಡರು. ಆದರೆ ಇವೊತ್ತಿನವರೆಗೂ ಅದಕ್ಕೆ ಕಾರಣವೇನು ? ಅದು ಯಾರಿಂದ ಆಯಿತು ಎಂಬುದು ಗೊತ್ತಾಗಲಿಲ್ಲ. ಹಣ ತಿಂದು ಹಾಕಿದವರು ಒಳ್ಳೆಯ ಅನುಕೂಲವಾಗಿದ್ದಾರೆ. ಯಾರೋ ತಪ್ಪಿತಸ್ತರಲ್ಲದವರನ್ನು ಸೆಷನ್ಸಗೆ ಗುರಿಮಾಡಿದರು. ಆದರೆ ಅಲ್ಲಿದ್ದ ಜಡ್ಜಿಗಳು ಸರಿಯಾಗಿ ನ್ಯಾಯವಾಗಿ ತೀರ್ಮಾನಮಾಡಿದರು. ಯಾರಮೇಲೆ ದೂರು ಹೊರಿಸಲ್ಪಟ್ಟಿದೆಯೋ ಅವರೇನೂ ತಪ್ಪುಮಾಡಿದಂತೆ ಕಾಣುವುದಿಲ್ಲವೆಂದು ಹೇಳಿ ಅವರಿಗೆ ಶಿಕ್ಷೆ ವಿಧಿಸದೆ ಬಿಟ್ಟುಬಿಟ್ಟರು. ಈ ತರಹ ಯಾರೋ ತಪ್ಪುಮಾಡಿದರೆ ಯಾರಿಗೋ ಶಿಕ್ಷೆ ಮಾಡುತ್ತಿರುವುದರಿಂದ ಯೋಗ್ಯರಿಗೆ ಅವಕಾಶವೇ ಇಲ್ಲದಂತಾಗಿದೆ. ಇದರಿಂದ ಬಹಳ ತೊಂದರೆಯಾಗಿದೆ.

ಸಹಕಾರ ಸಂಘಗಳ ಇಲಾಖೆ ತೆಗೆದುಕೊಂಡರೆ ತುಮಕೂರು ಡಿಸ್ಟ್ರಿಕ್ಟಿನ ಕೋ-ಆಪರೇಟಿವ್ ಸೊಸೈಟಿಗಳು ಕೆಲವು ಜನರ ಆಸ್ತಿಯಾಗಿಹೋಗಿವೆ. ಇವುಗಳಲ್ಲಿ ಬೇಕಾದಷ್ಟು ಹಣ ದುರುಪಯೋಗವಾಗಿದೆ. ಎಂಟು ಹತ್ತು ವರ್ಷಗಳಿಂದ ಸೊಸೈಟಿಗಳ ಲೆಕ್ಕಗಳು ಆಡಿಟ್ ಆಗಿಲ್ಲ. ಬೇಕಾದವರಿಗೆ ಮಾತ್ರ ಷೇರುಗಳು ದೊರೆಯುತ್ತಿವೆ. ಇದನ್ನು ಸರಿಪಡಿಸಬೇಕು.

ಎನ್. ಇ. ಎಸ್. ವಿಚಾರ ನೋಡಿದರೆ ಕಂಟ್ರಾಕ್ಟರುಗಳನ್ನು ಅಡ್ವೈಜರಿ ಕಮಿಟಿಗಳ ಸದಸ್ಯರನ್ನಾಗಿ ಮಾಡಿದ್ದಾರೆ. Contractors are M.L.As, M. L. As. are contractors.

Sri H. S. RUDRAPPA (Minister for Agriculture).—Whether directly or indirectly they are liable to be punished.

Sri G. N. PUTTANNA.—It is not an easy task for ordinary people to prove

these things. I am prepared to prove before the Government that such a thing has happened and I say this is not for the good of the country but it is for the ruination of the country. They are carrying on indirectly. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಈ ದಿವಸ ನಾನು ಹತ್ತು ಜನ ಅಡ್ವೈಸರಿ ಕಮಿಟಿ ಮೆಂಬರುಗಳು ಕಂಟ್ರಾಕ್ಟರುಗಳಾಗಿರುವುದನ್ನು ತೋರಿಸುತ್ತೇನೆ. Some M. L. A.s are indirectly contractors. M.Ps are indirectly contractors and if the officers in-charge of N.E.S. block do not prepare fabulous estimates charging Rs. 2,500 for a work which could be done for Rs. 1,030 they will be sacked. There are instances where people have attacked the executive officers.

Administration of justice. ಈಗ ಇರುವ ಚೀಫ್ ಜಸ್ಟಿಸ್‌ಅವರು ಬಂದಮೇಲೆ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ಚೆನ್ನಾಗಿ ನಡೆಯುತ್ತಿದೆ. ಇದನ್ನು ನಾವು ಮೆಚ್ಚಿಕೊಳ್ಳಬೇಕು; ವ್ಯಥಾ ಟೀಕೆ ಮಾಡಬಾರದು. ಆದರೆ ಒಂದು ತಪ್ಪಿದೆ. ತಿಪಟೂರಿನಲ್ಲಿ ಮುನ್ಸೀಫ್ ಕೋರ್ಟು, ಮ್ಯಾಜಿಸ್ಟ್ರೇಟ್ ಕೋರ್ಟು ಈ ಎರಡಿದ್ದೂ ಮ್ಯಾಜಿಸ್ಟ್ರೇಟರನ್ನು ತೆಗೆದು ಮುನ್ಸೀಫ್ ಮ್ಯಾಜಿಸ್ಟ್ರೇಟರೆಂದು ಒಬ್ಬರನ್ನು ನೇಮಿಸಿದರು. ಈಗಿರುವ ಒಬ್ಬರು ಬೆಳಗಿನಿಂದ ಸಾಯಂಕಾಲದವರೆಗೆ ಕೆಲಸಮಾಡಿದರೂ ಸಹ ಕೇಸುಗಳ ಸಂಖ್ಯೆ ಕಡಮೆಯಾಗುತ್ತಿಲ್ಲ. ಐದೂವರೆ ಗಂಟೆಯವರೆಗೆ ಈಗಿರುವ ಮುನ್ಸೀಫರು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಆದರೂ ಕೇಸುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಒಬ್ಬರು ನಿಭಾಯಿಸಲು ಸಾಧ್ಯವಿಲ್ಲದೆ ಜನಗಳಿಗೆ ಬಹಳ ತೊಂದರೆಯಾಗಿದೆ. ಕಕ್ಷಿಗಾರರು 11 ಗಂಟೆಗೆ ಸರಿಯಾಗಿ ಕೋರ್ಟಿಗೆ ಬರದಿದ್ದರೆ ಕೇಸು ಡಿಸ್‌ಮಿಸ್ ಆಗುತ್ತದೆ. ಜನರು ಕೋರ್ಟಿನ ಕೆಲಸ ಮುಗಿಸಿಕೊಂಡುಹೋಗುವ ವೇಳೆಗೆ ಬಹಳ ನಿಧಾನವಾಗುವುದರಿಂದ ಅವರಿಗೆ ತಮ್ಮ ಊರುಗಳಿಗೆ ವಾಪಸು ಹೋಗಲು ಬಸ್ಸುಗಳು, ರೈಲುಗಳು ಸಿಕ್ಕದೆ ವರಾಂಡಗಳಲ್ಲಿ ಮಲಗಬೇಕಾಗುತ್ತದೆ. ಅಲ್ಲಿ ಬಹಳ ಹಳೆಯ ಕೇಸುಗಳು ಪೆಂಡಿಂಗ್ ಆಗಿವೆಯೆಂದು ಹೇಳುತ್ತಾರೆ. ಅಲ್ಲಿನ ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೂ ಮತ್ತು ಜನರಿಗೂ ಹೆಚ್ಚು ಕಷ್ಟವಿರುವುದರಿಂದ ಈ ವಿಚಾರವನ್ನು ನೋಟ್‌ಮಾಡಿಕೊಂಡು ತನಿಖೆಮಾಡಿ ಸರಿಯಾದ ವ್ಯವಸ್ಥೆಮಾಡಬೇಕೆಂದು ಸೂಚಿಸುತ್ತೇನೆ

ಆಮೇಲೆ ಪೋಲೀಸ್ ಇಲಾಖೆ. ಈಗ ಈ ಇಲಾಖೆಯ ಮಂತ್ರಿಗಳು ಹಾಜರಿಲ್ಲ. ಈಗಿರುವ ಐ.ಜಿ.ಪಿ. ಬಹಳ ಯಶಸ್ವಿಯಾಗಿ ಕೆಲಸಮಾಡಿದವರು ಎಂದು ಕೇಳಿದ್ದೇವೆ. ಆದರೆ ಅನಾರೋಗ್ಯದ ಕಾರಣ, ಕಾಲು ಸರಿಯಾಗಿಲ್ಲದಿರುವುದರಿಂದ ಎದ್ದುನಿಂತುಕೊಳ್ಳುವುದಕ್ಕೆ ಕೂಡ ಸಾಧ್ಯವಿಲ್ಲ, ಸರಿಯಾಗಿ ಕೆಲಸ ನಿರ್ವಹಿಸಲು ಅವಕಾಶವಿಲ್ಲವಾಗಿದೆ. He is unfit to be an officer. ಯಾರಾದರೂ ದೊಡ್ಡ ಮನುಷ್ಯರು ಹೋಗಿ ಪೋಲೀಸು ಇಲಾಖೆ ಉನ್ನತ ಅಧಿಕಾರಿಗಳಿಗೆ ಒಂದು ಸಮಾಚಾರ ಹೇಳಿದರೆ ಅದನ್ನು ಸರಿಯಾಗಿ ಪರಿಶೀಲಿಸುವುದಿಲ್ಲ. ಹೇಳಿದವರಿಗೇ ತೊಂದರೆಮಾಡುತ್ತಾರೆ. ಹೇಳಿದ ಸಮಾಚಾರವನ್ನು ಗುಟ್ಟಾಗಿಟ್ಟು ಸರಿಯಾಗಿ ತನಿಖೆ ನಡೆಸದೆ ಕೈಕೆಳಗಿನವರಿಗೆ ಹೇಳಿಬಿಡುತ್ತಾರೆ. ಎಲ್ಲೂ ಈ ರೀತಿ ಮಾಡುವುದಿಲ್ಲ The I.G.P. was a man with a good reputation some years ago. But not now. ತುರುವೇಕೆರೆ ತಾಲ್ಲೂಕಿನಲ್ಲಿ ಒಬ್ಬ ಪೋಲೀಸು ಇನ್‌ಸ್ಪೆಕ್ಟರು ಆರ್ಬಿಟ್ರೇಷನ್‌ಗೆ ಸ್ಟೈನ್‌ಮಾಡಿ ಮನೆ ಹಾಳುಮಾಡಿದ್ದಾನೆ; ಒಬ್ಬ ಸಬ್-ಇನ್‌ಸ್ಪೆಕ್ಟರು ಒಬ್ಬ ಹೆಂಗಸಿನ ಮಾಂಗಲ್ಯ ಕೀಳಿಸಿದ್ದಾನೆ. ಅದರಮೇಲೆ ಕೇಸೂ ಆಗಿದೆ. ಹತ್ತು ಅರ್ಜಿ ಕೊಟ್ಟರೂ, ಮಂತ್ರಿಗಳಿಗೆ ಹೇಳಿದರೂ ಏನೂ ಆಗಿಲ್ಲ. ಈಚೆಗೆ ಸಿವಿಲ್ ಲಿಟಿಗೇಷನ್ ಜಾಸ್ತಿಯಾಗಿದೆ. ಕೆಲವು ಗ್ರಾಮಗಳಲ್ಲಿ ಲೂಟಿಮಾಡುತ್ತಿದ್ದಾರೆ. ಕೇಳುವವರೇ ಇಲ್ಲ. ಬೇರ್ ಡ್ರೆಸ್‌ನಲ್ಲಿ ದಾಬಸ್‌ಪೇಟೆಗೆ ನನ್ನ ಜೊತೆಯಲ್ಲಿ ಬನ್ನಿ, ಅಲ್ಲಿಂದ ತುಮಕೂರಿಗೆ ಸಾರಾಯಿ ತೆಗೆದುಕೊಂಡುಹೋಗುತ್ತಿರುವುದನ್ನು ತೋರಿಸುತ್ತೇನೆ. Drinking is severe. Corruption is going on undetected and if Government is not capable of detecting, I am quite prepared to help. But there must be safety for my person and property.

ಇನ್ನೊಂದು ಸೋಷಿಯಲ್ ಆರ್ಗನೈಜೇಷನ್ ಎಂದು ಸರ್ಕಾರಮಾಡಿದೆ. ಅಲ್ಲಿ ಕೆಲಸಮಾಡುವ ಹೆಂಗಸರಿಗೆ ಅದರ ಕೆಲಸ ಗೊತ್ತಾಗುವುದಿಲ್ಲ. ಹೀಗಾಗಿ ಈ ಬಗ್ಗೆ ಖರ್ಚುಮಾಡುತ್ತಿರುವ ಲಕ್ಷಾಂತರ ರೂಪಾಯಿ ಅನ್ಯಾಯವಾಗುತ್ತಿದೆ.

ಕೈಗಾರಿಕೆಗಳ ವಿಚಾರ. ಕಪಿಲಾ ಟೆಕ್ಸ್‌ಟೈಲ್ಸ್‌ಗೆ 40 ಲಕ್ಷ ರೂಪಾಯಿ ಹಾಕಿದ್ದಾರೆ. ಅಲ್ಲಿ ಎರಡೂವರೆ ಸಾವಿರ ಜನ ಕೆಲಸಮಾಡುತ್ತಿದ್ದರು. ನಂಜನಗೂಡಿನಲ್ಲಿ ಅದನ್ನು ಈಗ ಮುಚ್ಚಿ ಅಲ್ಲಿನ ಕೆಲಸಗಾರರಿಗೆ ಅನ್ನವಿಲ್ಲದಂತೆಮಾಡಿದ್ದಾರೆ. ಅದರಲ್ಲಿ ಸರ್ಕಾರದ ಹತ್ತು ಲಕ್ಷ ಹಣವಿದೆ. ಕೆಲವು ದೊಡ್ಡ ಮನುಷ್ಯರು ಈ ರೀತಿ ಮಾಡಿ ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದಾರೆಂದು ತಿಳಿದುಬಂದಿದೆ. ಅದನ್ನು ಮೂರು ದಿವಸ ನಡೆಸಿ ನಾಲ್ಕನೆಯ ದಿವಸದಿಂದ ನಿಲ್ಲಿಸುತ್ತಾರೆ. ಇದು ಅನ್ಯಾಯ. ಹೀಗೆ ಮಾಡಿದರೆ ದೇಶಾಭಿವೃದ್ಧಿಯಾಗುವುದಿಲ್ಲ. ಕಾರ್ಮಿಕರಿಗೆ ಸ್ವಾತಂತ್ರ್ಯ, ಸೌಕರ್ಯ ಯಾವ ದೇಶದಲ್ಲಿಲ್ಲವೋ ಆ ದೇಶ ಊರ್ಜಿತವಾಗುವುದಿಲ್ಲ.

ಪಬ್ಲಿಕ್ ವರ್ಕ್ಸ್ ಇಲಾಖೆ ವಿಚಾರ ನೋಡಿದರೆ ಬಹಳ ಅನ್ಯಾಯವಾಗುತ್ತಿದೆ, ಅದಕ್ಕೆ ಬೇಕಾದರೆ ರುಜುವಾತು ಕೊಡುತ್ತೇನೆ. ಅಸಿಸ್ಟೆಂಟ್ ಇಂಜಿನಿಯರೇ ತಮಗೆ ಬೇಕಾದ ಕಂಟ್ರಾಕ್ಟರನ್ನಿಟ್ಟುಕೊಂಡು ಕೆಲಸಮಾಡಿಸುತ್ತಿದ್ದಾರೆ. ಇದರಿಂದ ಹಣ ಪೋಲಾಗುವುದು ವಿಪರೀತವಾಗಿದೆ. ಬೇರೆಯವರನ್ನು ನೆಪಮಾತ್ರಕ್ಕಿಟ್ಟು ಅಸಿಸ್ಟೆಂಟ್ ಇಂಜಿನಿಯರೇ ಕಂಟ್ರಾಕ್ಟ್ ನಡೆಸಿದರೆ ಹೇಗೆ? ಈ ದಿವಸ ಒಂದು ಕೆಲಸಕ್ಕೆ ಪ್ರಾರಂಭಮಾಡಿದರೆ ಕೆಲಸಮುಗಿಯುವುದಕ್ಕೆ ಎಂಟು ಹತ್ತು ವರ್ಷ ಆಗಬೇಕು. ಕಂಟ್ರಾಕ್ಟರು ವಲಸೆ ಹೋದಹೊರತು ಕೆಲಸವಾಗುವುದಿಲ್ಲ. ಇಲ್ಲದಿದ್ದರೆ ಇನ್‌ಫ್ಲುಯೆನ್ಸ್ ಇರಬೇಕು. ಇವುಯಾವುದೂ ಇಲ್ಲದಿದ್ದರೆ ಕೆಲಸವಾಗುವುದಿಲ್ಲ. ಇನಾಂ ಗ್ರಾಮಗಳಲ್ಲಿ ಕೆರೆಕಟ್ಟೆ ಒಡೆದು ಎಷ್ಟೋ ವರ್ಷಗಳಾಗಿದ್ದರೂ ಅದನ್ನು ರಿಪೇರಿಮಾಡುವುದೇ ಇಲ್ಲ. ಇನಾಂ ಗ್ರಾಮವಾಗಲಿ, ಸರ್ಕಾರಿ ಗ್ರಾಮವಾಗಲಿ, ಎಲ್ಲಿ ಕೆರೆ ಒಡೆದರೂ ಇಂಜಿನಿಯರಿಂಗ್ ಇಲಾಖೆ ರಿಪೇರಿಮಾಡುತ್ತದೆಂದು ಮೊನ್ನೆ ಮರಾಮತ್ ಇಲಾಖೆ ಮಂತ್ರಿಗಳು ಹೇಳಿದರು. ಆದರೆ ಜೋಡಿಗ್ರಾಮದ ಕೆರೆ ರಿಪೇರಿ ಕೆಲಸ ಇಂಜಿನಿಯರಿಂಗ್ ಇಲಾಖೆ ಕೈಗೊಳ್ಳುವುದಿಲ್ಲವೆಂದು ನನಗೆ ಆ ಇಲಾಖೆಯಿಂದ ಎಂಡಾರ್ಸ್‌ಮೆಂಟ್ ಬಂದಿದೆ.

(SRI G. N. PUTTANNA)

ಸರ್ಕಾರಿ ಗ್ರಾಮ ಮತ್ತು ಇನಾಂ ಗ್ರಾಮಗಳಿಗೆ ವ್ಯತ್ಯಾಸವಿಲ್ಲವೆಂದು ಸಚಿವರು ಹೇಳುತ್ತಾರೆ ಆದರೆ ಹತ್ತು ವರ್ಷಗಳಿಂದ ಅರ್ಜಿಕೊಟ್ಟರೂ ಇನ್ನೂ ಜೋಡಿ ಗ್ರಾಮಗಳ ಕೆರೆಗಳ ಕಡೆಗೆ ಗಮನಕೊಟ್ಟಿಲ್ಲ. ಮಂತ್ರಿಗಳು ದಯವಿಟ್ಟು ಈ ಕಡೆ ಗಮನ ಕೊಡಬೇಕು.

ಮೆಡಿಕಲ್ ಇಲಾಖೆ ತೆಗೆದುಕೊಂಡರೆ ತುಮಕೂರಿನಲ್ಲಿ ಬಹಳ ಒಳ್ಳೆಯ R.M.O. ಇದ್ದಾರೆ. ಅಂಥವರು ಹತ್ತು ಜನ ಎಲ್ಲಾ ಇಲಾಖೆಗಳಲ್ಲೂ ಇದ್ದರೆ ಕೆಲಸ ಚೆನ್ನಾಗಿ ನಡೆಯುತ್ತದೆ. ಅಂಥವರನ್ನು ತುಮಕೂರಿನಲ್ಲಿಟ್ಟಿರುವುದಕ್ಕಾಗಿ ಸರ್ಕಾರಕ್ಕೆ ನಾವು ಚಿರ ಋಣಿಗಳಾಗಿದ್ದೇವೆ, ಅವರು ಆಸ್ಪತ್ರೆಯಲ್ಲಿ ಬೇಕಾದ ಔಷಧಿಯಿಲ್ಲದಿದ್ದರೆ ಕೈಯಿಂದ ದುಡ್ಡುಕೊಟ್ಟು ಔಷಧಿ ತಂದುಕೊಡುತ್ತಾರೆ. ತುಮಕೂರಿನ D.M.O. ಸಹ ಒಳ್ಳೆಯವರು. ಹಾಗಿರುವಾಗ ತುಮಕೂರಿನ R.M.O. and D.M.O. ಮೇಲೆ ಯಾರೋ ದೂರನ್ನಿತ್ತಿದ್ದಾರೆ. ಅದನ್ನು ಕೇಳಿ ಬಹಳ ಸಂಕಟವಾಯಿತು.

ಪಬ್ಲಿಕ್ ಹೆಲ್ತ್ ಇಲಾಖೆಯಲ್ಲಿ ರೋಡ್ ಗ್ಯಾಂಗ್ ಅಥವಾ ರೋಡ್ ಕೂಲಿಗಳೆಂದು 30 ಜನರಿದ್ದರೆ ಆಕ್ಚುಯಲ್ಲಾಗಿ ಅಲ್ಲಿ ಕೆಲಸಮಾಡುವವರು 15 ಜನ ಮಾತ್ರ. ಹೀಗೆ ಮಾಡಿ ತಿಂಗಳ ಕೊನೆಗೆ ಉಳಿದ ಹಣ ಹಂಚಿ ಕೊಂಡು ಹಬ್ಬ ಮಾಡಿಕೊಳ್ಳುತ್ತಾರೆ. ಪ್ರೈವೇಟ್ ಆಗಿ ಸಮಾಚಾರ ತಿಳಿಸುತ್ತೇನೆ; ಕ್ರಮ ಕೈಕೊಳ್ಳಬೇಕು.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ನಾನು ಮಾತನಾಡಬೇಕೆಂದಿದ್ದೇನೆ. ಈ ಸಂದರ್ಭದಲ್ಲಿ ನಮ್ಮ ಫೈನಾನ್ಸ್ ಮಂತ್ರಿಗಳು ಇಲ್ಲವಲ್ಲ! ಈ ಇಲಾಖೆಯಲ್ಲಿ ಎಷ್ಟೋ ಜನ ಅನ್ಯಾಯ ನಡೆಸುತ್ತಿದ್ದಾರೆ. ಬೆಂಗಳೂರು ಸಿಟಿ ಒಂದರಲ್ಲೇ 50 ಲಕ್ಷ ರೂಪಾಯಿಗಳ leakage ಇದೆಯೆಂದು ನಾನು ಹೇಳಬಲ್ಲೆ. 'ಸಮಯ ಬಂದಾಗ ನೋಡಿ ಭಕ್ಷಿಸಿ' ಎನ್ನುವವರಿಗೆ ಈ ಇಲಾಖೆ ಸರಿಯಾಗಿದೆ. ಕೆಲವು ದಿನಗಳ ಹಿಂದೆ ನನ್ನ ಪ್ರಶ್ನೆಗೆ ಎಕ್ಸೈಸ್ ಮಂತ್ರಿಗಳು ಉತ್ತರ ಕೊಟ್ಟರು, 11,000 ರೂಪಾಯಿಗಳು ಮಾತ್ರ write-off ಮಾಡಿದ್ದಾರೆ ಎಂದು. ಆದರೆ, ನನಗೆ ನಿಖರವಾಗಿ ಗೊತ್ತಿದೆ, ಅಧಿಕಾರಯುತವಾಗಿ ಹೇಳುತ್ತೇನೆ. ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳ arrears, write-off ಆಗಿದೆ. ಸೇಲ್ಸ್ ಟ್ಯಾಕ್ಸ್‌ನಲ್ಲಂತೂ ಬೆಂಗಳೂರು ಸಿಟಿ ಒಂದರಲ್ಲಿಯೇ 50,00,000 ರೂಪಾಯಿಗಳಿಗೆ ಕಡಮೆಯಿಲ್ಲದಷ್ಟು leakage ಆಗಿದೆ. ಒಟ್ಟು ದೇಶ ತೆಗೆದುಕೊಂಡರೆ ಎರಡು–ಮೂರು ಕೋಟಿ ರೂಪಾಯಿಗಳಷ್ಟಾಗಬಹುದು.

ಆಮೇಲೆ ಶಾಸನಸಭೆಗಳ ಸದಸ್ಯರಿಗಾಗಿ ವ್ಯಾಗನ್‌ಗಳನ್ನೂ ಫರ್ನಿಚರ್‌ಗಳನ್ನೂ ಬಾಡಿಗೆಗೆ ತೆಗೆದುಕೊಂಡಿದ್ದೀರಿ. ವ್ಯಾನುಗಳಿಗೆ ಬಾಡಿಗೆ ತಿಂಗಳಿಗೆ 30 ರೂಪಾಯಿ. ಮೂರು ತಿಂಗಳು ತೆಗೆದುಕೊಂಡರೆ 70 ರೂಪಾಯಿ ಕೊಡಬೇಕೆಂದಿದೆ. ನೀವೇ furniture ಮಾಡಿಸಿಕೊಳ್ಳಿ ಎಂದರೆ seasoned wood ಸಿಕ್ಕುವುದಿಲ್ಲವೆಂದು ಮರಾಮತ್ತು ಇಲಾಖಾ ಮಂತ್ರಿಗಳು ಹೇಳಿದರು. ಏಕೆ ಸಿಕ್ಕುವುದಿಲ್ಲವೋ ಗೊತ್ತಿಲ್ಲ. ಸುಮ್ಮನೆ ಇಂಥ ದುರ್ವ್ಯಾಪಾರಗಳಿಗೆ ಅವಕಾಶ ಕೊಡಬೇಡಿ ಎಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಸಿದ್ಧನಬೆಟ್ಟ ಎಂಬ ಬೆಟ್ಟ ಇದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಒಂದು ತಿಂಗಳ ಕಾಲ ಅಲ್ಲಿದ್ದು ತಮ್ಮ ಆರೋಗ್ಯವನ್ನು ಸರಿಮಾಡಿಕೊಂಡು ಬಂದರು. ಅಲ್ಲೊಂದು ಛತ್ರವನ್ನು ಕಟ್ಟಿಸುವುದಾಗಿ ಕೂಡ ಅವರು ಹೇಳಿದ್ದರು. ಇನ್ನೂ ಅದನ್ನು ಮಾಡಿಲ್ಲ. ಅರ್ಧಂಬರ್ಧ ಕೆಲಸಮಾಡಿ ನಿಲ್ಲಿಸಿದ್ದಾರೆ—ಡಿಸ್ಟ್ರಿಕ್ಟ್ ಬೋರ್ಡಿನವರು.

ಇನ್ನು ಪಾನನಿರೋಧದ ವಿಚಾರ. ಇದರಿಂದಾಗಿ ಇಂದು ಒಬ್ಬೊಬ್ಬ ಪೋಲೀಸ್ ಇನ್ಸ್‌ಪೆಕ್ಟರಿಗೆ ತಿಂಗಳಿಗೆ 300-400 ರೂಪಾಯಿಗಳು ವರಮಾನ ಬರುತ್ತಿದೆ. ಜೂಜಾಟ, prohibition—ಈ ಎರಡು ಬಾಬುಗಳು ಪೋಲೀಸಿನವರಿಗೆ ದುಡ್ಡು ಮಾಡಿಕೊಳ್ಳಲಿಕ್ಕೆ ಅನುಕೂಲವಾದುವುಗಳಾಗಿವೆ. ಇದನ್ನು ತಪ್ಪಿಸಲಿಕ್ಕೆ ಬೇಕಾದಷ್ಟು traps ನಾನು ತೋರಿಕೊಡಬಲ್ಲೆ. ಬೇಕಾದಷ್ಟು ಜನರನ್ನು ನಾನು ಹಿಡಿದುಕೊಡುತ್ತೇನೆ, ನೀವು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ. ಆಮೇಲೆ ಅಮಲ್ದಾರುಗಳನ್ನು ನೇಮಿಸಿರುವ ರೀತಿ. ಒಳ್ಳೆಯ ಧೀರರನ್ನು, ಶೂರರನ್ನು ಶಕ್ತರನ್ನು ನೀವು ಈ ಹುದ್ದೆಗಳಿಗೆ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಪಿಂಜರಾಪೋಲ್‌ಗೆ ಲಾಯಕ್ಕಾಗಿರುವವರನ್ನು, ಶಕ್ತಿಯಿಲ್ಲದಿರುವವರನ್ನು, ಲೋವರ್‌ಸೆಕೆಂಡರಿ graduateಗಳನ್ನು ತೆಗೆದುಕೊಂಡಿದ್ದೀರಲ್ಲಾ! 20–25 ವರ್ಷಗಳಿಂದ ಕೆಲಸದಲ್ಲಿದ್ದು B.A., B.L ಮಾಡಿರುವವರನ್ನು ತೆಗೆದುಕೊಳ್ಳದೆ ಇಂಥಹವರನ್ನು ತೆಗೆದುಕೊಳ್ಳುವುದು ದೊಡ್ಡ ಅವಮಾನ.

ಇನ್ನೊಂದು ವಿಷಯ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಒಬ್ಬರು ಮೆಂಬರಿದ್ದಾರೆ. ಯಾರಾದರೂ ಹುಡುಗರು ಅವರನ್ನು ನೋಡಬೇಕೆಂದು ಬಂದರೆ "ಹೊರಗಿರು" ಎಂದು ಹೇಳುತ್ತಾರೆ. ಇಂಥವರು ಆಫೀಸಿನಲ್ಲಿದ್ದರೆ ಏನು ಪ್ರಯೋಜನ? ಅವರಿಗೆ ಸರಿಯಾಗಿ ವರ್ತಿಸುವಂತೆ ಹೇಳಬೇಕೆಂದು ಹೇಳುತ್ತೇನೆ. I care two straws for such unworthy members.

ಆಮೇಲೆ political sufferersಗೆ ಜಮೀನು ಕೊಡುವುದಾಗಿ ಹೇಳಿದ್ದೀರಿ. ರಾಜಕೀಯದಲ್ಲಿ ನೊಂದವರೆಂದು ಬಿಳಿಟೋಪಿ ಹಾಕಿದ ದೇಶದ್ರೋಹಿಗಳಿಗೆ ಹೀಗೆ ಕೊಡುವುದು ಸರಿಯಲ್ಲ. ದೇಶಕ್ಕಾಗಿ ಹೊಡೆದಾಡಿದ್ದರೆ ಅವರಿಗೊಂದು monument ಕಟ್ಟಿಸಿ. ಅದಿಲ್ಲದೆ ಜಮೀನು ಕೊಟ್ಟು ತೀರ ಅಧೋಗತಿಗೆ ಇಳಿಸಬೇಡಿ.

ಜತ್ತಿ ಕಮಿಟಿಯವರ ವರದಿಯ ವಿಚಾರದಲ್ಲಿ ಒಂದು ಮಾತು. ತುಮಕೂರಿನಲ್ಲಿ ಈ ಬಗ್ಗೆ ಒಂದು ದೊಡ್ಡ ಸಭೆ ಸೇರಿಸಿದ್ದೆ. ಶ್ರೀ ಜಿ. ಬಿ. ಮಲ್ಲಾರಾಧ್ಯರೇ ಅಧ್ಯಕ್ಷತೆ ವಹಿಸಿದ್ದರು. ಅನೇಕ ಜನ ಆಗ್ಗೆ ಮಾತನಾಡಿದರು. ಜನಾಭಿಪ್ರಾಯವೇ ಜನಾರ್ದನನ ಅಭಿಪ್ರಾಯವೆಂಬುದನ್ನು ನಾವು ಮರೆಯಬಾರದು. ಜನಾಭಿಪ್ರಾಯವನ್ನು ನಾನು ಇಲ್ಲಿ ಹೇಳುತ್ತೇನೆ. ನಮ್ಮ ದೇಶದಲ್ಲಿ ರೈತರು ಯಾರು? ಗೇಣಿದಾರರು ಯಾರು? ಖರೀದಿಗೆ ಕೊಂಡ ಜಮೀನು ಯಾವುದು? ಮಿರಾಸೆ ಯಾವುದು? ಎಂಬ ವಿಷಯಗಳೆಲ್ಲಾ ಅಂದು ಚರ್ಚೆಗೆ ಬಂದವು. ನಮ್ಮ ದೇಶದಲ್ಲಿ ಎರಡೆಕರೆ ಜಮೀನು ಇರುವವರೇ ಅನೇಕ ಜನ. ಅಂಥದರಲ್ಲಿ "ಸರ್ಕಾರದವರು ಜತ್ತಿಕಮಿಟಿಯ ರಿಪೋರ್ಟನ್ನು ಜಾರಿಗೆ ತರುವುದಾದರೆ ಖಂಡಿತವಾಗಿ ಅವರಿಗೆ ಬುದ್ಧಿಯಿಲ್ಲವೆಂದು" ಹೇಳಿದರು. ಇನ್ನೂ ರೈತಸಂಘ ಮುಂತಾದುವುಗಳನ್ನು ತರಬೇಕಾಗಿತ್ತು. ಏಕೆಂದರೆ,

ಅಮೆರಿಕಾ ದೇಶದಲ್ಲಿ ಕೇವಲ ಶೇಕಡ 13 ಜನರು ವ್ಯವಸಾಯಮಾಡಿ ಇತರ ಶೇಕಡ 87 ಜನರಿಗೆ ಅನ್ನ ಹಾಕುತ್ತಿದ್ದಾರೆ ಎಂದು ಲಾಲ್‌ಸಿಂಗ್ ಎಂಬುವರು ಬರೆದಿದ್ದಾರೆ. ಇಂಡಿಯಾದ ಛೀಫ್ ಜಸ್ಟಿಸ್ ಆಗಿದ್ದ ಮಹಾಜನ್‌ಅವರು ಕೂಡ ಅದನ್ನೇ ಬರೆದಿದ್ದಾರೆ. ಮುಖ್ಯವಾಗಿ ರೈತರೂ ಬದುಕಬೇಕು, ಗೇಣಿದಾರರೂ ಬದುಕಬೇಕು ಎಂಬುದನ್ನು ನಾವು ನೋಡಬೇಕು ಉಳುವವನಿಗೆ ಜಮೀನುಕೊಡಿ ಸಂತೋಷ. ಆದರೆ 'ಅಗಸರ ಕತ್ತೆಯನ್ನು ಡೊಂಬರಿಗೆ ತ್ಯಾಗ' ಮಾಡುವುದು ಬೇಡ. ನಮ್ಮ ದೇಶದಲ್ಲಿ ಇನ್ನೂ 57 ಲಕ್ಷ ಎಕರೆಗಳಷ್ಟು ಖಾಲಿ ಜಮೀನಿದೆ. ಕಾಲೋನಿಗಳನ್ನು ಮಾಡಿ ಬೇಕಾದವರಿಗೆಲ್ಲಾ ಅಲ್ಲಿ ಅವಕಾಶಕೊಡಿ. ಅಲ್ಲಿಗೂ ಸಾಲದೆ ಬಂದರೆ ಹೆಚ್ಚಿಗೆ ಜಮೀನಿರುವವರಿಂದ ಕಿತ್ತುಕೊಳ್ಳಿ. ಹಾಗಿಲ್ಲದೆ ಚೆನ್ನಾಗಿ ಹಸನುಮಾಡಿದ ಜಮೀನುಗಳನ್ನು ಕಿತ್ತುಕೊಳ್ಳುತ್ತೇವೆಂದರೆ ತಲೆತಲೆಗೆ ಹೊಡೆದಾಟವಾಗುತ್ತದೆ. ಇದು ಸಾಮಾನ್ಯ ಸಮಸ್ಯೆಯಲ್ಲ. ಜಮೀನು ಉಳತಕ್ಕವನಿಗೇ ಇರಬೇಕು, ನಿಜ. ಬಡವರಿಗೂ ಜಮೀನುಕೊಟ್ಟು ಸಹಾಯಮಾಡಬೇಕು, ಬಡವರ ಮೇಲೆ ಸರ್ಕಾರದವರ ಗಮನವಿರಬೇಕು. ಇದೇ ಪಿ.ಎಸ್.ಪಿ.ಯವರ ಧ್ಯೇಯ ಮತ್ತು ನಿಮ್ಮ ಧ್ಯೇಯ. ಮೊದಲು ಒಂದು ಮನೆತನದಲ್ಲಿ 50 ಜನರಿದ್ದರೆ ಅವರೆಲ್ಲರೂ ಪಾಂಡವರಂತೆ ಒಟ್ಟಿಗೆ ಸುಖವಾಗಿರಲಿ, ಭಾಗವಾಗುವುದು ಬೇಡ ಎಂದು ಹೇಳುತ್ತಿದ್ದರು. ಈಗ ಜತ್ತಿ ಕಮಿಟಿಯ ವರದಿ ಬಂದು ಮನೆಮನೆಯಲ್ಲೂ ಗಂಡಹೆಂಡರೇ ಭಾಗಮಾಡಿಕೊಳ್ಳುವ ಸಂದರ್ಭ ಬಂದಿದೆ, ಇದು ಸರಿಯಲ್ಲ. ಇಂದಿಗೂ ಯಾವನು ಉಳುತ್ತೇನೆನ್ನುತ್ತಾನೋ ಅವನಿಗೆ ಉಳಲಿಕ್ಕೆ ಜಮೀನು ಬೇಕಾದಷ್ಟಿದೆ. ಆದರೆ ವಾಸ್ತವವಾಗಿ ಅನೇಕರು ಹಳ್ಳಿಯಲ್ಲಿ ಜಮೀನು ಕೊಟ್ಟರೂ ಬೇಡವೆನ್ನುತ್ತಾರೆ. ಏಕೆಂದರೆ, ಸಿಟಿ ರೈಲ್ವೆಸ್ಟೇಷನ್ನಿನಲ್ಲಿ ನಾಲ್ಕು ಮೂಟೆ ದಿನಕ್ಕೆ ಹೊತ್ತರೆ ಸಾಕು ಅವನ ಜೀವನ ಸುಖವಾಗಿ ಆಗಿಬಿಡುತ್ತದೆ. ಜತ್ತಿಕಮಿಟಿಯವರ ರಿಪೋರ್ಟಿನ ಪೀಠಿಕೆಯನ್ನು ನೋಡಿದರೆ ಇನ್ನೊಂದು ಆಶ್ಚರ್ಯವಾಗುತ್ತದೆ. ಇತರರು ತಿಂಗಳಿಗೆ ಎರಡು-ಮೂರು ಸಾವಿರ ರೂಪಾಯಿಗಳನ್ನು ಸಂಪಾದನೆಮಾಡಿಕೊಳ್ಳಬಹುದಂತೆ, ಬೇರೆ ಖಾಸಗಿಯವರು ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಬಹುದಂತೆ, ರೈತರ ಸಂಪಾದನೆ ಮಾತ್ರ ನೂರು ರೂಪಾಯಿಗಳಿಗೆ ಮೇಲ್ಪಟ್ಟು ಇರಕೂಡದೆಂದು ಹೇಳುತ್ತಾರಲ್ಲಾ! ಇನ್ನು ರೈತ ತನ್ನ ಮಕ್ಕಳನ್ನೇನು ಓದಿಸುತ್ತಾನೆ?

ಐದು ಜನರೊಳಗಿರತಕ್ಕ ಒಂದು ಸಂಸಾರಕ್ಕೆ ವರ್ಷಕ್ಕೆ 1,200 ರೂ.ಗಳ ನಿವ್ವಳ ವರಮಾನ ತರತಕ್ಕಂಥ ವಿಸ್ತೀರ್ಣದ ಜಮೀನನ್ನು ಒಂದು family holding ಎಂದು ಇಲ್ಲಿ ತಿಳಿಸಿದೆ. Family holding, basic holding ಇವೆಲ್ಲ ಸರಿಯಲ್ಲವೆಂದು ಕಾಣುತ್ತದೆ. It is nothing but distribution of poverty. ಸ್ವಂತ ವ್ಯವಸಾಯ ಮಾಡುವವರು ಆ ಜಮೀನಿಗೆ ಹತ್ತು ಮೈಲಿ ಫಾಸಲೆಯೊಳಗೇ ಇರಬೇಕಂತೆ. ಈಗಿನ ಕಾಲದಲ್ಲ ಹತ್ತು ಮೈಲಿಯಲ್ಲ 15-20 ಮೈಲಿ ದೂರದಲ್ಲಿದ್ದರೂ ಸಹ ಸಾಗುವಳಿ ಮಾಡಬಹುದು. ಶ್ರೀಮಾನ್ ಬದರಿನಾರಾಯಣ್, ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಮತ್ತು ಇನ್ನೂ ಕೆಲವರು ಹೇಳಿದಂತೆ ಮೂಲ ಗೇಣಿ ಪದ್ಧತಿಯನ್ನು ಜಾರಿಗೆ ತಂದರೆ ಈ ಗಲಾಟೆಗಳೊಂದೂ ಇರುವುದಿಲ್ಲವೆಂದು ಕಾಣುತ್ತದೆ.

ಕಾಂಪೆನ್‌ಸೇಷನ್ ಕೊಡುವಾಗ rentನ 15ರಷ್ಟನ್ನು 20 ವರ್ಷಗಳ ಕಂತುಗಳಲ್ಲಿ ಕೊಡಬಹುದು ಎಂದು ತಿಳಿಸಿದ್ದಾರೆ. ಇದು ಸರಿಯಲ್ಲ. Private money lending may be stopped. Government will be held responsible for any money. ಸೊಸೈಟಿ ಮುಖಾಂತರ ಹಣ ಕೊಟ್ಟು, ಜಮೀನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿ. ಹಾಗೆ ಮಾಡದೆ ಯಾವುದೋ ರೀತಿಯಲ್ಲಿ ಮಾಡಿ ಯಾರದೋ ತಲೆ ಒಡೆದು ಯಾರನ್ನೋ ಉದ್ಧಾರ ಮಾಡುತ್ತೇವೆಂದರೆ ದೇಶ ಉಳಿಯುವುದಿಲ್ಲ. ಅನಾಹುತಗಳು ಆಗುತ್ತವೆ.

ಒಬ್ಬ ಮನುಷ್ಯ ಒಂದು ಸರ್ಕಾರಿ ನೌಕರಿಯಲ್ಲಿರುತ್ತಾನೆ. ಅವನ ಮಕ್ಕಳು ಚಿಕ್ಕವಯಸ್ಸಿನವರಿರುತ್ತಾರೆ. ಅವನು ಸ್ವಲ್ಪ ಜಮೀನನ್ನು ಹೊಟ್ಟೆ ಬಟ್ಟೆ ಕಟ್ಟಿ ಮುಂದೆ ಜೀವನ ಮಾಡಲು ಅನುಕೂಲವಾಗಿರಲಿ ಎಂದು ಹೊಂದಿರುತ್ತಾನೆ. ಇಂಥ ಸರ್ಕಾರಿ ನೌಕರರ ಜಮೀನನ್ನು ಕಿತ್ತು ಇನ್ನೊಬ್ಬನಿಗೆ ಕೊಡುವುದೆಂದರೆ ಏನು ಅರ್ಥ? ಜಮೀನನ್ನು ಯಾರು ಮಾಡುತ್ತಾನೆಯೋ ಅವನಿಗೆ ಕೊಡಬೇಕು, ಒಬ್ಬನಲ್ಲಿರುವುದನ್ನು ಕಿತ್ತು ಮತ್ತೊಬ್ಬನಿಗೆ ಕೊಡಬೇಕು ಎಂದರೆ ಏನು ಅರ್ಥ? ತಾವು ಹೀಗೆ ವ್ಯವಸಾಯ ಕ್ಷೇತ್ರದಲ್ಲಿ ಮಾಡುವುದಾದರೆ ಇದೇ ತತ್ವವನ್ನು ಬಾಕಿ ಕ್ಷೇತ್ರಗಳಲ್ಲೂ ಮುಂದುವರಿಸಿ ಇಂಜಿನ್ ಡ್ರೈವರುಗಳಿಗೆ ಇಂಜಿನ್‌ಗಳನ್ನು ಕೊಟ್ಟುಬಿಡಿ, ಲಾರಿ ಡ್ರೈವರುಗಳಿಗೆ ಲಾರಿಗಳನ್ನು ಕೊಟ್ಟುಬಿಡಿ, ಮನೆಗಳಲ್ಲಿ ಬಾಡಿಗೆಗೆ ಇರುವವರಿಗೆ ಮನೆಗಳನ್ನು ಕೊಟ್ಟುಬಿಡಿ, ಬ್ಯಾಂಕ್ ಮ್ಯಾನೇಜರುಗಳಿಗೆ ಬ್ಯಾಂಕಿನಲ್ಲಿರುವ ಹಣವನ್ನು ಕೊಟ್ಟುಬಿಡಿ, ಟ್ರೆಜರಿ ಆಫೀಸರುಗಳಿಗೆ ಟ್ರೆಜರಿಯಲ್ಲಿರುವ ಹಣವನ್ನು ಕೊಟ್ಟುಬಿಡಿ. ಹೀಗೆ ಹೇಳುವುದು ಎಂಥ ನ್ಯಾಯ? ಭೂ ಹಿಡುವಳಿಯಲ್ಲಿ ಮೇಲಿನ ಪರಿಮಿತಿಯನ್ನು ಜಾರಿಗೆ ತರುವುದಕ್ಕೆ ಮೊದಲು ಇತರ ಕ್ಷೇತ್ರಗಳಲ್ಲಿ ಜಾರಿಗೆ ತರಬೇಕು.

ನಾವು ಯಾವುದೇ ಕೆಲಸವನ್ನು ಮಾಡಬೇಕಾದರೂ ಮನಸ್ಸಿಗೆ ಶಾಂತಿ ಇರಬೇಕು, ತಲೆ ಸರಿಯಾಗಿರಬೇಕು. ಮಂತ್ರಿಗಳು ಕೆಲಸ ಮಾಡಬೇಕಾದರೂ ಸಹ ಅದೇ ರೀತಿ ಇರಬೇಕು. ಇತ್ತೀಚೆಗೆ ಬೆಳಗಾದರೆ ಪತ್ರಿಕೆಗಳಲ್ಲೆಲ್ಲ ಮಂತ್ರಿಮಂಡಲದಮೇಲೆ ಅವಿಶ್ವಾಸ ನಿರ್ಣಯದ ವಿಷಯವನ್ನು ನೋಡುತ್ತಿದ್ದೇವೆ. ಹೀಗಾದರೆ ರಾಜ್ಯಭಾರ ಮಾಡುವುದಕ್ಕೆ ಆಗುವುದಿಲ್ಲ. ಕಳೆದ ಹತ್ತು ವರ್ಷಗಳ ಲಾಗಾಯ್ತು ದಕ್ಷತೆಯಿಂದ ಕೆಲಸ ಮಾಡಿದ್ದಾರೆಯೇ ಎಂದರೆ ಇಲ್ಲವೆಂದು ಹೇಳಬಹುದು. ಕಾಂಗ್ರೆಸ್‌ನವರು ಇರಕೂಡದು, ಬೇರೆಯವರು ಇರಕೂಡದು, ಮತ್ತೊಬ್ಬರು ಇರಕೂಡದು ಎನ್ನುವ ಭಾವನೆ ನಮ್ಮಲ್ಲಿ ಬರಬಾರದು. ದೇಶದ ಹಿತದೃಷ್ಟಿಯಿಂದ ಎಲ್ಲರೂ ಕೆಲಸ ಮಾಡಬೇಕು.

ಕೊನೆಯದಾಗಿ ಹೇಳುವುದಾದರೆ, socialistic pattern of society ಎಂದು ಹೇಳಿಕೊಂಡು ಕೆಲಸ ಮಾಡುವುದರಲ್ಲಿ ಆಖೈರಿಗೆ ಕಮ್ಯುನಿಸಂ ಬರುತ್ತದೆ. ಸರ್ಕಾರದವರು ದಯವಿಟ್ಟು ನಾನು ಹೇಳಿರತಕ್ಕ ವಿಚಾರಗಳನ್ನು ತಿಳಿದುಕೊಳ್ಳಬೇಕು. ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಜತ್ತಿ ಸಮಿತಿಯ ಶಿಫಾರಸುಗಳನ್ನು ಜಾರಿಯಲ್ಲಿ ತರಬೇಕು. ಆದರೆ ಇತರೆ ಕ್ಷೇತ್ರಗಳಲ್ಲಿ ಮೊದಲು ಸೀಲಿಂಗ್ ಹಾಕಬೇಕು. ಬಡವರನ್ನು ಉದ್ಧಾರ ಮಾಡುವುದಕ್ಕೆ ಯೋಚನೆಮಾಡಿ ಯಾರಿಗೂ ಅನಾನುಕೂಲವಾಗದಂತೆ ಮಾಡಬೇಕು. ಬಡವರಿಗೆ ಭೂಮಿಯನ್ನು ಹಂಚಿಕೆ ಮಾಡಲು ಒಂದು ಕಮಿಟಿಯನ್ನು ಮಾಡಿದರೆ ಪರಿಸ್ಥಿತಿ ಇನ್ನೂ ಹೊಲಸಾಗುತ್ತದೆ. ಸರ್ಕಾರದವರು ದಯ

(SRI G. N. PUTTANNA)

ವಿಟ್ಟು ನಾನು ಹೇಳಿರುವ ಅಂಶಗಳನ್ನು ಗಮನಿಸಬೇಕು. Lastly I thank the Hon'ble Chair for having given me this opportunity.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೇಬಿಹಾಳ).—ಈ ಆಯವ್ಯಯ ಪತ್ರ ಓದಿ ಹಿಗ್ಗುವುದಿಲ್ಲ-ಕುಗ್ಗುವುದಿಲ್ಲ. ಏಕೆಂದರೆ ಇದನ್ನು ಕಂಡು ಶಂಕೆಗಳು ಬಂದವು. ನಮಗೆ ಏನು ಉತ್ಪನ್ನ ಬರುತ್ತದೆ, ನಿವ್ವಳ ಖರ್ಚು ಎಷ್ಟು ಆಗುತ್ತದೆ ಎಂದು ಸರಿಯಾಗಿ ಹೇಳಲಿಕ್ಕೆ ಬರುವುದಿಲ್ಲ. ಹಿಂದಿನಿಂದ ಅದರ ಅಂದಾಜುಗಳಿಲ್ಲ. ಈ ಕಾರಣದಿಂದ ಖೋತಾ ಬಡ್ಜೆಟ್ ಆಗುತ್ತದೆಯೋ ಅಥವ ಉಳಿತಾಯದ ಬಡ್ಜೆಟ್ ಆಗುತ್ತದೆಯೋ ಎನ್ನುವುದನ್ನು ನಮಗೆ ಹೇಳಲಿಕ್ಕೆ ಬರುವುದಿಲ್ಲ. ಹೋದವರ್ಷದ ಕೆಲಸ ಪೂರೈಸದೆ ಇರುವುದು ಎಷ್ಟೋ ಅದೆ. ಇನ್ನೊಂದೇನೆಂದರೆ, ಕೆಲವರು ನಮ್ಮಲ್ಲಿ ಹಣವಿಲ್ಲ, ನಮ್ಮ ಹಣಕಾಸಿನ ಸ್ಥಿತಿ ಬರೋಬರಿ ಇಲ್ಲವೆಂದು ಹೇಳುತ್ತಾರೆ. ಮಾನ್ಯ ಅರ್ಥ ಮಂತ್ರಿಗಳು ಈ ವಿಚಾರದಲ್ಲಿ ಏನಾದರೂ ಸಮಾಧಾನ ಕೊಡಬೇಡವೇ? ನಾವು ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಅಮಲಿನಲ್ಲಿ ತರಬೇಕಾದರೆ ದುಡ್ಡಿದೆಯೋ ಅಥವ ಸಾಲ ತೆಗೆಯಬೇಕಾದರೆ ಎಷ್ಟು ತೆಗೆದುಕೊಳ್ಳುವುದಕ್ಕೆ ಸಾಧ್ಯ? ಬರುವ ಮೂರು ವರ್ಷಗಳಲ್ಲಿ ಕನಿಷ್ಠ 20 ಕೋಟಿ ರೂಪಾಯಿಗಳಷ್ಟು ಆದಾಯವನ್ನು ಹೆಚ್ಚಿಗೆ ಮಾಡಿಕೊಂಡು ಎರಡನೆ ಪಂಚವಾರ್ಷಿಕ ಯೋಜನೆಗೆ ವೆಚ್ಚಮಾಡುವುದಕ್ಕೆ ಸಾಧ್ಯವೇ? ಪ್ರತಿವರ್ಷವೂ ಏಳು ಕೋಟಿ ರೂಪಾಯಿಗಳ ಆದಾಯ ಬರಲಿಕ್ಕೆ ಸರ್ಕಾರ ತೆರಿಗೆಯನ್ನು ಹಾಕಲೇಬೇಕು. ಯಾವ ಯಾವದಕ್ಕೆ ತೆರಿಗೆಯನ್ನು ಹಾಕಬಹುದು ಎಂಬುದಕ್ಕೆ ಅರ್ಥಸಚಿವರ ಭಾಷಣದ ಕನ್ನಡ ಪ್ರತಿಯ ಹತ್ತನೆಯ ಪಾನಿನಲ್ಲಿ ತೋರಿಸಿದ್ದಾರೆ. ಅಲ್ಲಿ "ಅಕ್ಕಪಕ್ಕದ ರಾಜ್ಯಗಳಲ್ಲಿ ಬಸ್ ಪ್ರಯಾಣೀಕರ ಮೇಲೆ ಅಲ್ಪ ಶೇಕಡಾವಾರು ತೆರಿಗೆಯನ್ನು ಹಾಕಿರುವ ಸಂಗತಿಯು ಸ್ವಾಗತಾರ್ಹವಾಗಿದೆ. ಮತ್ತು ನಮ್ಮ ಹುಟ್ಟುವಳಿಗಳನ್ನು ವೃದ್ಧಿಗೊಳಿಸುವುದಕ್ಕೆ ಇದೇ ಪ್ರಕಾರ ನಾವೂ ಮಾಡಬಹುದೆಂದು ನನಗೆ ತೋರುತ್ತದೆ." ಎಂದು ಹೇಳಿದ್ದಾರೆ. ಅಲ್ಲದೆ ಕೆಲವು ಕರಗಳ ಸಂಬಂಧದಲ್ಲಿ ಏಕರೂಪವಾದ ಕಾಯಿದೆಯನ್ನು ತರುವ ಮತ್ತು ನೀರು ಸರದಿ ಮತ್ತು ತರೀ ಕಂದಾಯವನ್ನು ಯೋಗ್ಯರೀತಿಯಿಂದ ಹೆಚ್ಚಿಸುವ ವಿಷಯವೂ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಅಂದ ಬಳಿಕ ಎಲ್ಲವನ್ನೂ ನೋಡಿದರೆ ಯಾರಮೇಲೆ ತೆರಿಗೆಯ ಭಾರ ಬೀಳುತ್ತದೆಂದರೆ ವ್ಯವಸಾಯಗಾರನ ಮೇಲೆ ಬೀಳುತ್ತದೆಂದು ಹೇಳುತ್ತೇನೆ. ಹಳ್ಳಿಗಳಲ್ಲಿ ವ್ಯವಸಾಯಮಾಡಿ, ಉತ್ಪನ್ನಮಾಡಿ, ರೈತರು ಅವರ ಹೊಟ್ಟೆ ತುಂಬಿಕೊಳ್ಳುತ್ತಾರೆ. ಅವರ ಮೇಲೆ ಹೆಚ್ಚು ಕರಬೀಳಬಾರದು. ಇದರೊಳಗೆ ಬರೀ ಪಟ್ಟಣವಾಸಿಗಳ ಮೇಲೆ ಬೀಳತಕ್ಕ ಕರವಾದರೆ ಸಾಧುವಾದುದು. ಏಕೆಂದರೆ ಬ್ರಿಟಿಷರು ನಮ್ಮ ರಾಜ್ಯದಲ್ಲಿ ಆಡಳಿತ ಮಾಡುತ್ತಿದ್ದಾಗ ಹಳ್ಳಿಗಳಲ್ಲಿ ಉತ್ಪನ್ನ ಮಾಡಿ ಪಟ್ಟಣಗಳಿಗೆ ಬಂದು, ಅವರು ರೊಕ್ಕ ಮಾಡಿಕೊಳ್ಳುತ್ತಿದ್ದರು. ಈಗ ಕಾಂಗ್ರೆಸ್ ಸರ್ಕಾರ ಬಂದಬಳಿಕ ಪಟ್ಟಣಗಳಿಗೆ ಬದಲು ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡಬೇಕಾಗಿದೆ. ಹಳ್ಳಿಗಳಲ್ಲಿ ವ್ಯವಸಾಯ ಮಾಡಬೇಕು. ಆದಕಾರಣ ಪಟ್ಟಣವಾಸಿಗಳು ಯಾರಿದ್ದಾರೆ ಅವರಮೇಲೆ ಹೆಚ್ಚು ಕರ ಹಾಕಿ ಅದರಿಂದ ಬರುವ ರೊಕ್ಕವನ್ನು ಉಪಯೋಗಿಸಿ ಹಳ್ಳಿಗಳನ್ನು ಅಭಿವೃದ್ಧಿ ಮಾಡುವ ಕೆಲಸವಿದೆ. ಆದಕಾರಣ ನಾನು ಏನು ಹೇಳುತ್ತೇನೆಂದರೆ ಮೂರು ವರ್ಷಗಳಲ್ಲಿ 20 ಕೋಟಿ ರೂಪಾಯಿಗಳ ಹೆಚ್ಚು ಆದಾಯ ಬರಲು ಏನು ಕರ ಹಾಕಬೇಕೆಂದು ತೋರಿಸಿದ್ದೀರೋ ಅದನ್ನು ಬರೀ ವ್ಯವಸಾಯಗಾರರ ಮೇಲೆ ಹಾಕಿ, ರೊಕ್ಕ ತೆಗೆದುಕೊಳ್ಳುವ ಕೆಲಸ ಮಾಡಬೇಡಿರಿ. ಆದರೆ ನೀವು ಪಟ್ಟಣವಾಸಿಗಳು ಯಾರಿದ್ದಾರೆ, ಅವರ ಮೇಲೆ ಕರ ಹಾಕಿರಿ. ಮತ್ತು ಅದರಿಂದ ಬರುವ ಆದಾಯವನ್ನು ಹಳ್ಳಿಗಳ ಅಭಿವೃದ್ಧಿಗೆ ಖರ್ಚುಮಾಡಿ ಎಂದು ಅರ್ಥ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಭೂ ಕಂದಾಯವನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಇದೂ ಒಂದು ಆದಾಯ. ಕಂದಾಯ ಜಾಸ್ತಿ ಮಾಡಿದರೂ ಚಿಂತೆಯಿಲ್ಲ. ಆದರೆ ಸರ್ಕಾರದವರು ಕಂದಾಯವನ್ನು ಜಾಸ್ತಿಮಾಡುವ ಕಾಲಕ್ಕೆ ಸ್ವಲ್ಪ ಹೆಚ್ಚು ವಿಚಾರ ಮಾಡಬೇಕೆಂದು ಸೂಚಿಸುತ್ತಿದ್ದೇನೆ. ಯಾವ ರೀತಿಯಲ್ಲಿ ಭೂಕಂದಾಯವನ್ನು ಹಾಕಿದರೆ ರೈತರಿಗೆ ಕೊಡಲಿಕ್ಕೆ ಶಕ್ಯವಿದೆ, ಅವರಮೇಲೆ ಭಾರ ಬೀಳುವುದಿಲ್ಲವೆಂಬುದನ್ನು ನೋಡಿಕೊಂಡು ಹಾಕಬೇಕೇ ಹೊರತು ಸುಮ್ಮನೆ ಏರಿಸಬಾರದು. ಮುಂಬೈ ಸರ್ಕಾರದವರು ಲ್ಯಾಂಡ್ ರೆವಿನ್ಯೂ ಕೋಡ್ ಬದಲುಮಾಡಿ ಬೇಕಾದಷ್ಟು ಕಂದಾಯ ಏರಿಸಲು ಅನುವು ಮಾಡಿದರು. ಭೂಕಂದಾಯವನ್ನು ಹಾಕುವಾಗ ವಿಚಾರಮಾಡಿ ವ್ಯವಸಾಯಗಾರನ ಮೇಲೆ ಹೊರೆ ಬೀಳದಂತೆ ಮಾಡಬೇಕು. ಮತ್ತು ಪಟ್ಟಣವಾಸಿಗಳ ಮೇಲೆ ಹೆಚ್ಚು ಕರಗಳನ್ನು ಹಾಕಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

4 P.M.

ನಮ್ಮ ಮಾನ್ಯ ಸದಸ್ಯರೊಬ್ಬರು ಹೇಳಿದರು. ನಮ್ಮ ರಾಜ್ಯವನ್ನು ಮೂರು ಭಾಗವಾಗಿ ವಿಂಗಡಿಸಿದ್ದಾರೆ: (1) ಕರಾವಳಿ ಕ್ಷೇತ್ರ; (2) ಮಲೆನಾಡು ಕ್ಷೇತ್ರ; (3) ಮೈದಾನ ಕ್ಷೇತ್ರ.

ಕರಾವಳಿ ಕ್ಷೇತ್ರದಿಂದ ನಮ್ಮ ಮಂತ್ರಿ ಶ್ರೀ ವೈಕುಂಠ ಬಾಳಿಗರವರು ಇದ್ದಾರೆ. ಅವರು ಆ ಕ್ಷೇತ್ರವನ್ನು ಹೇಗೆ ಅಭಿವೃದ್ಧಿ ಮಾಡಬೇಕೆನ್ನುವುದನ್ನು ನೋಡಿಕೊಳ್ಳುತ್ತಾರೆ. ಮಲೆನಾಡು ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಮುಖ್ಯ ಮಂತ್ರಿಗಳೂ ಇದ್ದಾರೆ; ಮಲೆನಾಡು ಕ್ಷೇತ್ರದಿಂದ ಶ್ರೀ ಎ. ಆರ್. ಬದರೀನಾರಾಯಣ್‌ರವರು ಇದ್ದಾರೆ; ಇವರುಗಳು ಅದರ ಅಭಿವೃದ್ಧಿ ಹೇಗೆ ಮಾಡಬೇಕೆಂದು ನೋಡಿಕೊಳ್ಳುತ್ತಾರೆ.

ಮೈದಾನ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೆ ವಿಚಾರ ಮಾಡಿರಿ. ಮೈದಾನ ಪ್ರದೇಶ ಬೆಂಗಾಡು ಪ್ರದೇಶ. ಬಿಸಿಲು ಬಹಳ. ಮಳೆ ಕಡಮೆ. ಇದನ್ನು ಅಭಿವೃದ್ಧಿ ಮಾಡಲಿಕ್ಕೆ ಸರ್ಕಾರದವರು ಒಂದು ಮಂಡಲಿಯನ್ನು ಮಾಡಲಿ. ಹಾಗೆ ವಿಚಾರ ಮಾಡಿಕೊಂಡು ಈ ವಿಚಾರ ಯೋಚನೆ ಮಾಡಬೇಕು. ಇದನ್ನು ಹೊಸದಾಗಿ ಹೇಳುತ್ತಿಲ್ಲ. ಮುಂಬಯಿ ಪ್ರಾಂತ್ಯದೊಳಗೆ ಇದ್ದಾಗ ಕೂಡ ಒಂದು ಅಭಿವೃದ್ಧಿ ಮಂಡಲಿಯನ್ನು ರಚಿಸಬೇಕೆಂದು ಕೇಳಿದ್ದೆವು. ಅದರ ಮೇಲೆ ಶ್ರೀ ರಾಮಮೂರ್ತಿಯವರನ್ನು ಕಳುಹಿಸಿಕೊಟ್ಟಿದ್ದರು. 1944 ನೆಯ ಇಸವಿಯಲ್ಲಿ ಬಿಜಾಪುರಕ್ಕೆ ವೈಸರಾಯರು ಬಂದಿದ್ದರು. ಅವರು ಬಂದಾಗ ಹೇಳಿದ್ದಾರೆ. ನಾಲ್ಕು ವರ್ಷಗಳ ಲೆಕ್ಕ ನೋಡಿದರೆ, ಪ್ರತಿ ವರ್ಷ ದುಷ್ಕಾಲ ಪರಿಹಾರದ ಸಲುವಾಗಿ ಬಿಜಾಪುರ ಜಿಲ್ಲೆಗೆ ಸರ್ಕಾರ ಕನಿಷ್ಠಪಕ್ಷ 12 ಲಕ್ಷ ರೂಪಾಯಿ ಖರ್ಚು ಮಾಡುತ್ತಿದೆ. ಈವರೆಗೂ

ಖರ್ಚಾಗಿರುವ ಹಣಕ್ಕೆ ಶೇಕಡ ನಾಲ್ಕು ರೂಪಾಯಿ ಬಡ್ಡಿ ಅಂತೆ, ಮೂರುಕೋಟಿ ರೂಪಾಯಿ ಆಯಿತು. ಮೂರು ಕೋಟಿ ರೂಪಾಯಿ ಖರ್ಚು ಮಾಡಿದ್ದರೆ ಈ ಪ್ರದೇಶ ಅಭಿವೃದ್ಧಿಯೇ ಆಗುತ್ತಿತ್ತು, ಎಂದು.

ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಪ್ರತಿ ಯೊಂದು ಕಡೆ ಆಗುವುದಕ್ಕೆ ಶಕ್ಯವಿಲ್ಲ. ಎಲ್ಲೆಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆ ತೋಡಿಸಬೇಕೆಂದು ನಿರ್ಧರಿಸಿದಾಗ, ಘಟಪ್ರಭಾ ಯೋಜನೆ ನಮ್ಮ ಜಿಲ್ಲೆಗೆ ಬಂದಿತು. ಈ ವರ್ಷ ಅದರಮೇಲೆ ಒಟ್ಟು 35 ಲಕ್ಷ ರೂಪಾಯಿ ಹಾಕಿದ್ದಾರೆ. ಒಂದು ಎಕ್ಸಿಕ್ಯೂಟೀವ್ ಇಂಜಿನಿಯರ ಡಿವಿಜನ್ ಕನಿಷ್ಠ ಪಕ್ಷ 50 ಲಕ್ಷ ರೂಪಾಯಿ ಖರ್ಚುಮಾಡಲು ಶಕ್ಯವಿದೆ. ನೀರಾವರಿ ಎಲ್ಲಿಯತನಕ ಬರುತ್ತದೋ ಅಥವಾ ಅಲ್ಲಿಗೇ ನಿಂತುಹೋಗುತ್ತದೋ ಗೊತ್ತಿಲ್ಲ. ನಮ್ಮದು ಕಡೆಗೆ ಇದೆ. ನಮಗೆ ನೀರು ಬರುವುದು ಅಣೆಕಟ್ಟು ಕಟ್ಟಿದಾಗ. ಮುಂಬಯಿ ಸರ್ಕಾರದಿಂದಲೂ ಪತ್ರವ್ಯವಹಾರ ನಡೆದಿದೆ. ಅಣೆಕಟ್ಟು ಕಟ್ಟುವ ಸ್ಥಳ ಮುಂಬಯಿ ಸರ್ಕಾರದಲ್ಲಿರು ವುದರಿಂದ ಕೇಂದ್ರ ಸರ್ಕಾರಕ್ಕೆ ಹೇಳಿಕೊಂಡು ಅಣೇಕಟ್ಟು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕು.

ಕೆಲವು ಕಡೆ ಹಳ್ಳಗಳಿಂದ ನೀರಾವರಿ ಕೆಲಸ ಆಗುತ್ತಾ ಇದ್ದರೆ, ಕೆರೆ ಕಟ್ಟಿಸಬೇಕು. ಹಳ್ಳದ ನೀರು ತೆಗೆದು ಕೊಂಡು ಕೃಷಿ ಮಾಡುವ ವ್ಯವಸಾಯಗಾರರಿಗೆ ಸರ್ಕಾ ರದಿಂದ ಯಾವ ತರಹದ ಸೌಲಭ್ಯವೂ ಇಲ್ಲ. ನಾನು ಈ ವಿಚಾರದಲ್ಲಿ ಬರೆದುಕೊಟ್ಟು ವರ್ಷವಾಯಿತು. ಇದು ವರೆಗೂ ಆ ಕಾಗದದಮೇಲೆ ಏನೂ ಆಗಿಲ್ಲ. ಆದ ಕಾರಣ ಎಲ್ಲೆಲ್ಲಿ ಅಂಥೆರಿ ಆಗುವುದಕ್ಕೆ ಶಕ್ಯವಿದೆಯೋ, ಅಲ್ಲಲ್ಲಿ ರೈತರಿಗೆ ಸೌಲಭ್ಯ ಏನೇನು ಕೊಡಬೇಕು ಎನ್ನುವುದನ್ನು ನೋಡಿಕೊಂಡು ಮಾಡಲಿ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆ ಮಾಡಿರಿ. ನೀರು ಬೇಕಾದಷ್ಟು ಹರಿಯುತ್ತದೆ. ವಿದ್ಯುತ್ ಪೂರೈಸಿದರೆ ನೀರಾವರಿಗೆ ಹೆಚ್ಚಿನ ಅವಕಾಶವಿದೆ. ಮಾಡಿ ಕೊಡಿರಿ. ತುಂಗಭದ್ರಾ ಯೋಜನೆಯನ್ನು, ರಾಯ ಚೂರು, ಬಳ್ಳಾರಿ ಜಿಲ್ಲೆಗೆ ಹಾಕುತ್ತಾರೆ, ಎಂದು ಮಾತನಾಡುತ್ತಿದ್ದಾರೆ. ವಿದ್ಯುತ್ತನ್ನು ನರಗುಂದಕ್ಕೆ ತಂದರೆ ಮುಂದೆ ನೀರಾವರಿಗೆ ಅಸ್ಪದ ಆಗುತ್ತದೆ. ಆ ಪ್ರದೇಶ ಚಲೋ ಆಗುತ್ತದೆ. ಸರ್ಕಾರದವರು ಮಾಡಿಕೊಡಲಿ.

ವ್ಯವಸಾಯ ಕ್ಷೇತ್ರದಬಗ್ಗೆ ಸ್ವಲ್ಪ ಹೇಳುತ್ತೇನೆ. ನಮ್ಮಲ್ಲಿ ಟ್ರ್ಯಾಕ್ಟರ್ ಬೇಕು ಎಂದು ಜನರು ಸರ್ಕಾರದ ಕಡೆ, ಅಮಲ್ದಾರರಕಡೆ, ಅರ್ಜಿಗಳನ್ನು ಮಾಡಿಯೇ ಮಾಡುತ್ತಾರೆ. No profit, no loss basis ಮೇಲೆ ಈ ಟ್ರಾಕ್ಟರುಗಳ ವಿಚಾರ ಮಾಡುತ್ತಾರೆ. ಯಾವಾಗಲೂ ಸಹ ಟ್ರಾಕ್ಟರುಗಳ ಮೇಲೆ ಲುಕ್ಸಾನು ಇಲ್ಲ ಲಾಭವಾಗಿದೆ ಎಂದು ಬಿಜಾಪುರ್ ಅಮಲ್ದಾರರೂ ಸಹ ಗೌರ್ನಮೆಂಟಿಗೆ ರಿಪೋರ್ಟ್ ಮಾಡಿದ್ದಾರೆ. ಆದ್ದ ರಿಂದ ಟ್ರಾಕ್ಟರುಗಳನ್ನು ಆದಷ್ಟು ಹೆಚ್ಚಿಗೆ ಕೊಡುವು ದಕ್ಕೆ ವ್ಯವಸ್ಥೆಮಾಡಿ.

ನಮ್ಮ ಪ್ರದೇಶದಲ್ಲಿ ಹುಲ್ಲುಗಾವಲು (grazing area) ಕಡಮೆಯಾಗಿ ದನಗಳ ಸಂಖ್ಯೆ ಕಡಮೆಯಾಗಿದೆ. ಒಂದು ಜತೆ ಎತ್ತು ಎಪ್ಪತ್ತು ಎಕರೆತನಕ ಕೆಲಸ ಮಾಡುತ್ತದೆ. ಎತ್ತುಗಳೂ ಕಡಿಮೆ ಇವೆ. ಹುಲ್ಲು ಗಾವಲು ಇಲ್ಲದ್ದರಿಂದ ಇಂಥ ಸ್ಥಿತಿ ಬಂದಿದೆ. ಹುಲ್ಲು ಗಾವಲ ಸ್ಥಿತಿ ಚಲೋ ಆಗಬೇಕು. ಬೇನೆ ಬಂದರೆ ದನಗಳೂ ಎತ್ತುಗಳೂ ಸತ್ತುಹೋಗುತ್ತವೆ. ಸಾಕಷ್ಟು ಜಾನುವಾರುಗಳ ಆಸ್ಪತ್ರೆಗಳಿಲ್ಲ. ಒಂದು ಎತ್ತಿನ ಜುಮ್ಮ 500 ರೂಪಾಯಿನಿಂದ 1000 ರೂಪಾ ಯಿನವರೆಗೆ ಇದೆ, ಈ ವಿಚಾರದಲ್ಲಿ ವ್ಯವಸಾಯ ಮಂತ್ರಿಗಳಿಗೂ ಅರ್ಜಿ ಕೊಟ್ಟಿದ್ದೇನೆ. ಕೃಷ್ಣನದಿ ದಂಡೆಯಲ್ಲಿ ತುಂಬಾ ಧಾನ್ಯ ಬೆಳೆಯುತ್ತದೆ.

ಅಭಿವೃದ್ಧಿ ಕೆಲಸಗಳಬಗ್ಗೆ ಬಜೆಟ್ ನೋಡಿದೆ. ಕುಡಿಯುವ ನೀರಿನ ಸಲುವಾಗಿ ಏನು ಹಣ ಕೊಟ್ಟಿ ದ್ದಾರೋ ಅದು ಖರ್ಚಾಗದೆ ಹಿಂದಕ್ಕೆ ಬಂದಿದೆ. ನೌಕ ರರು ಕೆಲಸಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ರೂರಲ್ ವಾಟರ್ ಸಪ್ಲೈಗೆ ಕೊಟ್ಟ ಹಣ ತಿರುಗಿ ಸರ್ಕಾ ರಕ್ಕೇ ವಾಪಸ್ಸು ಬಂದಿದೆ, ಸರೆಂಡರ್ ಆಗಿದೆ ಎಂಬ ರಿಪೋರ್ಟನ್ನು ಓದಿದ್ದೇನೆ. ಬಹಳ ಶೋಚನೀಯ. ಕೊಟ್ಟ ಹಣ ಹಿಂದಕ್ಕೆ ಬರಬಾರದು. ಇನ್ನು ಮೇಲಾ ದರೂ ವಾಟರ್ ಸಪ್ಲೈಗೆ ಕೊಟ್ಟ ಹಣ ಲ್ಯಾಪ್ಸ್ ಆಗ ಬಾರದು. ಈ ಹಣವನ್ನು ಖರ್ಚು ಮಾಡುವುದಕ್ಕೆ ಮಾರ್ಚಿತಿಂಗಳಿನಿಂದ ಜೂನ್ ಆಖೈರಿನತನಕ ಅವಕಾಶ ಕೊಡಿ. ಆವಾಗ ಸರ್ಕಾರದ ರೊಕ್ಕ ಹಿಂದಕ್ಕೆ ಬರುವು ದಿಲ್ಲ. ಫೈನಾನ್ಷಿಯಲ್ ಇಯರ್ ಮಾರ್ಚಿ ಕೊನೆ ಎಂದು ಇಡಬೇಡಿ. ರೆವಿನ್ಯೂ ಇಯರ್ ಕೊನೆಯಾದ ಮೇಲೆ, ಅಂದರೆ ಜುಲೈ ತಿಂಗಳಲ್ಲಿ ಲ್ಯಾಪ್ಸ್ ಮಾಡಿಕೊಳ್ಳಿ. ನಾನು ರೆವಿನ್ಯೂ ಕೋಡ್ ಪ್ರಕಾರ ಮಾತನಾಡುತ್ತಿ ದ್ದೇನೆ. ಈ ಅಭಿವೃದ್ಧಿ ಯೋಜನೆ ಅಂದರೆ ಏನು ಮಾಡುತ್ತೀರಿ? ಕಟ್ಟಡ ಕಟ್ಟಿಸುವುದು ಅಥವಾ ಹಾದಿ ಚಲೋ ಮಾಡುವುದು. ಈ ಯೋಜನೆಯಿಂದ ಪ್ರತಿ ಯೊಬ್ಬ ಮನುಷ್ಯನ ಆದಾಯ, ಹುಟ್ಟುವಳಿ ಜಾಸ್ತಿ ಆಗಬೇಕು. ಆವಾಗ ಪ್ರತಿಯೊಬ್ಬ ವ್ಯವಸಾಯಗಾರ ನಲ್ಲಿಯೂ ಉತ್ಪತ್ತಿ ಹೆಚ್ಚು ಮಾಡಬೇಕೆಂಬ ಹುರುಪು ಬರುತ್ತದೆ. ಅವನಿಗೆ ಚುರುಕಾಗಿ ತನ್ನ ಕೆಲಸ ಮಾಡ ಬೇಕು ಎನ್ನುವ ಬುದ್ಧಿಯೂ ಹುಟ್ಟುತ್ತದೆ. ಹಾಗೆ ಬುದ್ಧಿ ಹುಟ್ಟಿಸಿದರೆ, Government development project ಮತ್ತು national extension serviceಗಳ ಉದ್ದೇಶ ಸಫಲವಾಗುತ್ತದೆ. ಇಲ್ಲದಿ ದ್ದರೆ ಕಟ್ಟಡ, ಹಾದಿ ಮಾತ್ರ ಆಗುತ್ತದೆ. ಈ ಯೋಜನೆ ಗಳಿಂದ ವ್ಯವಸಾಯಗಾರನ ಉತ್ಪನ್ನ ಜಾಸ್ತಿಯಾಗಿ ದೆಯೇನು? ಈ ಬುದ್ಧಿ ಹುಟ್ಟದಿದ್ದರೆ Community Development Project ಮತ್ತು National Extension Scheme ಗಳೆಲ್ಲಾ ನಿರುಪಯೋಗ. ಮೂರು ನಾಲ್ಕು ವರ್ಷಗಳೊಳಗೆ ಈ ಸ್ಕೀಮುಗಳಿಗೆ ಕೊಡುತ್ತಿದ್ದ ಹಣವನ್ನು ನಾಲ್ಕುವರೆಲಕ್ಷ ರೂಪಾಯಿ ನಿಂದ ಹದಿನೈದು ಲಕ್ಷರೂಪಾಯಿಗೆ ಸರ್ಕಾರದವರು ಏರಿಸಿದ್ದಾರೆ. ಈ ಮೂರು ನಾಲ್ಕು ವರ್ಷಗಳೊಳಗೆ ವ್ಯವಸಾಯಗಾರನಿಗೆ ತಾನು ಹೆಚ್ಚು ಬೆಳೆ ಬೆಳೆಯಬೇ ಕೆಂಬ ಬುದ್ಧಿ ಹುಟ್ಟಿದೆಯೇ? ಇಲ್ಲ. ಬರೀ ಕಟ್ಟಡಗಳಾಗು ತ್ತಿವೆ. ಅವನಲ್ಲಿ ಇಂಥಹ ಬುದ್ಧಿ, ಉತ್ಸಾಹ, ಹುರುಪು ಹುಟ್ಟುವಂತೆ ಮಾಡಿದರೆ ನಾವು ನಿಜವಾದ ಪ್ರಗತಿ ಯನ್ನು ಸಾಧಿಸಲು ಸಾಧ್ಯ.

ಶ್ರೀಮತಿ ಸುಶೀಲಾ ಬಾಯ್ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ಈ ಬಜೆ ಟ್ಟನ್ನು ಸ್ವಾಗತಿಸಿ ನಾಲ್ಕು ಮಾತುಗಳನ್ನು ಹೇಳು ತ್ತೇನೆ. ನಮ್ಮ ಹಿಂದೂಸ್ಥಾನದಲ್ಲಿ ಆಹಾರ ಧಾನ್ಯದ ಕೊರತೆ ಬಹಳವಾಗಿ ಇದೆ. ಆಹಾರ ಧಾನ್ಯಕ್ಕೆ ಎಲ್ಲರೂ ಕಷ್ಟಪಡಬೇಕಾಗಿದೆ. ಮಾನ್ಯ ಮಂತ್ರಿಗಳು ಈ ಸಭೆ ಯಲ್ಲಿ ಮಾತನಾಡುತ್ತ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸಬೇಕು ಎಂದು ಹೇಳಿದರು. ಹೆಚ್ಚು ಆಹಾರ ಬೆಳೆ ಬೆಳೆಯ ಬೇಕು ಎನ್ನುವಾಗ ನಮ್ಮ ಬಿಜಾಪುರ ಜಿಲ್ಲೆಯ ವಿಷಯದಲ್ಲಿ ನಾಲ್ಕುಮಾತು ಹೇಳ ಬಯಸು ತ್ತೇನೆ. ಬಿಜಾಪುರದಲ್ಲಿ ಐದು ವರ್ಷದೊಳಗೆ ಮೂರು ವರ್ಷದ ಕಾಲ ಬರಗಾಲ. ಮಳೆ ಬಹಳ ಕಡಮೆ. ಮುಂಬೈ ಪ್ರಾಂತ್ಯದಲ್ಲಿ ಬಾವಿ ತಗೆಸಲಿಕ್ಕೆ 500

(ಶ್ರೀಮತಿ ಸುಶೀಲಾ ಬಾಯ್ ಹೀರಾಚಂದ್ ಷಾ)

ರೂಪಾಯಿ ಕೊಡುತ್ತ ಇದ್ದರು. ಅದೇ ರೀತಿ ತಾವೂ ಕೂಡ 500ರೂಪಾಯಿ ಕೊಡಿಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ರೀತಿ ಬಿತ್ತನೆ ಮಾಡುವ ದೆಸೆಯಿಂದ ಅವರಿಗೆ ಒಳ್ಳೆಯ ಬಿತ್ತನೆ ಬೀಜವನ್ನು ಸರ್ಕಾರದ ವತಿಯಿಂದ ಕೊಡಿಸಿ ಕೊಡಬೇಕು

ಎರಡನೆಯದು ಎಂದರೆ ದವಾಖಾನೆ ವಿಷಯ. ನಮ್ಮ ಹಳಿ ಊರಿನಲ್ಲಿ ದವಾಖಾನೆ ಬಹಳ ಇಲ್ಲ. ಯಾರಾದರೂ ಖಾಯಿಲೆ ಬಿದ್ದರು ಅಂದರೆ ಔಷಧಿ ತೆಗೆದುಕೊಳ್ಳುವುದಕ್ಕೆ ಪೇಟೆಗೆ ಬರಬೇಕಾಗುತ್ತದೆ. ಅಲ್ಲಿಗೆ ಬಂದರೆ ಆಸ್ಪತ್ರೆಯಲ್ಲಿ ಅಡ್ಮಿಷನ್ ಸಿಕ್ಕುವುದು ಬಹಳ ಕಷ್ಟ. ಆಡ್ಮಿಷನ್ ಸಿಕ್ಕಿದರೂ ಅವನಿಗೆ ಇತರ ಸೌಕರ್ಯಗಳಿರುವುದಿಲ್ಲ. ನಾನಾ ತರಹದ ಇಂಜೆಕ್ಷನ್‌ಗಳು ಬೇಕಾಗುತ್ತವೆ. ಅಂತಹ ಇಂಜೆಕ್ಷನ್‌ಗಳ ಸಪ್ಲೈ ಬಹಳ ಕಡಮೆ ಇದೆ. ನೀನೇ ಇಂಜೆಕ್ಷನ್ ಟ್ಯೂಬು ವಗೈರೆ ತೆಗೆದುಕೊಂಡು ಬರಬೇಕು ಎಂದು ಹೇಳುತ್ತಾರೆ. ಅವನು ಹಣ ಇಲ್ಲದೆ, ಅದನ್ನು ಒದಗಿಸಿಕೊಂಡು ಇರಬೇಕು, ಟ್ಯೂಬು ತರುವ ಹೊತ್ತಿಗೆ ಬೇನೆ ಜಾಸ್ತಿಯಾಗಿ ಆಖೈರಿಗೆ ಪ್ರಾಣವೇ ಹೋಗುವ ಪರಿಸ್ಥಿತಿ ಬರುತ್ತದೆ. ಬೇನೆ ಬಿದ್ದು ಹಣ ಇಲ್ಲದೇ ಇರುವಾಗ ಅವನು ಇಂಜೆಕ್ಷನ್ ಎಲ್ಲಿಂದ ತರಬೇಕು? ಆದ್ದರಿಂದ ಆಸ್ಪತ್ರೆಗಳಲ್ಲಿ ಹೆಚ್ಚಿನ ಔಷಧ ಮತ್ತು ಇತರ ಇಂಜೆಕ್ಷನ್ ವಗೈರೆ ಒದಗಿಸಿ ಉಪಕಾರಮಾಡಿ ಕೊಡಬೇಕು. ಆರೋಗ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬರಲಿ. ಬಾಗೇವಾಡಿಯಲ್ಲಿ ಮೆಟರ್‌ನಿಟಿ ಆಸ್ಪತ್ರೆಕಟ್ಟಬೇಕೆಂದು ಹೇಳಿ ಅರ್ಧಹಣ ಸರ್ಕಾರದವರು ಮತ್ತೆ ಇನ್ನರ್ಧ ಹಣ ಸಾರ್ವಜನಿಕರು ಸೇರಿ ಫಂಡ್‌ಮಾಡಿ ಇಟ್ಟಿದ್ದರು, ಮೆಟರ್ನಿಟಿವಾರ್ಡ್ ಕಟ್ಟಿ, ಅದರ ಪ್ರಾರಂಭೋತ್ಸವವೂ ಕೂಡ ಆಯಿತು. ಅಲ್ಲಿ ಒಬ್ಬ ಡಾಕ್ಟರು ಇದ್ದಾರೆ. ಅವರೂ ಕೂಡ ಕೆಲವು ಸಂದರ್ಭಗಳಲ್ಲಿ ಸಿಕ್ಕುವುದಿಲ್ಲ. ಒಬ್ಬ ಮಿಡ್‌ವೈಫ್ ಇಲ್ಲ. ಆದರೆ ಒಬ್ಬ ದಾಯಿ ಕೆಲಸಮಾಡುತ್ತಾಳೆ. ಮೆಟರ್ನಿಟಿವಾರ್ಡ್ ಕಟ್ಟಿದಮೇಲೂ ಕೂಡ ಸರಿಯಾದ ಡಾಕ್ಟರ್ ಇಲ್ಲದೆ ಈ ಪರಿಸ್ಥಿತಿ ಆಗಬಾರದು. ಆದ್ದರಿಂದ ನರ್ಸ್‌ಗಳು ಮತ್ತು ಮಿಡ್‌ವೈಫ್‌ಗಳ ತರಪೇತಿಗಾಗಿ ವರ್ಷೇ ವರ್ಷೇ ಅಷ್ಟು ಹಣ ಒದಗಿಸಿ, ತರಪೇತು ಮಾಡಿ ಅವರನ್ನು ಈ ಆಸ್ಪತ್ರೆಗಳಿಗೆ ಕಳುಹಿಸಿಕೊಡಬೇಕು.

ಮೂರನೆಯದು ಅಂದರೆ ವಿದ್ಯಾಭ್ಯಾಸದ ವಿಷಯ. ನಮ್ಮ ತಾಲ್ಲೂಕಿನಲ್ಲಿ ಕೆಲವು ಕಡೆ ಶಾಲಾ ಕಟ್ಟಡಗಳಿಗಾಗಿ ಸಾರ್ವಜನಿಕರು ಹಣ ತುಂಬಿದ್ದಾರೆ. ಮೂರು ನಾಲ್ಕು ವರ್ಷಗಳಾದರೂ ಸರ್ಕಾರದವರು ಕೊಡಬೇಕಾದ ಹಣ ಕೊಡದೆ ಕಟ್ಟಡ ಆಗಿಲ್ಲ. ಈಗ ಮತ್ತೆ ಹಣ ಕೊಡಬೇಕೆಂದರೆ ಎಲ್ಲಿಂದ ಕೊಡಬೇಕು? ಈ ವರ್ಷ ನಮ್ಮ ಜಿಲ್ಲೆ ಬರಗಾಲದ ಜಿಲ್ಲೆ ಆಗಿದೆ. ಇಂಥ ಪರಿಸ್ಥಿತಿಯಲ್ಲಿ ಬಹಳ ಕಷ್ಟವಾಗುತ್ತದೆ. ನಮ್ಮ ಸರ್ಕಾರದ ಧ್ಯೇಯ ಎಂದರೆ, ಆರು ವರ್ಷ ವಯಸ್ಸಿನ ಎಲ್ಲ ಹುಡುಗರನ್ನು ಶಾಲೆಗೆ ಕಳುಹಿಸಬೇಕು. ಅಂತಹ ಚಿಕ್ಕ ಮಕ್ಕಳಿಗೆ ಕುಳಿತುಕೊಳ್ಳಲು ಶಾಲಾ ಕಟ್ಟಡ ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಈಗ ಕೆಲವು ಕಡೆ ಶಾಲೆಗಳನ್ನು ಗುಡಿಗಳಲ್ಲಿ ನಡೆಸುತ್ತಿದ್ದಾರೆ. ಮಳೆಗಾಲದಲ್ಲಿ ಮಳೆ ಬಂದರೆ ಒಳಗೆ ನೀರು ಸೋರುತ್ತದೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಶಾಲೆಗಳನ್ನು ಬಂದುಮಾಡುತ್ತಾರೆ. ಕಟ್ಟಡದ ಸಲುವಾಗಿ ಅಲ್ಲಿನ ಜನರು ಶೇಕಡ 15 ಕೊಡಲಿಕ್ಕೆ ತಯಾರಾಗಿದ್ದಾರೆ ಮತ್ತು ಬೊಂಬಾಯ್ ಸರ್ಕಾರದವರು ಕೊಟ್ಟಿರತಕ್ಕ ಶೇಕಡ 25 ಈಗಾಗಲೇ ತೆಗೆದುಕೊಂಡಿದ್ದಾರೆ. ಆದಕಾರಣ ಅಲ್ಲಿ ಕಟ್ಟಡಗಳನ್ನು ಕಟ್ಟಲಿಕ್ಕೆ ತಾವು ಆದಷ್ಟು ಜಾಗ್ರತೆ ಪರವಾನಗಿ ಕೊಡಬೇಕು ಎಂದು ಹೇಳುತ್ತೇನೆ.

ಸಮಾಜ ಕಲ್ಯಾಣದ ಕಾರ್ಯವನ್ನು ಹೆಣ್ಣು ಮಕ್ಕಳು ಮತ್ತು ಚಿಕ್ಕಮಕ್ಕಳು ನಮ್ಮ ಭಾಗದ ಕಡೆ ಬಹಳವಾಗಿ ನಡೆಸಿದ್ದಾರೆ; ಮಾನ್ಯ ವೀರಣ್ಣಗೌಡರು ಮತ್ತು ನಮ್ಮ ಆರೋಗ್ಯ ಮಂತ್ರಿಗಳೂ ನೋಡಿದ್ದಾರೆ. ಸಮಾಜ ಕಲ್ಯಾಣ ಕಾರ್ಯ ವಿಶೇಷವಾಗಿ ನಡೆದರೆ ಹಳ್ಳಿಗಳು ಮಾದರೀ ಆಗುತ್ತವೆ. ಅದಕ್ಕಾಗಿಯೇ ಈ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದವರು ಹಣಕೊಡುತ್ತಾ ಇದ್ದಾರೆ. ಆದ್ದರಿಂದ ಸಮಾಜ ಕಲ್ಯಾಣ ಕಾರ್ಯಕ್ಕಾಗಿ ಹೆಚ್ಚಿನ ಹಣವನ್ನು ಕೊಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಈ ಸೆಕ್ರೆಟೇರಿಯಟ್‌ನಲ್ಲಿ ಯಾವುದಾದರೂ ಅರ್ಜಿ ಹಾಕಲಿ, ಪತ್ರ ಬರೆಯಲಿ ಮೂರು ನಾಲ್ಕು ತಿಂಗಳಾದರೂ ತೀರ್ಮಾನ ಬರುವುದಿಲ್ಲ. ಎರಡನೆಯ ಅರ್ಜಿ ಹಾಕಿದರೆ ಮೊದಲನೆದು ಎಲ್ಲಿ ಎಂದು ನಮ್ಮನ್ನೇ ಕೇಳುತ್ತಾರೆ. ಆದ್ದರಿಂದ ಕಾಗದ ಪತ್ರಗಳಿಗೆ ಒಂದು ತಿಂಗಳೊಳಗಾಗಿ ತೀರ್ಮಾನ ಬರುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಈ ಬಡ್ಜೆಟ್ಟನ್ನು ನಮ್ಮ ಆರ್ಥಿಕ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ತಯಾರು ಮಾಡಿದ್ದಾರೆಂದು ಹೇಳಿ ನಾಲ್ಕು ಮಾತುಗಳನ್ನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ನಮ್ಮ ಆರ್ಥಿಕ ಸಚಿವರು ರಚಿಸಿರತಕ್ಕ ಈ ಬಡ್ಜೆಟ್ಟನ್ನು ಸರ್‌ಪ್ಲಸ್ ಬಡ್ಜೆಟ್ ಎಂದು ಹೇಳುತ್ತಾರೆ. ಅದು ಯಾವ ರೀತಿ ಸರ್‌ಪ್ಲಸ್ ಎಂದು ಹೇಳುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ನಮಗೆ ಹೊರಗಿನಿಂದ ಎಷ್ಟೋ ಸಾಲ ಬಂದಿದೆ, ಅದನ್ನು ಬಿಟ್ಟು, ಸರ್‌ಪ್ಲಸ್ ಅಂತ ಹೇಳಿ ತೋರಿಸಿದರೆ ಅದು ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ ಎಂದು ಹೇಳಬೇಕಾಗಿದೆ. ಈಗ ನಾವು ಬೇಕಾದಷ್ಟು ಸಾಲಮಾಡಿದ್ದೇವೆ. ಇನ್ನೂ ಬೇಕಾದಷ್ಟು ದುಡ್ಡು ಕೊಡಬೇಕು. ಮುಂದೆ ನಡೆಸಬೇಕಾಗಿರುವ ಕಾರ್ಯಕ್ರಮಗಳಿಗೆ ಅಲಾಟ್‌ಮಾಡಿರತಕ್ಕ ಹಣ ಯಾವ ರೀತಿ ಖರ್ಚಾಗುತ್ತದೆಯೋ, ಇಲ್ಲವೋ ಎಂಬುದನ್ನು ಸಂಪೂರ್ಣವಾಗಿ ನಾವು ನೋಡಬೇಕಾಗಿದೆ, ಇದು ಸರ್‌ಪ್ಲಸ್ ಎಂದರೆ ಅಳಿಯ ಅಲ್ಲ ಮಗಳ ಗಂಡ ಅಂದ ಹಾಗೆ ಆಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇದು ಖೋತಾ ಎಂದು ಕಾಣುತ್ತವೆ. ಈಗ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಸುಮಾರು ಹತ್ತು ವರ್ಷಗಳಾದವು. ಹತ್ತು ವರ್ಷಗಳಿಂದ 36 ಕೋಟಿ ರೂಪಾಯಿ ಇದ್ದಂಥ ರಿಸರ್ವ್‌ಫಂಡ್ ಹೋಗಿ, ಸಾಲ ನ್ಯಕ್ಕೆ 87ಕೋಟಿ ರೂಪಾಯಿ ಸಾಲಮಾಡಿದ್ದಾರೆ. ಅದಕ್ಕಾಗಿ ಪ್ರತಿವರ್ಷ ಐದು ಕೋಟಿ ರೂಪಾಯಿ ಕಂತು ಕೊಡ ಬೇಕಾಗುವದರಿಂದ ಇನ್ನು ಮುಂದೆ ಖರ್ಚು ಹೆಚ್ಚು ಬರುತ್ತಾ ಇದೆ. ಇದರಿಂದ ವರಮಾನ ನಿಜವಾಗಿಯೂ ಈಗ ಇರುವಷ್ಟೇ ಉಳಿಯುತ್ತದೆ ಎಂದು ಹೇಳುವುದು ಸಮರ್ಪಕವಾಗಿ ಕಾಣುವುದಿಲ್ಲ.

ಇನ್ನು ವಿದ್ಯಾ ಇಲಾಖೆಯ ಒಂದು ವಿಷಯವನ್ನು ಸರಕಾರದ ಗಮನಕ್ಕೆ ತರುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಶಾಲಾಕಟ್ಟಡಕ್ಕಾಗಿ ಜನರು ಒಂದಿಷ್ಟು ಭಾಗ ದುಡ್ಡು ಕೊಟ್ಟರೆ ಕಟ್ಟಡ ಕಟ್ಟಿಸಿ ಕೊಡುವುದು ಸಾಧ್ಯವಾಗುವುದು ಎಂಬದಾಗಿ ಹೇಳಿದ್ದನ್ನು ಈಗತಾನೇ ನಾನು ಕೇಳಿದೆ. ಈ ರೀತಿ ಜನರಿಂದ ದುಡ್ಡು ಕೇಳುವುದು ಸರಿಯಲ್ಲ. ತಾಲ್ಲೂಕಾ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಸರಕಾರದವರೇ ಶಾಲಾ ಕಟ್ಟಡಗಳನ್ನು ಕಟ್ಟಿಕೊಡುತ್ತ,

ಹಳ್ಳಿಗಳಲ್ಲಿಯ ಜನರು ಸ್ಕೂಲ ಕಟ್ಟಡಕ್ಕಾಗಿ ಇಷ್ಟು ದುಡ್ಡು ಕೊಟ್ಟರೆ ಕಟ್ಟಿಸಿ ಕೊಡುತ್ತೇವೆ ಎಂದು ಹೇಳುವುದು ನ್ಯಾಯವಾದ್ದಲ್ಲ. ಸಾಧ್ಯವಿದ್ದ ಮಟ್ಟಿಗೆ ಹಳ್ಳಿಗಾಡಿನ ಎಲ್ಲ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕಾದುದು ಪ್ರಜಾಪ್ರಭುತ್ವದಲ್ಲಿ ಸರಕಾರದ ಕರ್ತವ್ಯವಾಗಿದೆ. ಹಳ್ಳಿಗಾಡಿನಲ್ಲಿ ಸರ್ಕಾರ ಶಾಲಾಕಟ್ಟಡಗಳನ್ನು ಕಟ್ಟಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕು

ಒಬ್ಬ ಸದಸ್ಯರು ವಿರೋಧ ಪಕ್ಷವನ್ನು '' ಮುಟ್ಟಿದರೆ ಮುನಿ'' ಎಂದು ಕರೆದರು. ಸೋಕಿದರೆ ಸುಂಕ ಹಾಕುವ ಜನ ಏಕೆ ಹೀಗೆ ಮಾತನಾಡುತ್ತಾರೆ ? ನಾವು ಸಹಕಾರ ಕೊಟ್ಟಿಲ್ಲವೆ ?

ನಮ್ಮ ತಾಲ್ಲೂಕಿನಲ್ಲಿ ಅನೇಕ ಹೈಸ್ಕೂಲುಗಳು ಸ್ಥಾಪನೆಯಾಗಿವೆ. 600-800 ವಿದ್ಯಾರ್ಥಿಗಳು ಇದ್ದಾರೆ. ಆದರೆ ಹೈಸ್ಕೂಲನ್ನು ಅಪ್‌ಗ್ರೇಡ್ ಮಾಡುವ ವಿಚಾರದಲ್ಲಿ ಒಂದು ಕಡೆ ಒಂದು ರೀತಿ ಇನ್ನೊಂದು ಕಡೆ ಇನ್ನೊಂದು ರೀತಿ ಮಾಡುತ್ತಿದ್ದೀರಿ.

ಇನ್ನು ವಿದ್ಯಾ ಇಲಾಖೆಯಲ್ಲಿ ಸ್ಟೋರ್ ಪರ್ಚೇಜ್ ಸಮಿತಿಯೊಂದು ಇದೆ. ಇದನ್ನು ಹೇಳುವವರು ಕೇಳುವವರು ಯಾರೂ ಇಲ್ಲವೆ ? ನಿಜವಾಗಿ ಸರಕಾರ ಇದೆಯೇ ಎಂದು ಅನಿಸುತ್ತದೆ. ಆರುತೊಲ ಅಲ್ಯೂಮಿನಿಯಂನ ಒಂದು ತಟ್ಟೆಗೆ ನಾಲ್ಕು ರೂಪಾಯಿ, ಒಂದು ಜರಡಿಗೆ ಹತ್ತು ರೂಪಾಯಿ, ಒಂದು ಒನಕೆಗೆ 20 ರೂಪಾಯಿ ಕೊಟ್ಟು ಕೊಂಡು ತಿಪಟೂರು ಹೈಸ್ಕೂಲಿಗೆ ಒದಗಿಸಲಾಗಿದೆ. ಈ ರೀತಿ ಹಣ ಪೋಲು ಆಗುತ್ತಾ ಇದೆ. ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇಂಥವರ ಕೈಯಲ್ಲಿ ಸರಕಾರ ಕೊಟ್ಟು ನಾವು ಏನು ಮಾಡಬೇಕು ?

ಇನ್ನು ಪೋಲೀಸ್ ಖಾತೆಯ ವಿಚಾರ :—ಒಂದು ಪೇಟ ಕೊಟ್ಟು ಬಿಟ್ಟರೆ ಸಂಬಳವಿಲ್ಲದೆ ಜನರು ಪೋಲೀಸ್ ಕೆಲಸಕ್ಕೆ ಬರಲು ಸಿದ್ಧರಿದ್ದಾರೆ. ನೀವೇಕೆ ವರ್ಷಕ್ಕೆ ಮೂರು ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ ? ಇದು ಬಹಳ ವಿಷಾದದ ಸಂಗ . ಈ ಇಲಾಖೆಯಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಏನಾದರೂ ತಕರಾರು ಮಾಡಲು ಹೋದರೆ ಅದಕ್ಕೆ ಸಾಕ್ಷ್ಯ ತೆಗೆದುಕೊಂಡು ಬರಲು ಸಚಿವರೇ ನಮಗೆ ಹೇಳುತ್ತಾರೆ.

ಇನ್ನು ಪಾನ ನಿರೋಧ ವಿಷಯ. ಯಾವದೋ ಪ್ರಭಾವಕ್ಕೆ ಒಳಗಾಗಿ ಪಾನ ನಿರೋಧವನ್ನು ಅರ್ಧಂಬರ್ಧವಾಗಿ ಜಾರಿಗೆ ತಂದಿರುವುದು ಸರಿಯಲ್ಲ. ಒಂದು ಭಾಗದಲ್ಲಿ ಮದ್ಯಪಾನ ಪ್ರತಿಬಂಧ ಕಾನೂನನ್ನು ಜಾರಿಗೆ ತಂದು ಮತ್ತೊಂದು ಭಾಗದಲ್ಲಿ ಜಾರಿಗೆ ತರದೇ ಇರುವುದಕ್ಕೆ ಕಾರಣವೇನು ? ಎಲ್ಲಿ ಪಾನ ಪ್ರತಿಬಂಧವಿಲ್ಲವೋ ಅಂಥಲ್ಲಿಗೆ ಹೋಗಿ ಜನಗಳು ಕುಡಿದು ಬರುತ್ತಾರೆ. ಹೀಗೆ ಆದರೆ ಈ ಕಾನೂನು ಹೇಗೆ ಯಶಸ್ವಿಯಾಗಬಹುದು ? ಎಷ್ಟೋ ಜನರು ಕುಡಿಯುವುದಕ್ಕಾಗಿಯೇ ಅಂಥ ಸ್ಥಳಗಳಿಗೆ ಹೋಗುತ್ತಾರೆ. ಇದರಿಂದ ದೇಶವೂ ಅಭಿವೃದ್ಧಿಯಾಗದು ; ಜನರ ಆರೋಗ್ಯವೂ ಕೆಟ್ಟುಹೋಗುತ್ತದೆ. ಆದುದರಿಂದ ಈ ಮದ್ಯಪಾನ ನಿರೋಧ ಕಾನೂನನ್ನು ಜಾರಿಗೆ ತರುವುದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕು. ನಾನು ಏನೇನೋ ಹೇಳಬೇಕೆಂದಿದ್ದೆ. ಆದರೆ ಸಚಿವರು ನೊಂದ ಮನಸ್ಸಿನಲ್ಲಿದ್ದಾರೆ. ಆದ್ದರಿಂದ ಹೇಳೋದಿಲ್ಲ.

ಉಪಾಧ್ಯಕ್ಷರು.—ಏಕೆ ನೊಂದಿದ್ದಾರೆ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ —ಪಾಪ ಏನೋ ಇದೆ. ಮುಖ ನೋಡಿದರೆ ನನಗೆ ಹಾಗೆ ಅನಿಸುತ್ತೆ.

ಕೆಲವು ಕಡೆ ನೀರಾ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ. ಇದರಿಂದ ಹಿಂದಿನ ಬಾಗಿಲಿನಿಂದ ಬಂದು ಕುಡಿಯುವವರಿಗೆ ಅನುಕೂಲವಾಗಿದೆ. ಕಣ್ಣಿಗೆ ಇದೊಂದು ಪರದೆಯಾಗಿದೆ. ದುಡ್ಡು ಮಾತ್ರ ವಿನಾ ಕಾರಣ ಖರ್ಚಾಗುತ್ತಿದೆ. ಸಮಾಜವಾದೀ ಸಮಾಜ ರಚನೆ ಮಾಡುತ್ತೇವೆಂದು ಬರಿ ಬಾಯಲ್ಲಿ ಹೇಳುತ್ತಾರೆ. ಒಬ್ಬ ಜವಾನನಿಗೆ 14 ರೂಪಾಯಿ ಸಂಬಳ ಒಂದು ಕಡೆ ಇದ್ದರೆ ಮೂರು ಸಾವಿರ ರೂಪಾಯಿ ಸಂಬಳದ ಅಧಿಕಾರಿ ಮತ್ತೊಂದು ಕಡೆ ಇದ್ದಾರೆ. ನೀವು ನಿಜವಾದ ಸೋಷಲಿಸ್ಟರೇ ಅಥವಾ ಮಾತಿನ ಸೋಷಲಿಸ್ಟರೇ ನೀವೇ ಹೇಳಿ. ಅಧಿಕಾರಿಗಳಿಗೆ 100 ರಿಂದ 350 ರೂಪಾಯಿಗಳವರೆಗೆ ಭತ್ಯ ಕೊಡುವುದು ಏತಕ್ಕೆ ಎಂಬುದನ್ನು ಯೋಚನೆ ಮಾಡಬೇಕು.

4-30 P.M.

ವ್ಯವಸಾಯದ ಇಲಾಖೆ ಮಂತ್ರಿಗಳು ರೈತನ ಮಕ್ಕಳು. ಅವರು ಮೊದಲು ರೈತರ ಕಷ್ಟಸುಖ ಯೋಚನೆಮಾಡಬೇಕು. ಈ ದಿವಸ ಗಾಡಿ ಪಟ್ಟೆ, ಗುಳ ವಗೈರೆ ತರಬೇಕಾದರೆ ತಿಪಟೂರಿನಿಂದ ತುಮಕೂರಿಗೆ ಬಂದು 40 ರೂಪಾಯಿ ಲಾರಿ ಬಾಡಿಗೆ ಕೊಟ್ಟು ಹೇರಿಕೊಂಡು ಹೋಗಬೇಕು. ಹೀಗಾದರೆ ಹೇಗೆ ? ಯಾವ ತಾಲ್ಲೂಕಿಗೆ ಎಷ್ಟು ಬೇಕೆಂಬುದನ್ನು ಪರಿಶೀಲಿಸಿ ತಾಲ್ಲೂಕು ಸೊಸೈಟಿಗಳಿಗೆ ರೈತರಿಗೆ ವ್ಯವಸಾಯಕ್ಕೆ ಬೇಕಾದ ಸಾಮಾನುಗಳನ್ನು ಪೂರ್ಣವಾಗಿ ಮಳೆಗಾಲಕ್ಕೆ ಮುಂಚೆ ಒದಗಿಸಬೇಕು ರೈತರಿಗೆ ಬೇಕಾದ ಗೊಬ್ಬರ, ಗುಳ, ಬೀಜ ಮುಂತಾದ್ದನ್ನು ನೇರವಾಗಿ ಅವರಿಗೆ ಹಂಚಿಕೆ ಮಾಡಬೇಕಾದದ್ದು ತಮ್ಮ ಕರ್ತವ್ಯ. ಈ ದಿವಸವೇನೋ ತಾವು ಮಂತ್ರಿಯಾಗಿರಬಹುದು. ಆದರೆ ಎಂದಾದರೂ ಒಂದು ದಿವಸ ಜಮೀನಿಗೆ ನೀವೂ ಹೋಗಬೇಕಾಗುತ್ತದೆ. ಆಗ ತೊಂದರೆಯಾಗುತ್ತದೆಂಬುದನ್ನು ಗಮನಿಸಬೇಕು. ಮಂತ್ರಿಗಳು ತಮ್ಮ ತಾಲ್ಲೂಕಿನಲ್ಲಿರುವ ವ್ಯವಸಾಯಗಾರರಿಗಾದರೂ ಏನು ಸೌಲಭ್ಯ ಬೇಕೆಂಬುದನ್ನು ಗಮನಿಸಬೇಕು. ಉತ್ತರದೇಶದಲ್ಲಿ ಒದಗಿಸಿರುವಷ್ಟು ಅನುಕೂಲ ನಮ್ಮ ಕಡೆ ಇಲ್ಲ. ಪ್ರತಿಯೊಂದು ತಾಲ್ಲೂಕಿಗೂ ಇಷ್ಟು ಕೋಟಾ ಎಂದು ನಿಗದಿ ಆಗಬೇಕು, ಅದನ್ನು ಅಲ್ಲಿರುವ ಸೊಸೈಟಿಗಳಿಗೆ ಒದಗಿಸಿ ಆ ಮೂಲಕ ಜನತೆಗೆ ಹಂಚಬೇಕು. ವ್ಯವಸಾಯಕ್ಕೆ ಸಂಬಂಧಪಟ್ಟಂಥ ಸೊಸೈಟಿಗಳಿಗೆ ಹೀಗೆ ಸರಬರಾಯಿಮಾಡಿ ನೇರವಾಗಿ ರೈತರಿಗೆ ಬೇಕಾದ ಸಾಮಾನುಗಳು ಸಿಕ್ಕುವ ಹಾಗೆ ಏರ್ಪಾಡು ಮಾಡಬೇಕು. 180 ಟ್ರಾಕ್ಟರುಗಳು ನಮ್ಮಲ್ಲಿದ್ದರೂ 40 ಮಾತ್ರ ಸಂಸ್ಥಾನದಲ್ಲಿ ಕೆಲಸಮಾಡುತ್ತಿವೆಯೆಂದು ಹೇಳುತ್ತಾರೆ. ಹೀಗಾದರೆ ದೇಶ ಉಳಿಯುತ್ತದೆಯೆ? ಮಾದರಿ ಮೈಸೂರಿನವರೆನಿಸಿಕೊಂಡ ನಾವು ಈಗ ಹೊರಗೆ ಹೋದರೆ ಮೈಸೂರಿನವರೆಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ.

ಗ್ರ್ಯಾಂಟಿನ ವಿಷಯದಲ್ಲಿ ಸ್ಥಳೀಯ ಸಂಸ್ಥೆಗಳ ಸಚಿವರಿಗೆ ಒಂದು ವಿಚಾರ ಹೇಳುತ್ತೇನೆ. ಮಾರ್ಚಿ ಇಪ್ಪತ್ತರಲ್ಲಿ ಗ್ರ್ಯಾಂಟು ಕೊಟ್ಟು ಹಂಚು ತೆಗೆದುಕೊಳ್ಳಿ, ರೂರಲ್ ಡೆವಲಪ್‌ಮೆಂಟ್ ಸ್ಕೀಂ ಪ್ರಕಾರ ಕೆಲಸ ಮಾಡಿ ಎಂದು ಹೇಳಿದರೆ ಸಕಾಲದಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವೆ ? ನ್ಯಾಯವಾಗಿ ಕೆಲಸಮಾಡಬೇಕಾದರೆ ಗ್ರ್ಯಾಂಟನ್ನು ಮೊದಲೇ ಕೊಡಬೇಕಾದದ್ದು ಅವಶ್ಯಕ. ಹೋದವರ್ಷ ಕೂಡ ಈ ವಿಚಾರ ಹೇಳಿದೆ; ಹಿಂದಿನ ಸದಸ್ಯರೂ ಸಹ ಹೇಳುತ್ತಿದ್ದರೆಂದು ಕಾಣುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಸೆಪ್ಟೆಂಬರ್ ತಿಂಗಳಲ್ಲಿ ಗ್ರಾಂಟು ಕೊಟ್ಟಿದೆ. ತಾವು ಹೇಳುವುದು ಅಡಿಷನಲ್ ಅಲಾಟ್ ಮೆಂಟ್ ಯಾವುದೋ ಇರಬೇಕು.

ಶ್ರೀ ಕೆ. ವಿ. ರೇವಣ್ಣಸಿದ್ದಪ್ಪ.—ಹೆಂಚಿಗಾಗಿ ಟೆಂಡರ್ ಕರೆದು 235ರೂಪಾಯಿಗಳ ಟೆಂಡರನ್ನು ಒಪ್ಪಿಕೊಂಡರು. ಮೊದಲೇ ಟೆಂಡರು ಕರೆದು ಸಾಕಷ್ಟು ಕಾಲಾವಕಾಶ ಕೊಟ್ಟಿದ್ದರೆ ಹೆಚ್ಚು ಟೆಂಡರುಗಳು ಬರುತ್ತಿದ್ದವು. ಆಗ ಲೋಯೆಸ್ಟ್ ಟೆಂಡರನ್ನು ಒಪ್ಪಬಹುದಾಗಿತ್ತು. ಗ್ರಾಂಟು ನಿಧಾನವಾಗಿ ಬಂದುದರಿಂದ, ಟೆಂಡರು ಬರಲು ಕಾಲಾವಕಾಶ ಇಲ್ಲದೆ ಒಬ್ಬರಿಂದ ಮಾತ್ರ ಟೆಂಡರು ಬಂತು. 235 ರೂಪಾಯಿಗಳಂತೆ ಹೆಂಚನ್ನೊದಗಿಸಲು ಬಂದಿದ್ದ ಆ ಟೆಂಡರನ್ನು ಒಪ್ಪಿದರು. ಇದರಿಂದ ಬಡವರಿಗೆ ಅನಾನುಕೂಲವಾಯಿತು. ಹೆಚ್ಚು ಟೆಂಡರುಗಳು ಬಂದಿದ್ದರೆ ಸಾವಿರಕ್ಕೆ 60-70 ರೂಪಾಯಿ ಉಳಿಯುತ್ತಿತ್ತು.

ರೂರಲ್ ಡೆವಲಪ್‌ಮೆಂಟ್ ಸ್ಕೀಮುಗಳಲ್ಲಿ ಚರಂಡಿಗೆ, ಸಣ್ಣ ಓಣಿಗಳಿಗೆ ಕಲ್ಲುಹಾಕುವುದಕ್ಕೆ ಹಣ ಕೊಡುತ್ತಾರೆ. ಆಗ ಎಲ್ಲೆಲ್ಲೋ ಇರುವ ಕಲ್ಲನ್ನು ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಾರೆ. ಇದಕ್ಕೆ ಅಧಿಕಾರಿಗಳು ಜವಾಬ್ದಾರರಲ್ಲ, ಸರ್ಕಾರದವರೇ ಜವಾಬ್ದಾರರು. ಅರ್ಜೆಂಟಾಗಿ ಗ್ರಾಂಟು ಕೊಟ್ಟರೆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಮುಂದಾದರೂ ಗ್ರಾಂಟನ್ನು ಮೊದಲೇ ಮಂಜೂರು ಮಾಡಿ ತಾಲ್ಲೂಕುಗಳಿಗೆ ಸಕಾಲದಲ್ಲಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ಕೂಲು ಇಲಾಖೆಯಲ್ಲಿರುವ ನ್ಯೂನತೆಗಳನ್ನು ಈಗಲಾದರೂ ಗಮನಿಸಿ ಸಂಪಡಿಸಬೇಕು. ಹಿಂದೆ ನಾನು ಹಿಡಿದುಕೊಟ್ಟ ಕೇಸಿನ ವಿಚಾರ ತೀರ್ಮಾನವಾಗಿದೆಯೋ, ಇಲ್ಲವೋ ತಿಳಿಯದು. ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿರುವ ಕಷ್ಟ ಪರಿಹಾರ ಮಾಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ವಿ. ದೇಶಾಯ್ (ಗಂಗವತಿ).—ಅಧ್ಯಕ್ಷ ಮಹಾಶಯರೇ, ಮಾನ್ಯ ಸಭೆಯ ಎದುರಿಗೆ ಇಟ್ಟಿರುವ ಸರ್ಪ್ಲಸ್ ಬಡ್ಜೆಟ್ಟನ್ನು ಸಮರ್ಥಿಸುತ್ತಾ ನಾಲ್ಕು ಸೂಚನೆಗಳನ್ನು ಹೇಳಬಯಸುತ್ತೇನೆ. ಇಂಥ ಸಮಯದಲ್ಲಿ ಇತರ ಸ್ಟೇಟುಗಳಲ್ಲಿ ಕೆಲವು ಪಾಲಿಸಿ ಸ್ಟೇಟ್‌ಮೆಂಟ್ ಮಾಡುವುದುಂಟು. ಆದರೆ ಮಾನ್ಯ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಕೆಲವೊಂದು ವಿಷಯ ಪೂರ್ಣವಾಗಿ ತೋರಿಸಿಲ್ಲ. ಮೊದಲನೆಯದಾಗಿ ನಮ್ಮ ಮೈಸೂರು ಸಂಸ್ಥಾನದ ನ್ಯಾಷನಲೈಜೇಷನ್ ಪಾಲಿಸಿ ಯಾವರೀತಿ ಇರಬೇಕು ಮತ್ತು ಯಾವಯಾವ ವಿಷಯಗಳಮೇಲೆ ನ್ಯಾಷನಲೈಜೇಷನ್ ಪಾಲಿಸಿ ಅನ್ವಯಿಸಬೇಕು ಎಂಬುದನ್ನು ತೋರಿಸಿಲ್ಲ. ಇಂಟಿಗ್ರೇಟೆಡ್ ಏರಿಯಾದಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣವಾಗಿದೆ, ಹಳೆಯ ಮೈಸೂರಿನಲ್ಲಿ ಆಗಿಲ್ಲ. ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಮಾನ್ಯ ಆರ್ಥಿಕ ಸಚಿವರು ಒಂದು ಹೇಳಿಕೆ ಕೊಡಬೇಕಾಗಿತ್ತೆಂದು ಕಾಣುತ್ತದೆ. ಪ್ರಶ್ನೋತ್ತರಕಾಲದಲ್ಲಿ ಮಾನ್ಯ ಗೃಹಸಚಿವರು ರಾಷ್ಟ್ರೀಕರಣ ನಿಧಾನವಾಗಿ ಆಗಬೇಕು, ಅದಕ್ಕೆ ಹತ್ತುವರ್ಷಗಳಾದರೂ ಬೇಕು ಎಂದು ಹೇಳಿದರು. ನಮ್ಮಕಡೆ ರಾಷ್ಟ್ರೀಕರಣಕ್ಕೆ ಹತ್ತುವರ್ಷಕಾಯಬೇಕಾಗಿಲ್ಲ. ಆದಷ್ಟು ತೀವ್ರವಾಗಿ ಈ ವಿಚಾರದಲ್ಲಿ ಗಮನ ಕೊಟ್ಟು ರಾಷ್ಟ್ರೀಕರಣ ಮಾಡಬೇಕೆಂದು ಹೇಳಬಯಸುತ್ತೇನೆ.

ಹಳೆಯ ಮೈಸೂರಿನಲ್ಲಿರುವ ಕೋಲಾರದ ಚಿನ್ನದ ಗಣಿ ರಾಷ್ಟ್ರೀಕರಣ ಮಾಡಿದ್ದಾರೆ. ಆದರೆ ಇಂಟಿಗ್ರೇಟೆಡ್ ಪ್ರದೇಶದಲ್ಲಿರುವ ಹಟ್ಟಿ ಬಂಗಾರದ ಗಣಿ ವಿಚಾರದಲ್ಲೇನೂ ಹೇಳಿಲ್ಲ. ಅದರಲ್ಲಿ ಶೇಕಡ 80ರಷ್ಟು ಷೇರುಗಳು ಸರ್ಕಾರಕ್ಕೆ ಸೇರಿವೆ. ಆದರೆ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಬರುವಾಗ್ಗೆ ಅದು ಮೈಸೂರಿಗೆ ಬಂತೋ ಇಲ್ಲವೋ ಗೊತ್ತಿಲ್ಲ. ಉಳಿದ ಶೇಕಡ 20 ರಷ್ಟು ಸರ್ಕಾರ ತೆಗೆದುಕೊಂಡು ಅದನ್ನೂ ರಾಷ್ಟ್ರೀಕರಣ ಮಾಡಬೇಕೆಂದು ಹೇಳಬಯಸುತ್ತೇನೆ.

ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪುಟ್ಟಸ್ವಾಮಿಯವರು ಪಾನನಿರೋಧ ನೀತಿಯ ವಿಚಾರವನ್ನು ಸುದೀರ್ಘವಾಗಿ ಹೇಳಿದ್ದಾರೆ. ನಾನು ಪೂರ್ಣವಾಗಿ ಅದನ್ನು ಸಮರ್ಥಿಸುತ್ತೇನೆ. ಕಾಂಗ್ರೆಸ್ ಪಕ್ಷವೇ ಒಪ್ಪಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ನಿರ್ಣಯಮಾಡಿದೆ. ಅದರಂತೆ ಜಾರಿಗೆ ತರಬೇಕೆಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಇದುವರೆಗೂ ಬಡ್ಜೆಟ್ ಸರ್ಪ್ಲಸ್ ಆಗಿದೆಯೋ ಅಥವಾ ಖೋತಾ ಆಗಿದೆಯೋ ಎಂಬುದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನನಗನ್ನಿಸುತ್ತದೆ, ಸರ್ಪ್ಲಸ್ ಆಗಿರಲಿ, ಖೋತಾ ಆಗಿರಲಿ ದೇಶ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿರುವಾಗ ಅನೇಕ ತೊಂದರೆಗಳು ಬರುವುದು ಸಹಜ. ಅನೇಕ ಖರ್ಚುಗಳಿದ್ದು ಬಹುಮಟ್ಟಿಗೆ ಖೋತಾ ಬಡ್ಜೆಟ್ ಆಗಬೇಕಾಗಿರುತ್ತದೆ. ಈ ವರ್ಷವೇನೋ ಶ್ರೀಮಾನ್ ಮರಿಯಪ್ಪನವರು ಪ್ರಯತ್ನಪೂರ್ವಕವಾಗಿ ಸರ್ಪ್ಲಸ್ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿದ್ದಾರೆ. ಇದೇನೂ ಅಷ್ಟು ಮಹತ್ವದ್ದೆಂದು ನಾನೂ ಭಾವಿಸಲಾಗದು. ನಮ್ಮ Financial position ಚೆನ್ನಾಗಿದೆಯೋ, ನಮಗೆ ಹೆಚ್ಚು ಸಹಕಾರಿಯಾಗಿದೆಯೋ ಎಂಬುದು ಮುಖ್ಯ. ಇದರ ವಿಚಾರವಾಗಿ ಹೇಳುವುದಾದರೆ, ನಮ್ಮ ನವ ಮೈಸೂರು ಸಂಸ್ಥಾನಕ್ಕೆ ಇಂದು 82 ಕೋಟಿ ರೂಪಾಯಿಗಳ ಸಾಲವಿದೆಯೆಂದು ಅವರೇ ಹೇಳಿದ್ದಾರೆ. ಇದನ್ನು ತೀರಿಸುವುದಕ್ಕೆ ನಮಗೆ ಶಕ್ತಿಯಿದೆ. ಆದರೆ ಅವರೇ ತಿಳಿಸಿರುವಂತೆ ಇದೇ ರೀತಿ ಸಾಲ ತೆಗೆದುಕೊಳ್ಳುತ್ತಾ ಹೋದರೆ, ನಮ್ಮ ಸಾಲ 200 ಕೋಟಿ ರೂಪಾಯಿಗಳವರೆಗೂ ಹೋಗುತ್ತದೆ. ಇದು ನಮ್ಮ ಸಂಸ್ಥಾನಕ್ಕೆ ಯೋಗ್ಯವಲ್ಲ. ಇದಕ್ಕೇನಾದರೊಂದು ದಾರಿ ನಾವು ಯೋಚಿಸಬೇಕು.

ಈ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಒಂದೇನೆಂದರೆ, ನಾವು ಮಾಡುತ್ತಿರುವ Development ಖರ್ಚನ್ನು ನಮ್ಮ ರೆವಿನ್ಯೂವಿಗೆ charge ಮಾಡಬೇಕು. Capital Accounts ಗೆ charge ಮಾಡಕೂಡದು. ನಮ್ಮ ರೆವಿನ್ಯೂ Accounts ಗೆ ಇರತಕ್ಕ Resources ನ್ನು ನಾವು ಆದಷ್ಟುಮಟ್ಟಿಗೆ tap ಮಾಡಬೇಕು. ಮತ್ತು ನಮ್ಮ ಹಳೆಯಸಾಲ ವಿರುವಂಥಾದ್ದನ್ನು ಯಾವರೀತಿ write off ಮಾಡಿಸಬೇಕು ಹಾಗೂ ಯಾವರೀತಿ consolidation ಮತ್ತು rationalisation ಆಗಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇನ್ನು ಹೊಸ ತೆರಿಗೆಗಳನ್ನು ಕೆಲವನ್ನು ಹಾಕುವ ವಿಷಯವಿದೆ. ಏಕೆಂದರೆ integrated area ಗಳಲ್ಲಿ ಕೆಲವು ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಇವೆ. ಅಲ್ಲಿ wet assessment ಜಾಸ್ತಿಯಿದೆ. ಅದೇ ಹಳೆಯ ಮೈಸೂರಿನ ಭಾಗಗಳಲ್ಲಿ wet assessment ಕಡಮೆಯಿದೆ. ಮಂಡ್ಯ ಪ್ರದೇಶದಲ್ಲಿ ಪರಮಾವಧಿ water rate ಎಂದರೆ 12 ರೂಪಾಯಿಗಳು. ನವಮ್ಮಲ್ಲಿ 35 ರೂಪಾಯಿಗಳಿವೆ. ಬೆಳಗಾವಿನಲ್ಲಿ 18

ರೂಪಾಯಿಯಿದೆ. ಇದನ್ನೆಲ್ಲಾ ಏಕರೂಪವಾಗಿ ಮಾಡು ವುದಕ್ಕೆ ಪ್ರಯತ್ನಿಸಬೇಕು. ಯಾರ ವಿಷಯದಲ್ಲಿಯೂ discriminate ಮಾಡಕೂಡದು. ಈ ರೀತಿಯ ವ್ಯತ್ಯಾಸಗಳು ಬಹಳ ದಿವಸ ಉಳಿಯುವುದಕ್ಕೆ ಸಾಧ್ಯ ವಿಲ್ಲ. ಆದ್ದರಿಂದ ಆದಷ್ಟು ತೀವ್ರಗವುನ ಕೊಡ ಬೇಕೆಂದು ಹೇಳುತ್ತೇನೆ. ಅದರಲ್ಲೂ 12 ರೂಪಾಯಿ water rate ಹಾಕಿರುವುದು? ಎಲ್ಲಿ ಒಂದು ಸಕ್ಕರೆ ಕಾರ್ಖಾನೆಯಿದ್ದು ಸಕ್ಕರೆ ಕಾರ್ಖಾನೆಗೆ ಕಬ್ಬು ಬೆಳೆದುಕೊಟ್ಟು ಒಂದು ನಂಬಿಕೆಯಾದ ಆದಾಯ ಬರುವ ಪ್ರದೇಶವಾದ ಮಂಡ್ಯ ಜಿಲ್ಲೆಯಲ್ಲಿ. ನಮ್ಮ ಕಡೆಯಲ್ಲಿ ಅಂಥ assured income ಏನಾದರೂ ಇದೆಯೇ? ಹೀಗೆ ಹೇಳಿದ ಮಾತ್ರಕ್ಕೆ ನಮ್ಮ ಕಡೆಗೆ ಕಡಮೆ ಮಾಡಬೇಕೆಂದು ನಾನು ಹೇಳುವುದಿಲ್ಲ. ಏನೇ ಇರಲಿ, ಒಂದು uniform ನೀತಿಯನ್ನು ಅನುಸರಿಸ ಬೇಕೆಂದು ಹೇಳುತ್ತೇನೆ.

ಆಮೇಲೆ, ಲ್ಯಾಂಡ್ ರೆವಿನ್ಯೂವಿನಮೇಲೆ surcharge ಕೂಡ ಹಾಕಿ ಹೆಚ್ಚು ಉತ್ಪತ್ತಿ ಬರುವಂತೆ ಮಾಡಿ ಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ಏನೂ ಹೇಳುವುದಿಲ್ಲ. Dry lands ಮೇಲೆ ಸರ್ಚಾರ್ಜ್ ಮಾಡುವುದರಿಂದ ಬಹಳ ಕಷ್ಟ ವಾಗುತ್ತದೆಂದು ಮಾತ್ರ ನಾನು ಹೇಳಬಯಸುತ್ತೇನೆ. ನಮ್ಮ ವಿದ್ಯಾಭ್ಯಾಸ ಹೆಚ್ಚಿಸಬೇಕು. ನಮ್ಮ ದೇಶ ದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳು ಹೆಚ್ಚಬೇಕು ಎನ್ನು ವಾಗ ಹೆಚ್ಚಿಗೆ ತೆರಿಗೆಯನ್ನಾಗಲಿ, ಸರ್ಚಾರ್ಜನ್ನಾ ಗಲಿ ಹಾಕುವುದು ಅಗತ್ಯ, ನಿಜ. ಆದರೂ ಆದಷ್ಟು ಕಡಮೆಹಾಕಿ ನಮ್ಮ ಉತ್ಪತ್ತಿಯನ್ನು ಜಾಸ್ತಿ ಮಾಡಿ ಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ integrated ಪ್ರದೇಶಗಳಲ್ಲಿ ಅರಣ್ಯ ಮತ್ತು ಖನಿಜಸಂಪತ್ತು ಬೇಕಾದಷ್ಟಿದೆ. ಹೊಸ ಮೈಸೂರಿ ನಲ್ಲಿರುವಷ್ಟು ಖನಿಜ ಇನ್ನಾವ ದೇಶದಲ್ಲಿಯೂ ಇಲ್ಲ. ಆದರೆ, ಇವುಗಳನ್ನು ಇನ್ನೂ ಪೂರ exploit ಮಾಡಿಲ್ಲ ನಮ್ಮ ಅರಣ್ಯಗಳನ್ನು 100 ವರ್ಷಕ್ಕೆಂತಲೋ 150 ವರ್ಷಕ್ಕೆಂತಲೋ ಬ್ಲಾಕ್‌ಗಳನ್ನು ಮಾಡಿ ಒಂದೊಂದು ಬ್ಲಾಕನ್ನು ಕತ್ತರಿಸಿದಂತೆ ಅಲ್ಲಿ ಅರಣ್ಯವನ್ನು ಬೆಳೆಸು ವುದಕ್ಕೆ ಏರ್ಪಾಡು ಮಾಡುವುದು ಒಳ್ಳೆಯದು. ನಮ್ಮ ಮಾನ್ಯ ಸ್ನೇಹಿತರಾದ ಕೊಡಗಿನ ಮಲ್ಲಪ್ಪನವರೂ ಕೂಡ ಇದನ್ನೇ ಹೇಳಿದ್ದಾರೆ. ಇದರಿಂದಾಗಿ ನಮಗೆ assured ಆದಂಥ ಆದಾಯ ಬರುವಂತಾಗುತ್ತದೆ. ಈ ರೀತಿ ಒಂದು ಯೋಜನಾ ಬದ್ಧವಾದ ರೀತಿಯಲ್ಲಿ ನಮ್ಮ ಕಾಡುಗಳನ್ನು ಉಪಯೋಗಿಸ ಬೇಕಾದ್ದು ಅವಶ್ಯಕವೆಂದು ನಾನು ಹೇಳುತ್ತೇನೆ.

ಅದೇ ರೀತಿ ನಮ್ಮಲ್ಲಿರುವ ಖನಿಜ ಸಂಪತ್ತನ್ನು ರೂಢಿಸಬೇಕು ನಮ್ಮಲ್ಲಿರುವ ಕಬ್ಬಿಣ ಮತ್ತು ಮ್ಯಾಂಗ ನೀಸ್ ಅದುರಿನಲ್ಲಿ ಪ್ರಪಂಚದಲ್ಲಿ ಎಲ್ಲಿಯೂ ಸಿಕ್ಕದಿರು ವಷ್ಟು ಪ್ರಮಾಣದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಲೋಹ ಸಿಕ್ಕುತ್ತದೆ. ಸೊಂಡೂರಿನ ಕಬ್ಬಿಣ ಮ್ಯಾಂಗ ನೀಸ್ ಅದಿರು ಜಗತ್ತಿನಲ್ಲೇ ಪ್ರಸಿದ್ಧಿಯಾಗಿದೆ. ಸುಮ್ಮನೆ ಕಂಟ್ರಾಕ್ಟರುಗಳು ಅಲ್ಲಿನ ಮಣ್ಣನ್ನು ಬಳಿದುಕೊಂಡು ಬಂದರೆ ಸಾಕು.

ಒಬ್ಬ ಸದಸ್ಯರು.—ಅದನ್ನು S.T.C. ಯವರು ಮನಾಪಲಿ ಮಾಡಿಕೊಂಡಿದ್ದಾರೆ.

Smt. LEELAVATHI MAGADI (Shirahatti).–Private men are also working it.

ಶ್ರೀ ಬಿ. ವಿ. ದೇಸಾಯ್.—ಆ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಈಗ ಸಮಯವಿಲ್ಲ. ಪ್ರೈವೇಟ್ ಏಜೆನ್ಸಿ ಅದನ್ನು ಮಾಡುತ್ತಿತ್ತು. ಈಚೆಗೆ ಪ್ರೈವೇಟ್ ಏಜೆನ್ಸಿಗೆ ಕೊಡಕೂಡದೆಂದು ಮಾಡಿದ್ದಾರೆಂದು ತಿಳಿದುಬಂದಿದೆ. ಆದರೆ S.T.C. ಎಂದು ತಾವೇನು ಗೊತ್ತು ಮಾಡಿದ್ದೀರೋ ಅದನ್ನೂ develop ಮಾಡಿಲ್ಲ.

ಇವಲ್ಲದೆ, ನಮ್ಮ ಆದಾಯವನ್ನು ಹೆಚ್ಚು ಮಾಡಿ ಕೊಳ್ಳುವುದಕ್ಕೆ ಇನ್ನೂ ಹೊಸಹೊಸ sources ಗಳನ್ನು tap ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನಮ್ಮ ಡಿಫಿಸಿಟ್ಟನ್ನು ಸರಿತೂಗಿಸುವುದು ಕಷ್ಟವಾಗುತ್ತ ದೆಂದು ನಾನು ಹೇಳಬಯಸುತ್ತೇನೆ.

ಇನ್ನೂ developmental ಇಲಾಖೆಗಳ ವಿಷಯ ಹೇಳುವುದಾದರೆ, ಮೊದಲನೆದಾಗಿ P.W.D. ಇಲಾ ಖೆಯ ವಿಷಯ ಹೇಳುತ್ತೇನೆ. ನಾನು ರಾಯಚೂರು ಜಿಲ್ಲೆಯವನು. ಅದೊಂದು ಪ್ರಾಜೆಕ್ಟ್ ಏರಿಯಾ ಆಗಿದೆ. ಅಲ್ಲಿ ಸಾಮಾನ್ಯವಾಗಿ ಎಲ್ಲಾ ಸರ್ಕಾರಿ ಅಭಿ ವೃದ್ಧಿ ಇಲಾಖೆಗಳೂ ಕೆಲಸ ಮಾಡುತ್ತಿವೆಯೆನ್ನ ಬಹುದು. ಇತ್ತ ವ್ಯವಸಾಯದ ಇಲಾಖೆಯಿದೆ, ಅತ್ತ P.W.D. ಇಲಾಖೆಇದೆ. P.W.D. ಇಲಾಖೆಯ ಕೆಲಸ ಹೇಳುವುದಾದರೆ, ಅದನ್ನು Public Works Department ಎಂದು ಕರೆಯಕೂಡದು. ಅದನ್ನು Public Waste Department ಎಂದು ಹೇಳ ಬೇಕು.

ರಾಜ್ಯಪಾಲರ ಭಾಷಣದಲ್ಲಿ 61 ಸಾವಿರ ಎಕರೆಗೆ ನೀರು ಬಿಟ್ಟಿದೆ, ಅದರಲ್ಲಿ 31 ಸಾವಿರ ಎಕರೆ ಜಮೀನು develop ಆಗಿದೆ ಎಂದು ಹೇಳಿದ್ದಾರೆ. ಎರಡನೆ ಪಂಚವಾರ್ಷಿಕ ಯೋಜನೆ ಪುಸ್ತಕದಲ್ಲಿ 1957ನೆ ಇಸವಿಯಲ್ಲಿ 1,68,000 ಎಕರೆ ಜಮೀನಿಗೆ ನೀರನ್ನು ಬಿಡುವುದಾಗಿ ತಿಳಿಸಿದ್ದಾರೆ. ಆದರೆ ಒಂದು ಎಕರೆ ಹೆಚ್ಚಿಗೆ ಜಮೀನಿಗೂ ನೀರು ಕೊಟ್ಟಿಲ್ಲ. ಒಂದನೆಯ ನವೆಂಬರ್ 1956ನೆ ಇಸವಿಯಿಂದ ಹೊಸ ಮೈಸೂರು ರಾಜ್ಯವಾದ ಮೇಲೆ ತುಂಗಭದ್ರ ಪ್ರಾಜೆಕ್ಟಿನಿಂದ 1957-58ರಲ್ಲಿ ಒಂದು ಎಕರೆಗೆ ನೀರನ್ನು ಕೊಟ್ಟಿ ದ್ದೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. I would like to ask whether are they really sincere in regard to food production. ಒಂದು ಎಕರೆ ಹೊಸ ಜಮೀನಿಗೆ ನೀರು ಬಿಟ್ಟಿಲ್ಲ—ನಾನು ಅದೇ constituency ಯಿಂದ ಬರುತ್ತಿದ್ದೇನೆ. ಸಾಕಷ್ಟು ಸಲ ಈ ವಿಷಯವನ್ನು ಮಾನ್ಯ ಮಂತ್ರಿಗಳಿಗೂ ಹೇಳಿದ್ದೇನೆ. ಈ ರೀತಿಯಾಗಿ ಇವರು ಮಾಡುತ್ತಿರುವುದನ್ನು ನೋಡಿದರೆ ವಿಷಾದವೆನಿ ಸುತ್ತದೆ. ಈ ವರ್ಷ ಜೂನ್ 15ನೆಯ ತಾರೀಖಿಗೆ ನೀರು ಬಿಡಬೇಕು. ಆವಾಗ ಎಷ್ಟು ಜಮೀನಿಗೆ ಹೊಸದಾಗಿ ನೀರನ್ನು ಬಿಡುತ್ತಾರೆಯೋ ನೋಡಬೇಕು.

ತುಂಗಭದ್ರ ಪ್ರಾಜೆಕ್ಟ್‌ನಲ್ಲಿ ನೀರುಬಿಡುವ ಏರ್ಪಾಡನ್ನು ನೋಡಿದರೆ ಬಹಳ ವಿಚಿತ್ರವೆನ್ನಿಸುತ್ತವೆ. ನೀರಾಡಿಗಳು ಎಂದರೆ ನೀರುಗಂಟಿಗಳು ಅಲ್ಲಿಲ್ಲ. ಎಷ್ಟೋಸಲ ತುಂಗಭದ್ರ ಅಡ್ವೈಸರಿ ಬೋರ್ಡ್ ಮೀಟಿಂಗ್‌ಗಳಲ್ಲಿ ಸಾಧಾರಣ ಶೇಕಡ 75 ಮೀಟಿಂಗ್ ಗಳಲ್ಲಿ, ನೀರಾಡಿಗಳನ್ನು ನೇಮಕ ಮಾಡಲು ತೀವ್ರ ಏರ್ಪಾಡು ಮಾಡಬೇಕೆಂದು ಹೇಳುತ್ತಿದ್ದೆ. ಆದರೆ ಪ್ರತಿಸಲವೂ ಮೇಲಕ್ಕೆ ಬರೆದಿದ್ದೇವೆ, ಇನ್ನೂ ಉತ್ತರ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಹೋದ ತಿಂಗಳು 40 ಮಂದಿಯನ್ನು ನೇಮಿಸಿದ್ದಾರೆಂದು ತಿಳಿಯಬಂತು. ಸಣ್ಣ ಸಣ್ಣ ಕೆರೆಗಳಿಂದ ನೀರಾವರಿಯನ್ನು ಮಾಡ ಬೇಕಾದರೆ ನೀರಾಡಿಗಳುಬೇಕು. ಅಂಥದರಲ್ಲಿ ತುಂಗಭದ್ರ ಪ್ರಾಜೆಕ್ಟಿಗೆ ಇವೊತ್ತಿನವರೆಗೂ ಒಬ್ಬ ನೀರಾಡಿಯೂ ಇಲ್ಲವೆಂದರೆ ಅದು ಬಹಳ ಹಾಸ್ಯಾಸ್ಪದ

(ಶ್ರೀ ಬಿ. ವಿ ದೇಸಾಯ್)

ವಾದ ಮಾತು ಮತ್ತು ಇದನ್ನು ಹೇಳಲು ನನಗೆ ಸ್ವತಃ ನಾಚಿಕೆಯಾಗುತ್ತದೆ. ನೀರು ಬಿಡತಕ್ಕ ಕೆಲಸ ಈ ಪ್ರಾಂತದಲ್ಲಿ ಸರಿಯಾಗಿ ನಡೆಯುತ್ತಿಲ್ಲ. ಅದರಿಂದ ಬಹಳ ತೊಂದರೆ ಇದೆ. ಇದನ್ನು ಸರಿಪಡಿಸ ಬೇಕೆಂದು ಮಾತ್ರ ಹೇಳುತ್ತೇನೆ.

ಇದೇ ರೀತಿಯಾಗಿ internal road system ಏನಿದೆ, ಅದರ ವಿಷಯ ಹೇಳುತ್ತೇನೆ. ಹಳೆ ಮಾಗಾಣಿ ಪ್ರದೇಶದಲ್ಲಿ, ಮತ್ತು ಹೊಸ ಮಾಗಾಣಿ ಪ್ರದೇಶದಲ್ಲಿ ಕೂಡ ರೈತನಾದವನು ತನ್ನ ಗದ್ದೆಗೆ ಹೋಗಬೇಕಾದರೆ ಕಾಲುದಾರಿ ಸಹ ಸಿಕ್ಕಲಿಕ್ಕಿಲ್ಲ. ಹೊಸ ಮಾಗಾಣಿ ಯಲ್ಲಿ ಇವೊತ್ತಿನ ದಿವಸದವರೆಗೂ planned scheme ಇಲ್ಲ. ನಾನು ಎಷ್ಟೋ ಸಲ ಹೇಳಿದ್ದೇನೆ. ಆದರೆ ಇವೊತ್ತಿನವರೆಗೂ ಅದರ ಬಗ್ಗೆ ವಿಚಾರ ಮಾಡಿಲ್ಲ. ಒಬ್ಬ ರೈತ ಗೊಬ್ಬರ ವಗೈರೆಗಳನ್ನು ತನ್ನ ಜಮೀನಿಗೆ ತೆಗೆದುಕೊಂಡು ಹೋಗಬೇಕಾದರೆ, ಮತ್ತು ಜಮೀನಿನಲ್ಲಿ ಬರುವಂಥ ಧಾನ್ಯವನ್ನು ಮನೆಗೆ ತರ ಬೇಕಾದರೆ ದಾರಿ ಇಲ್ಲ. ಗದ್ದೆಯೊಳಗೆ ಬೆಳೆದಿರುವ ಫಸಲನ್ನು ಪೂರ್ತಿಯಾಗಿ ತೆಗೆಯುವವರೆಗೂ ಇತರರು ತಮ್ಮ ಬೆಳೆಯನ್ನು ತರುವ ಹಾಗಿಲ್ಲ. ಇಂಥ ದೊಡ್ಡ ಪ್ರಾಜೆಕ್ಟುಗಳಲ್ಲಿಯೇ ಈ ರೀತಿ ತೊಂದರೆಗಳಿವೆ. ಇದಕ್ಕೆ ಸೂಕ್ತ ಏರ್ಪಾಡುಗಳನ್ನು ಮಾಡಬೇಕು.

ತುಂಗಭದ್ರ ಪ್ರಾಜೆಕ್ಟ್ ಪ್ರದೇಶ ಯಾವ ಒಂದು ಇಲಾಖೆಯ ಅಧಿಕಾರಕ್ಕೂ ಒಳಪಟ್ಟಿಲ್ಲ. ಪ್ರತಿಯೊಂದು ಇಲಾಖೆಯವರದೂ ಅಧಿಕಾರವಿದೆ ಎಂದು ಹೇಳು ತ್ತಾರೆ. ಇವರೊಳಗೆ co-ordination ಏನೇನೂ ಇಲ್ಲ. ರೆವೆನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ವರಿಗೆ ಯಾವಾಗಲೂ ಕಾದಾಡುವುದೇ ಕೆಲಸ. ಯಾವು ದಾದರೂ ವಿಷಯ ಬಂದರೆ ನಮ್ಮದಲ್ಲ, ನಮ್ಮದಲ್ಲ ಎಂದು ಎಲ್ಲರೂ ಹೇಳುತ್ತಾರೆ. ಈ ವಿಷಯ ಚೀಫ್ ಮಿನಿಸ್ಟರವರೆಗೂ ಮುಟ್ಟಿದೆ. ಇದು ಯಾರನ್ನೂ criticise ಮಾಡತಕ್ಕ ವಿಷಯವಲ್ಲ. ನಾವು sincere ಆಗಿ ಇರಬೇಕಾಗಿದ್ದರೆ, ನಮ್ಮ grow more food scheme ಯಶಸ್ವಿಯಾಗಬೇಕಾದರೆ, ಹೆಚ್ಚು ಆಹಾರ ವನ್ನು ಬೆಳೆಯಬೇಕೆಂಬ ಮನಸ್ಸಿದ್ದರೆ ದೊಡ್ಡ ಪ್ರಾಜೆಕ್ಟ್‌ಗಳಾಗಲಿ ಅಥವ ಸಣ್ಣ ಪ್ರಾಜೆಕ್ಟ್‌ಗಳಾಗಲಿ ಅವುಗಳಿಗೆ ಹೆಚ್ಚು ಲಕ್ಷ್ಯಕೊಡಬೇಕು.

General Communications ಬಗ್ಗೆ ಕೆಲವೊಂದು ವಿಷಯಗಳನ್ನು ಹೇಳಬೇಕಾಗಿದೆ. ನಮ್ಮ ಭಾಗದಲ್ಲಿ ಪ್ರತಿ ನೂರು ಚದರ ಮೈಲಿಗೆ ಆರು ಮೈಲಿ ಉದ್ದ ರಸ್ತೆ ಇದೆ. ಹಳೆಯ ಮೈಸೂರು ಭಾಗದಲ್ಲಿ 36 ಮೈಲಿ ಉದ್ದ ರಸ್ತೆ ಇದೆ. ನಾವು ಬಡ್ಜೆಟ್ಟನ್ನು ನೋಡಿದರೆ ಅದರಲ್ಲಿ ಏನೇನು ಕಾರ್ಯಗಳಿಗೆ ಹಣವನ್ನೊದಗಿಸಿ ದ್ದಾರೆ, ಅದೆಲ್ಲ ಹಳೆಯ ಮೈಸೂರು ಭಾಗಕ್ಕೆ ಹೆಚ್ಚಾಗಿದೆ.

ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಹಳೆಯ ಮೈಸೂರಿಗೆ ಪ್ರಾವಿಷನ್ ಇಲ್ಲ. ನೂತನ ಮೈಸೂರಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ವಿ. ದೇಸಾಯ್.—ನಾನು ಹಳೆಯ ಮೈಸೂರು ಹೊಸ ಮೈಸೂರು ಎಂದು ಪ್ರತ್ಯೇಕಿಸಿ ಹೇಳುತ್ತಿಲ್ಲ. ನಾನು ಈ ವಿಷಯವನ್ನು ಏಕೆ ಹೇಳು ತ್ತಿದ್ದೇನೆಂದರೆ, asphalting ಎಂದರೆ ರಸ್ತೆಗಳಿಗೆ black top ಹಳೆಯ ಮೈಸೂರು ಭಾಗದಲ್ಲಿ ಎಷ್ಟು ಮೈಲಿ ರಸ್ತೆಗೆ ಮಾಡಿದ್ದಾರೆ, ಎಂದು ಅಂಕಿಸಂಖ್ಯೆ ಗಳನ್ನು ಕೊಡಬಲ್ಲೆ. ನಮ್ಮ ಕಡೆ ಒಂದು ಮೈಲಿ ಯಷ್ಟು ಕೂಡ asphalting ಮಾಡಿಲ್ಲ. ಅದಕ್ಕೆ ಕಾರಣ ಇಲ್ಲಿಯ ಭಾಗದಲ್ಲಿ road system develop ಆಗಿದೆ. ಅದಕ್ಕೋಸ್ಕರ ಹೆಚ್ಚಿಗೆ ಕೊಟ್ಟಿ ದ್ದಾರೆ. ಹೀಗೆ ಮಾತನಾಡುವಾಗ ಹಳೆಯ ಮೈಸೂ ರಿಗೆ ಏನೂ ಕೊಡಬಾರದು ಎಂದು ಹೇಳುವುದಿಲ್ಲ. ಇತರ ಭಾಗಗಳಲ್ಲಿಯೂ ಸ್ವಲ್ಪವಾದರೂ ರಸ್ತೆ ಕೆಲಸ ವನ್ನು ಮಾಡಿಸಬೇಕು ಎಂದು ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳನ್ನು ಕೇಳುತ್ತೇನೆ. ಇದಕ್ಕೆ ಲಕ್ಷ್ಯ ಕೊಟ್ಟು ಕೆಲಸ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಇನ್ನೊಂದು ವಿಷಯ hydro-electric scheme ವಿಷಯ ಹೇಳಬೇಕಾಗಿದೆ. ತುಂಗಭದ್ರ ಎಡನಾಲೆಯ ಭಾಗದಲ್ಲಿ ಮುನೀರಾಬಾದ್ ಬಳಿ hydro-electric schemeಗೆ 55 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಹೋದ ವರ್ಷ ಜಪಾನಿಗೆ ಯಂತ್ರೋಪ ಕರಣಗಳಿಗೆ ಆರ್ಡರ್ ಮಾಡಿದ್ದಾರೆ. ಅಲ್ಲಿಂದ ಇನ್ನೂ ಯಂತ್ರಗಳು ಬರಬೇಕು. ಈ ವರ್ಷವಾದರೂ ಆಗು ತ್ತದೆಯೋ ಇಲ್ಲವೋ ಗೊತ್ತಿಲ್ಲ. 1959-60 ಅಥವ 1960-61ರಲ್ಲಿ ವಿದ್ಯುತ್ತನ್ನು ಕೊಡುತ್ತೇವೆಂದು ತಿಳಿಸುತ್ತಾರೆ. ಆ ಭಾಗದಲ್ಲಿ ಪರಿಸ್ಥಿತಿ ಏನಿದೆ ಎಂದರೆ ಡೈನಮೋ ಮೂಲಕ ವಿದ್ಯುತ್ತನ್ನು ಒದಗಿಸುತ್ತಿದ್ದಾರೆ. ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇಲ್ಲ. ಜೋಗದಿಂದ ಬರುವಂಥ ವಿದ್ಯುತ್ತನ್ನು ಮುನೀರಾಬಾದ್, ಗಂಗಾ ವತಿ ಮತ್ತು ಇನ್ನು ಕೆಲವು ಭಾಗಗಳಿಗೆ ಕೊಡುತ್ತಿ ದ್ದಾರೆ. ಆ ಭಾಗದಲ್ಲಿ hydro-electric scheme ಮತ್ತು road transport scheme ಇವುಗಳನ್ನು ಅತ್ಯಂತ ತೀವ್ರವಾಗಿ ಮಾಡಬೇಕೆಂದು ಕೇಳಿಕೊಳ್ಳು ತ್ತೇನೆ.

ವ್ಯವಸಾಯದ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳುತ್ತೇನೆ. ವ್ಯವಸಾಯ ಹೆಚ್ಚಾಗಲು ಟ್ರಾಕ್ಟರ್ ಗಳುಬೇಕು ಮತ್ತು ಇತರ ಸವಲತ್ತುಗಳು ಬೇಕು ಎಂದು ನಮ್ಮ ಸ್ನೇಹಿತರು ಹೇಳಿದ್ದಾರೆ. ಅದನ್ನು ನಾನು ಸಮರ್ಥನೆ ಮಾಡುತ್ತೇನೆ. Hire purchase system ಇರಬೇಕು ಮತ್ತು ಇನ್ನೂ ಕೆಲವು ಸವಲತ್ತು ಗಳು ಇರಬೇಕು. ಬಿತ್ತನೆ ಬೀಜಗಳನ್ನು ಇಲಾಖೆ ಯಿಂದ ಒದಗಿಸುವ ವಿಚಾರವಾಗಿ ಹೇಳಬೇಕಾದರೆ ಯಾವ ಬೀಜವನ್ನು ಕೊಡಬೇಕಾದರೂ ಸರಿಯಾದು ದನ್ನು ಕೊಡಬೇಕು. ಒಂದು ಸಲ ಸೌತೆ ಬೀಜ ಎಂದು ವ್ಯವಸಾಯ ಇಲಾಖೆಯವರು ಕೊಟ್ಟರು. ರೈತರು ಆ ಬೀಜವನ್ನು ಹೂಳಿ, ಚೆನ್ನಾಗಿ ನೀರಾವರಿ ಮಾಡಿ, ಬೆಳೆಸಿದರು. ಅದರಿಂದ ಮಕ್ಕೆ ಕಾಯಿ ಹೊರ ಬಂತು. ಇಲಾಖೆಯವರು ಕೊಟ್ಟ ಸೌತೆ ಬೀಜವನ್ನು ನೆಟ್ಟರೆ ಅದರಲ್ಲಿ ಬುಡುಮೆಕಾಯಿ ಹೊರಟಿತು. (ನಗು) ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ಈ ವಿಚಾರದಲ್ಲಿ ನಾನು ಹೇಳುವುದಿಷ್ಟೆ. ಜೋಳ, ಗೋಧಿ, ಹತ್ತಿ ಭತ್ತ ಅಥವ ಕಬ್ಬು ಅಥವ ಯಾವುದೇ ಆಗಲಿ ಬೀಜಗಳನ್ನು ಕೊಡುವಾಗ ಒಳ್ಳೆಯ ಬೀಜ ವನ್ನು ಕೊಡಬೇಕು ಎಂದು ಹೇಳುತ್ತೇನೆ.

5 P.M.

ಫರ್ಟಿಲೈಸರ್ ವಿಚಾರ ಹೇಳಬೇಕಾಗಿದೆ. ಅಮೋ ನಿಯಮ್ ಸಲ್ಫೇಟ್ ಜಾಸ್ತಿ ಖರ್ಚಾಗುತ್ತದೆ. ಇತ್ತೀಚೆಗೆ ಸೂಪರ್ ಫಾಸ್ಫೇಟ್ ವಿಚಾರದಲ್ಲಿ ಒಂದು ದೊಡ್ಡ ಬಂಗಲ್ ಆಗಿದೆ. ಇದು ಮಾನ್ಯ ವ್ಯವಸಾಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ. ಮೂರು ವ್ಯಾಗನ್ ಸೂಪರ್ ಫಾಸ್ಫೇಟ್ ಬೊಂಬಾಯಿಂದ ತರಿಸಿ ಗುಲ್ಬರ್ಗ, ರಾಯಚೂರಿನಲ್ಲಿ ಹಂಚಿದರು.

ಅದರಲ್ಲಿ ಸ್ವಲ್ಪ ಉಳಿದಿದೆ. ಸೂಪರ್ ಫಾಸ್ಫೇಟ್ ಹೌದೋ ಅಲ್ಲವೋ ಎನ್ನುವ ಅನುಮಾನ ಬಂದಿತ್ತು. ಬೆಂಗಳೂರಿಗೆ ಕಳಿಸಿ ಪರೀಕ್ಷೆ ಮಾಡಿದಾಗ ಸೂಪರ್ ಫಾಸ್ಫೇಟ್ ಅಂಶವಿಲ್ಲವೆಂದು ಗೊತ್ತಾಯಿತು. ಅದು ಜಹಗೀರ್‌ದಾರ್ ಎನ್ನುವವರ ಕಂಪೆನಿಯಿಂದ ಬಂದಿದೆ. ಇದು ಆಫೀಸರ ತಪ್ಪೋ ಗೊತ್ತಿಲ್ಲ. ಉಳಿದ ಸ್ಟಾಕನ್ನು ಸೀಸ್‌ಮಾಡಿ ಹಾಗೆಯೇ ಇಟ್ಟಿದ್ದಾರೆ. ರೈತರ ಕಡೆಯಿಂದ ದುಡ್ಡು ವಸೂಲು ಮಾಡಿದ್ದಾರೆ. ಆರು ತಿಂಗಳಾಗಿವೆ.

ಇವಾಗಲೂ ಸೂಪರ್ ಫಾಸ್ಫೇಟ್ ತರಿಸಿದ್ದಾರೆ. ನಾನು ಅದನ್ನು ಪರೀಕ್ಷೆ ಮಾಡಿದ್ದೇನೆ. ಮೂರು ಬಾಟಲ್ ಪರೀಕ್ಷೆ ಮಾಡಿದ್ದರಲ್ಲಿ ಎರಡು ಬಾಟಲ್‌ನಷ್ಟು ಮಳಲು ಅದರಲ್ಲಿತ್ತು. ಒಂದು ಚೀಲ, ಸಾವಿರ ಚೀಲ ಗಳ ಪ್ರಶ್ನೆಯಲ್ಲ. ಇಲಾಖೆ ಎಷ್ಟು ಜಾಗರೂಕತೆ ಯಿಂದ ಕೆಲಸ ಮಾಡುತ್ತಿದೆ ಅನ್ನುವುದನ್ನು ತೋರಿಸುತ್ತದೆ. ಫರ್ಟಿಲೈಸರ್‌ನನ್ನು ಅದೆಷ್ಟು ಸಪ್ಲೈ ಮಾಡಬೇಕು. ಅದರ ಮಟ್ಟಿಗೆ ಸಾಕಷ್ಟು ಚಾಕಶಿ ಮಾಡಿಕೊಳ್ಳಬೇಕು.

ನಮ್ಮಲ್ಲಿ ಒಂದು ಪರಿಸ್ಥಿತಿ ಏನಿದೆ ಎಂದರೆ ಬೆಳೆಗಳನ್ನು ರೊಟೇಷನ್ ಸಿಸ್ಟಮ್ ಮೇಲೆ ಬೆಳೆಯತಕ್ಕಂಥಾದ್ದು. ಅದು ಬಹಳ ಕಾಲದಿಂದ ಬಂದಿದೆ. ವಿಜಯನಗರ ಸಾಮ್ರಾಜ್ಯದ ದಿನಗಳಿಂದ ಈ ಪದ್ಧತಿ ಇದೆ. ಮೊದಲು ಕಬ್ಬು ಬೆಳೆಯುತ್ತಾರೆ, ಆಮೇಲೆ ಭತ್ತ ಬೆಳೆಯುತ್ತಾರೆ. ಪ್ರಾಜೆಕ್ಟ್‌ಗಳು ಆದಮೇಲೆ ಒಂದು ಲೋಕಲೈಸೇಷನ್ ಸ್ಕೀಂ ಎಂದು ಮಾಡಿದ್ದಾರೆ. ಅದರ ಪ್ರಕಾರ ಬೆಳೆಯನ್ನು ನಿರ್ದಿಷ್ಟಮಾಡಿ ಅದನ್ನೇ ಬೆಳೆಯಬೇಕೆಂದು ಗೊತ್ತು ಮಾಡಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಮಂಡ್ಯ, ಹೊಸಹೇಟೆ, ತುಂಗಭದ್ರಾ ಪ್ರಾಜೆಕ್ಟ್‌ನಲ್ಲಿ ರೊಟೇಷನ್ ಸಿಸ್ಟಮ್ ಇದೆ. ಈ ಲೋಕಲೈಸೇಷನ್ ಕಾನೂನು ಬಗ್ಗೆ ವ್ಯವಸಾಯ ಮಂತ್ರಿಗಳಿಗೆ ರೆಪ್ರೆಸೆಂಟೇಷನ್ ಮಾಡಿದ್ದೇವೆ. ಮೀಟಿಂಗ್ ಮುಂದೆ ಈ ವಿಚಾರವನ್ನು ಇಟ್ಟು ನೋಡುತ್ತೇವೆ ಎಂದು ಹೇಳಿದರು. ಭತ್ತ ಬೆಳೆಯತಕ್ಕಂಥ ಭೂಮಿಯಲ್ಲಿ ಕಬ್ಬು ಹಾಕಿದ್ದಕ್ಕೆ, ಎಕರೆಗೆ 200 ರೂಪಾಯಿ ಜುಲ್ಮಾನೆ ಹಾಕಿದ್ದಾರೆ. ಇದನ್ನು ಚೌಕಾಶಿ ಮಾಡಿ ಪರಿಶೀಲನೆ ಮಾಡಬೇಕು.

ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟ್‌ಮೇಲೆ ಉಳಿದ ಕೆಲವು ವಿಷಯಗಳನ್ನು ಬೇರೆ ಸಮಯದಲ್ಲಿ ಹೇಳುತ್ತೇನೆ. ನಮ್ಮ ಏರಿಯಾಕ್ಕೆ ಒಂದು ಕೋ-ಆಪರೇಟೀವ್ ಶುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಬೇಕೆಂದು ಮಾಡಿದರು. (ಗಂಗಾವತಿ ಯಲ್ಲಿ). ಹೈದರಾಬಾದ್ ಸರ್ಕಾರವಿದ್ದಾಗ ಪ್ಯಾರಿ ಅಂಡ್ ಕಂಪನಿಯವರಿಗೆ ಲೈಸೆನ್ಸ್ ಕೊಟ್ಟಿದ್ದರು. ಆಮೇಲೆ ಬಿರ್ಲಾ ಕಂಪನಿಗೆ ವಹಿಸಿದರು. 1-11-56 ರಲ್ಲಿ ಈ ಭಾಗ ಮೈಸೂರು ಸಂಸ್ಥಾನಕ್ಕೆ ಸೇರಿತ್ತು. ಕೋ-ಆಪರೇಟಿವ್ ಸೊಸೈಟಿ ಮಾಡಬೇಕೆಂದು ಹೇಳಿದೆವು. ಸರ್ಕಾರದವರೂ ಕೂಡ ಬಹಳ ಸಹಾನುಭೂತಿ ತೋರಿಸಿದರು. ಡಿವಿಜನಲ್ ಕಲೆಕ್ಟರವರನ್ನು ಛೇರ್‌ಮನ್ ಮಾಡಿ ಒಂದು ಸೊಸೈಟಿ ಮಾಡಿದರು. ಆರು ಲಕ್ಷ ರೂಪಾಯಿ ಷೇರ್ ಬಂಡವಾಳ ಕಲೆಕ್ಷನ್ ಮಾಡಿದೆವು. ಅದರಲ್ಲಿ 35 ಪರ್‌ಸೆಂಟ್ ಎಂದರೆ 1,50,000 ರೂಪಾಯಿ ಕ್ಯಾಷ್ ಸೇರಿಸಿದೆವು. 10 ಲಕ್ಷ ರೂಪಾಯಿ ಕಲೆಕ್ಷನ್ ಮಾಡಬೇಕು ಎಂದು ಹೇಳಿದರು. ಕೇಂದ್ರ ಸರ್ಕಾರದ ಸಹಾಯಕ್ಕಾಗಿ ಇತ್ತೀಚೆಗೆ ದೆಹಲಿಯವರೆಗೂ ಡೆಪ್ಯುಟೇಷನ್ ಹೋಗಿ ಬಂದೆವು. ಇದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲವೆಂದು ಕೇಳಿಬಂದೆವು. ಅಲ್ಲಿ ಕೇಳಿದ್ದರಲ್ಲಿ ಈ ಕಡೆಯಿಂದಲೇ ಅದು ಇನ್‌ಕ್ಲೂಡ್ ಆಗಿ ಬಂದಿಲ್ಲವೆಂದು ಹೇಳಿದರು. ಒಬ್ಬ ರೈತನಿಗೆ ಎರಡು ಎಕರೆ ಕಬ್ಬಿನ ಭೂಮಿ ಇರುತ್ತದೆ, ಒಂದು ಎಕರೆ ನೆಲ್ಲಿನ ಭೂಮಿ ಇರುತ್ತದೆ. ಡಿಸೆಂಬರಿನಲ್ಲಿ ಕಬ್ಬಿನ ಭೂಮಿಯಲ್ಲಿ ಏಳುಸಾವಿರ ಎಕರೆಯ ಸ್ಟ್ಯಾಂಡಿಂಗ್ ಕ್ರಾಪ್ ಇತ್ತು. ಮುಖ್ಯ ಮಂತ್ರಿಗಳಿಗೆ ಈ ವಿಚಾರದಲ್ಲಿ ರೆಪ್ರೆಸೆಂಟ್ ಮಾಡಿದ್ದೇವೆ. ರಾಯಚೂರ್ ಡಿಸ್ಟ್ರಿಕ್ಟ್‌ನಲ್ಲಿ ಗಂಗಾವತಿ ಯಲ್ಲಿ ಈ ಫ್ಯಾಕ್ಟರಿಯನ್ನು ತೆರೆಯಬೇಕೆಂದು ಹೇಳಿದೆವು. ಅವರು ಒಪ್ಪಿಕೊಂಡರು. ಸಾರ್ವಜನಿಕ ಸಭೆಯಲ್ಲಿಯೂ, ಫ್ಯಾಕ್ಟರಿಯನ್ನು ಕೊಡಬೇಕೆಂದು ಹೇಳಿದರು. ಪ್ರೈವೇಟ್ ಆಗಿಯಾದರೂ ಕಂಪೆನಿಗೆ ಕೊಡುತ್ತೇವೆ ಎಂದು ಹೇಳಿದರು. ಈ ಬಗ್ಗೆ ಇವೊತ್ತಿನವರೆಗೆ ಏನನ್ನೂ ಮಾಡಿಲ್ಲ. ಸರ್ಕಾರದವರು ಕೇಂದ್ರ ಸರ್ಕಾರಕ್ಕೆ changed circumstances ತಿಳಿಸಿ ಈ ಫ್ಯಾಕ್ಟರಿಯಬಗ್ಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇದನ್ನು ಮಾಡದಿದ್ದರೆ ಅಲ್ಲಿನ ಅರ್ಥಿಕ ಪರಿಸ್ಥಿತಿ ನೆಟ್ಟಗಾಗದು.

ಉಳಿದ ವಿಷಯಗಳನ್ನು ಡಿಮಾಂಡ್ ಬಂದಾಗ ಹೇಳಬಯಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಭಾಷಾವಾರು ಪ್ರಾಂತ್ಯರಚನೆಯಿಂದ ಉದ್ಭವಿಸಿದ್ದ ನಾನಾ ಸಮಸ್ಯೆಗಳನ್ನೂ ತೊಡಕುಗಳನ್ನೂ ಪರಿಹರಿಸಿಕೊಂಡು ಉಳಿತಾಯದ ಆಯವ್ಯಯವನ್ನು ಮಂಡಿಸಿರುವ ಅರ್ಥಿಕ ಮಂತ್ರಿಗಳನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಸಭೆಯ ಒಪ್ಪಿಗೆಗಾಗಿ ಮಂಡಿಸಿರುವ ಆಯವ್ಯಯವನ್ನು ಸ್ವಾಗತಿಸುತ್ತಾ ನಾಲ್ಕಾರು ಸಲಹೆಗಳನ್ನು ಕೊಡಬಯಸುತ್ತೇನೆ. ಹಣಕಾಸಿನ ಮಂತ್ರಿಗಳು "ಬಟ್ಟೆಯಿದ್ದಷ್ಟು ಕೋಟು ಹೊಲಿಸಿಕೊಳ್ಳೋಣ" ಆಯವ್ಯಯದಲ್ಲಿ ಮಿತವ್ಯಯದ ಕಡೆಗೆ ಗಮನಕೊಟ್ಟು ಅನಾವಶ್ಯಕ ದುಂದುವ್ಯಯವನ್ನು ತಪ್ಪಿಸಲು ಪ್ರಯತ್ನಿಸಲಾಗುವುದು. ತಾಂತ್ರಿಕ ಮತ್ತು ನಿಯಮಿಕ ಲೆಖ್ಖಪತ್ರಗಳ ತನಿಖೆಗೂ ಗಮನಕೊಡಲಾಗುವುದು ಎಂಬ ಸಲಹೆಯನ್ನಿತ್ತಿದ್ದಾರೆ. ಈ ಸಲಹೆಗಳಂತೆ ಸರ್ಕಾರ ನಡೆದಲ್ಲಿ ನಿಜವಾದ ಪ್ರಜಾರಾಜ್ಯವಾಗುವುದರಲ್ಲಿ ಸಂದೇಹವಿರದು. ನುಡಿದಂತೆ ನಡೆಯುವ ಮನೋಭಾವವನ್ನು ಸರ್ಕಾರದವರಿಗೆ ಮೇಲಾಗಿ ಹಣಕಾಸಿನ ಮಂತ್ರಿಗಳಿಗೆ ದೇವರು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಈ ಸಾರಿಯ ವ್ಯಯದಲ್ಲಿ ವಿದ್ಯಾಭ್ಯಾಸ, ಆರೋಗ್ಯ ಶಾಖೆಗಳಿಗೆ ನಿಗಾ ಕೊಟ್ಟಿರುವುದು ಸಂತೋಷದ ವಿಚಾರ. ಪ್ರಾಥಮಿಕ ವಿದ್ಯಾಭ್ಯಾಸ ಗ್ರಾಮಾಂತರ ಪ್ರದೇಶಗಳ ಆರೋಗ್ಯ ವಿಚಾರದಲ್ಲಿ ಇನ್ನೂ ಹೆಚ್ಚಾಗಿ ನಿಗಾ ಕೊಡಬೇಕಾದದ್ದು ಅತ್ಯಗತ್ಯ. ಎಷ್ಟೋ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ಔಷಧಗಳಿಲ್ಲ. ಔಷಧಗಳಿರುವ ಆಸ್ಪತ್ರೆಗಳಲ್ಲಿ ಅದು ರೋಗಿಗಳಿಗೆ ಉಪಯೋಗವಾಗದೆ ಮಾರ್ಕೆಟ್ಟಿಗೆ ಮಾರಾಟಕ್ಕೆ ಹೋಗುತ್ತಿದೆ. ಔಷಧಗಳು ದುರುಪಯೋಗವಾಗುವುದನ್ನು ಏನಾದರೂ ಮಾಡಿ ತಪ್ಪಿಸಬೇಕು. ಮುಖ ನೋಡಿ ಮಣೆ ಹಾಕಿ ಉಪಚರಿಸುವ ಡಾಕ್ಟರುಗಳಮೇಲೆ ಕಣ್ಣಿಡಬೇಕು. ಆರೋಗ್ಯ ಮಂತ್ರಿಗಳು ಅನಿರೀಕ್ಷಿತ ಭೇಟಿಗಳಿಂದಲೂ ತಮ್ಮ ಸ್ವಂತ ಸಿ.ಐ.ಡಿ. ಗಳಿಂದಲೂ ಇಂತಹ ವಿಚಾರಗಳನ್ನು ಪತ್ತೆ ಹಚ್ಚಲು ಪ್ರಯತ್ನಿಸಬೇಕು. ಸರ್ಕಾರದ ಕೆಲಸಗಳು ಆಮೆಯ ನಡಗೆಯಿಂದ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ನಡೆಯುತ್ತಿವೆ. ಬೆಂಗಳೂರು ಮಾಗಡಿ ರೋಡಿನಲ್ಲಿರುವ ಸಾಂಕ್ರಾಮಿಕ ರೋಗದ ಆಸ್ಪತ್ರೆಯನ್ನು ಜನ ವಸತಿ ಇಲ್ಲದ ಕಡೆ ಬದಲಾಯಿಸಿರೆಂದು ನಾನು ಕಳೆದ ಅಧಿವೇಶನದಲ್ಲಿ ಕೇಳಿಕೊಂಡಿದ್ದೆ. ಆ ಕಾರ್ಯ ಈ ವರೆಗೂ ಆಗಿಲ್ಲ. 24 ಸಾವಿರ ಪ್ರಜಾಸಂಖ್ಯೆ ಇರುವ ಬಡಕೂಲಿಕಾರರು, ಹರಿಜನರು ವಾಸಮಾಡುತ್ತಿರುವ ಸುತ್ತಮುತ್ತ ಹಳ್ಳಿಗಳಲ್ಲಿರುವ ಮಾಗಡಿ ರೋಡಿನಲ್ಲಿ ಒಂದು ಹೈಸ್ಕೂಲ್ ಅತ್ಯಾವಶ್ಯಕಬೇಕೆಂದು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದರೂ ಆ ಮನವಿಗಳು ಏನಾದುವೋ ದೇವರಿಗೇ ಗೊತ್ತು. ಜನಗಳ ಆರೋಗ್ಯ ಮತ್ತು ವಿದ್ಯಾಭ್ಯಾಸದಕಡೆ ನಿಗಾ ಕೊಡಬೇಕಾದದ್ದು ಸರ್ಕಾರದ ಪ್ರಥಮ ಕರ್ತವ್ಯ.

ಪೋಲೀಸ್ ಖಾತೆಯಲ್ಲಿ ದಕ್ಷತೆಯ ಅಭಾವ ಇತ್ತೀಚೆಗೆ ನಡೆದ ಅನೇಕ ಘಟನೆಗಳಿಂದ ಎದ್ದು ಕಾಣುತ್ತದೆ. ಸಕಾರಣಕ್ಕಿಂತಲೂ ಅಕಾರಣಕ್ಕೆ ಜನರನ್ನು ಪೋಲೀಸರು ತೊಂದರೆ ಕೊಡುತ್ತಿದ್ದಾರೆ, ವಿಚಾರಣೆಗೆ ಒಳಗಾಗುವ ಮಹಿಳೆಯರ ಮಾನ ಸಂರಕ್ಷಣೆಗೆ ಎಲ್ಲೆಲ್ಲಿಯೂ ವ್ಯವಸ್ಥೆ ಇಲ್ಲ. ಇದು ತಲೆತಗ್ಗಿಸುವ ವಿಚಾರ. ಇತ್ತೀಚೆಗೆ ನಡೆದ ಒಂದು ಘಟನೆಯಿಂದ ಸರ್ಕಾರ ಈ ಬಗ್ಗೆ ಹೆಚ್ಚು ನಿಗಾ ಕೊಡದಿದ್ದರೆ ತುಂಬ ಅಪಕೀರ್ತಿಗೆ ಗುರಿಯಾಗಬೇಕಾದೀತೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಅರಣ್ಯಶಾಖೆಯಲ್ಲಿರುವ ಕಳ್ಳಸಾಗಾಣಿಕೆ, ಲಂಚಕೋರತನ ನಿಲ್ಲಲು ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಮರಾಮತ್ ಇಲಾಖೆ ನೋಡಲು ದೊಡ್ಡದಾಗಿದ್ದರೂ ಜಡಭರತನಂತೆ ಕಾಣಿಸುತ್ತಿದೆ. ಕಂಟ್ರಾಕ್ಟರುಗಳಿಗೆ ಹಣ ಪಾವತಿ ಯಾಗಬೇಕಾದರೆ ದೂಪ, ದೀಪ, ನೈವೇದ್ಯಗಳಿಲ್ಲದೆ ಸಾಧ್ಯವೇ ಇಲ್ಲ. ಮಿತವ್ಯಯದ ಶಬ್ದವನ್ನು ಈ ಶಾಖೆ ಅರಿತಂತೆ ಕಾಣುವುದಿಲ್ಲ, ಒಬ್ಬ ಇಂಜಿನಿಯರ್ ನದಿಯ ಆಳವನ್ನು ಒಂದೆರಡು ಕಡೆ ಅಳತೆಮಾಡಿ ಸರಾಸರಿ ನದಿಯ ಆಳ ಇಷ್ಟಿದೆ ಎಂದು ಲೆಕ್ಕಹಾಕಿ ನದಿಯಲ್ಲಿ ನಡೆದುಹೋಗಿ ಮುಳುಗಿ ಹೋದ ಲೆಕ್ಕಾಚಾರದಂತೆ ಮರಾಮತ್ ಇಲಾಖೆಯ ಲೆಕ್ಕಾಚಾರಗಳು ನಡೆಯುತ್ತಿವೆ. ಇದು ತಪ್ಪಬೇಕು. ಮಿತವ್ಯಯಕ್ಕೆ ತವರುಮನೆಯಾಗಬೇಕು. ದೂಪ, ದೀಪ, ನೈವೇದ್ಯಗಳು ತಪ್ಪಬೇಕು. ಚಟುವಟಿಕೆಯಿಂದಿರುವ ಮರಾಮತ್ ಮಂತ್ರಿಗಳು ಈಬಗ್ಗೆ ಪೂರ್ಣ ನಿಗಾ ಕೊಡಲೆಂದು ವಿನಂತಿಸುತ್ತೇನೆ.

ವ್ಯವಸಾಯ ಇಲಾಖೆಯಲ್ಲೂ ಪ್ರಗತಿ ಚೆನ್ನಾಗಿಲ್ಲ. ರೈತರಿಗೆ ಅವಶ್ಯವಿರುವಕಡೆ ನೀರಾವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ರೈತರನ್ನು ಉತ್ತೇಜಿಸಬೇಕು. ಹೆಚ್ಚು ಬೆಳೆ ಬೆಳೆಯುವಂತೆ ಪ್ರೋತ್ಸಾಹಿಸಬೇಕು.

ಬೆಳೆಯುತ್ತಿರುವ ಬೃಹತ್ ಬೆಂಗಳೂರಿಗೆ ಕುಡಿಯುವ ನೀರಿನ ಸೌಕರ್ಯಕ್ಕೆ ಹಣ ಒದಗಿಸಿದ್ದೀರಿ. ಕೊಳಚು ಪ್ರದೇಶದ ನಿರ್ಮೂಲನಕ್ಕೂ ಹಣ ಒದಗಿಸಿದ್ದೀರಿ. ಆ ಬಗ್ಗೆ ವಂದನೆ. ಆದರೆ ಕಾರ್ಯ ಜಾಗ್ರತೆ ಆಗಬೇಕು. ಹಳ್ಳಿಗಾಡಿನವರಿಗೆ ಕುಡಿಯುವ ನೀರಿನ ಸೌಲಭ್ಯ ಎಲ್ಲೆಲ್ಲಿ ಬೇಕೋ ಅಲ್ಲಿಗೆಲ್ಲಾ ತೀವ್ರ ಗಮನ ಕೊಡಬೇಕು. ನೀರಿಗಾಗಿ ಪೇಚಾಡುವವರ ದೃಶ್ಯ ನೋಡುವಂತಿಲ್ಲ. ಅವರ ಸ್ಥಿತಿ ಹೇಳುವಂತಿಲ್ಲ. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚುತ್ತಿದೆ. ಹೆಸರುಘಟ್ಟ, ತಿಪ್ಪಗೊಂಡನಹಳ್ಳಿ ಜಲಾಶಯಗಳಿಂದ ಸಾಕಷ್ಟು ಒದಗಿಸಲಾಗುವುದು. ಅದಕ್ಕಾಗಿ ಸಾಕಷ್ಟು ಹಣ ಮಂಜೂರ್ಮಾಡಿದ್ದೇವೆ ಎಂದು ಸರ್ಕಾರದವರು ಉತ್ತರಕೊಡುತ್ತಿರುವರು. ಸಾಹುಕಾರ ಕಣಜತೆಗೆಯುವ ಹೊತ್ತಿಗೆ ಬಡವನ ಕಣ್ಣು ಬೆಳ್ಳಗಾಯಿತು ಎಂಬಂತಾಗಿದೆ. ಬೆಳೆಯುತ್ತಿರುವ ಬೃಹತ್ ಬೆಂಗಳೂರಿಗೆ ನಿಮ್ಮ ಲೆಖ್ಖಾಚಾರದಂತೆ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟಗಳ ನೀರು ಸಾಲದಾಗುತ್ತದೆ ಎಂದು ಖಂಡಿತವಾಗಿ ಹೇಳುತ್ತೇನೆ. ಕಾವೇರಿ ನದಿಯಿಂದ ನೀರನ್ನು ಒದಗಿಸಿದರೆ ಮಾತ್ರ ಬೆಂಗಳೂರಿನ ನೀರಿನ ಪೂರೈಕೆಯನ್ನು ನಡೆಸಬಹುದು. ಏನಾದರೂ ಆಗಲಿ, ಘನ ಸರ್ಕಾರದವರೇ, ನಿಮ್ಮ ದಮ್ಮಯ್ಯ ಸ್ವಾಮಿ, ಬೆಂಗಳೂರಿನವರಿಗೆ ಕುಡಿಯಲಿಕ್ಕೆ ಸಾಕಷ್ಟು ನೀರು ಬರುವಂತೆ ಮಾಡಿ ಎಂದು ವಿನಂತಿಸುತ್ತೇನೆ.

ಅಭಿವೃದ್ಧಿ ಯೋಜನೆಗಳಿಗಾಗಿ ಹಣವನ್ನೇನೋ ಉದಾರತೆಯಿಂದ ಒದಗಿಸಿದ್ದೀರಿ. ಇದರ ಮರೆಯಲ್ಲಿ ಸಾಲದಹೊರೆಯೂ ಉದಾರವಾಗಿಯೇ ಏರುತ್ತಿದೆ. ಯೋಜನೆಗಳಿಗೆ ಮಂಜೂರಾದ ಹಣ ನ್ಯಾಯವಾಗಿ ಅಪವ್ಯಯವಿಲ್ಲದೆ ಖರ್ಚಾಗುತ್ತಿದೆಯೇ ಇಲ್ಲವೇ ಎಂಬುದಕ್ಕೆ ತುಂಬ ನಿಗಾ ಕೊಡಬೇಕಾಗುವುದು. ನಾನಾ ಖಾತೆಗಳಲ್ಲಿ ನಾನಾಬಾಬುಗಳಲ್ಲಿ ವೃಥಾ ದುಂದು ವೆಚ್ಚವಾಗುವುದನ್ನು ತಪ್ಪಿಸುವ ಒಂದು ಕೆಲಸವನ್ನು ಸರ್ಕಾರದವರು ಸಾಧಿಸಿದರೆ ದೇಶಕ್ಕೆ ಮಹೋಪಕಾರ ಮಾಡಿದಂತಾಗುತ್ತದೆ. ಇದಕ್ಕಾಗಿಯೇ ಒಬ್ಬ ಮಂತ್ರಿಯನ್ನು ನೇಮಿಸಿದರೂ ಚಿಂತೆಯಿಲ್ಲ. ಆ ಮಂತ್ರಿಗೆ ಉಳಿತಾಯ ಮಂತ್ರಿ ಇಲ್ಲವೇ ಲೆಖ್ಖ ತನಿಖಾ ಮಂತ್ರಿ, ಇಲ್ಲವೇ ಮಿತವ್ಯಯ ಮಂತ್ರಿ, ಏನಾದರೂ ಅನ್ನಿರಿ, ನಾನಾಬಾಬುಗಳಲ್ಲ ಅನಾವಶ್ಯಕ ಖರ್ಚಾಗುವುದನ್ನು ತಪ್ಪಿಸಬೇಕು ಸರ್ಕಾರ ಈ ವಿಚಾರದಕಡೆ ಪೂರ್ಣ ನಿಗಾ ಕೊಡಬೇಕೆಂದು ಆಶಿಸುತ್ತೇನೆ.

ಸರ್ಕಾರಿ ಆಡಳಿತದಲ್ಲಿರುವ, ಪಿಂಗಾಣಿ ಕಾರ್ಖಾನೆ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ---ವಗೈರೆಗಳಲ್ಲಿ ಆಡಳಿತದ ಶಿಥಿಲತೆ ಇದೆ ಎಂಬ ದೂರು ಬಹಳವಾಗಿದೆ. ಲಂಚತನದಿಂದ ಲಕ್ಷಾಂತರ ರೂಪಾಯಿಗಳ ಉತ್ಪನ್ನ ಕಡಿಮೆಯಾಗುತ್ತಿದೆ ಎಂದು ತಿಳಿದುಬಂದಿದೆ. ಬಹಳ ವರ್ಷಗಳಿಂದ ಅಲ್ಲಿಯೇ ಇರುವ ಒಬ್ಬೊಬ್ಬ ಅಧಿಕಾರಿಗಳು ಬ್ರಿಟಿಷ್ ರಸಿಡೆಂಟರಂತೆ ವರ್ತಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಬಗ್ಗೆ ಪತ್ರಿಕೆಗಳೂ, ಸಾರ್ವಜನಿಕರೂ, ವಿಧಾನ ಸಭಾಸದಸ್ಯರೂ ದೂರು ಹೇಳಿದ್ದರೂ ಸಹಾ ಅವರಿಗೆ ವರ್ಗ ಮಾಡಿಲ್ಲ, ಕ್ರಮ ತೆಗೆದುಕೊಂಡೂ ಇಲ್ಲ. ನನ್ನ ಜವಾಬ್ದಾರಿಯನ್ನರಿತು ಈ ಮಾತು ಹೇಳುತ್ತಿದ್ದೇನೆ. ನ್ಯಾಯಕ್ಕೇಕೆ ಬೆದರಬೇಕು, ಜಾತಿಗೇಕೆ ಅಂಜಬೇಕು? ಸರ್ಕಾರ ಈ ಬಗ್ಯೆ ಕ್ರಮ ತೆಗೆದುಕೊಳ್ಳದಿದ್ದರೆ ಚಿನ್ನದ ಸೂಜಿ ಎಂದು ಕಣ್ಣು ಚುಚ್ಚಿಕೊಳ್ಳಲಾಗುವುದಿಲ್ಲ, ಸರ್ಕಾರದ ದಕ್ಷತೆಯ ಅಭಾವದಬಗ್ಯೆ ಸವಾಲು ಹಾಕಬೇಕಾದೀತೆಂದು ನಮ್ರತೆಯಿಂದ ಸೂಚಿಸುತ್ತೇನೆ. "The voice of the people is the voice of God" ಎಂಬುದನ್ನು ಗಮನಿಸಬೇಕಾಗಿಕೋರುತ್ತೇನೆ.

ರಾಷ್ಟ್ರದ ಋಣಬಾಧೆ ಏರುತ್ತಿದೆ. ಏರುತ್ತಿರುವ ರಾಷ್ಟ್ರದ ಹೊರೆಯನ್ನು ನೋಡಿದರೆ ಭಾವೀ ಪೀಳಿಗೆಯು ಬೆಚ್ಚಿಬೀಳುವಂತಿದೆ. ಹಣಕಾಸಿನ ಮಂತ್ರಿಗಳು ಬಡ್ಜೆಟ್ ಮಂಡನಾ ಭಾಷಣದ ಅಂತ್ಯದಲ್ಲಿ ತಿಳಿಸಿರುವಂತೆ, ರಾಷ್ಟ್ರಾಭಿವೃದ್ಧಿಗೆ ನೂತನ ಉತ್ಪನ್ನ ಮಾರ್ಗಗಳನ್ನು ಕಂಡುಹಿಡಿಯುವುದು ಸೂಕ್ತವಾಗಿದೆ. ರಾಷ್ಟ್ರದ ಖನಿಜ ಸಂಪತ್ತು, ಅರಣ್ಯ ಸಂಪತ್ತು, ವಾಣಿಜ್ಯಸಂಪತ್ತು, ಜಲಸಂಪತ್ತು ಇತ್ಯಾದಿಗಳ

ಉತ್ಪನ್ನ ಹೆಚ್ಚಿಸಿಕೊಂಡಲ್ಲಿ ಸಾಲ ಮಾಡಬೇಕಾದ ಪರಿಸ್ಥಿತಿ ಬರಲಾರದೆಂದು ನಂಬಿದ್ದೇನೆ. ಅಂಕೆ ಸಂಖ್ಯೆಗಳ ಗುಣಾಕಾರ, ಭಾಗಾಕಾರಗಳಿಂದ ಬುದ್ಧಿವಂತರಿಗೆ ಮಾತ್ರ ಗೊತ್ತಾಗಬಹುದಾದ ಉಳಿತಾಯದ ಬಡ್ಜೆಟ್ ತೋರಿಸುವುದಕ್ಕಿಂತಲೂ, ಜನ ಸಾಮಾನ್ಯರೂ ಸಹಾ ಭೇಷ್, ಹಣ ದುಂದುಮಾಡಿಲ್ಲ. ಬುದ್ಧಿವಂತಿಕೆಯಿಂದ ಖರ್ಚುಮಾಡಿದ್ದೀರಿ. ರಾಷ್ಟ್ರದ ಹಿತವನ್ನು ಮಾಡಿದ್ದೀರಿ ಎಂದು ಹೇಳುವಂತಹ ಆಯವ್ಯಯ ಅಂದಾಜನ್ನು ಮುಂದಿನಸಾರಿಯಾದರೂ ಆರ್ಥಿಕ ಮಂತ್ರಿಗಳು ಮಾಡಿಸಲೆಂದು ಹಾರೈಸಿ ಇಂದಿನ ಉಳಿತಾಯದ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆ.

[MR. SPEAKER in the Chair]

ಶ್ರೀ ಕೆ. ಎ. ಪಾಟೀಲ್ (ತಾಳೀಕೋಟೆ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದಿರುವ ಈ ಬಡ್ಜೆಟ್ ಏನಿದೆ ಇದನ್ನು ನೋಡಿದಮೇಲೆ ನನಗೆ ಎನ್ನಿಸುತ್ತದೆ. ಇದರಲ್ಲಿ ಹೊಸದು ಯಾವುದೂ ಇಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ನಮ್ಮ ಭಾಗಕ್ಕೆ ಯಾವ ಹೊಸ ರೈಲ್ವೆ ಮಾರ್ಗಗಳನ್ನೂ ಕೂಡ ತೋರಿಸಿಲ್ಲ. ನಮ್ಮ ಭಾಗದಲ್ಲಿ ರಾಯಚೂರಿನಿಂದ ತಾಳೀಕೋಟೆ ಮೂಲಕ ರಾಯಭಾಗಕ್ಕೆ ರೈಲ್ವೆ ಮಾರ್ಗ ಹಾಕುವುದು ಬಹಳ ಆವಶ್ಯಕ. ನಮ್ಮ ದೇಶದ ಅಭಿವೃದ್ಧಿ ಆಗಬೇಕಾದರೆ ಅಥವಾ ಯವುದೇದೇಶ ಬೆಳೆಯಬೇಕಾದರಾಗಲಿ ಮೊದಲು ಸಾರಿಗೆ ಸಂಪರ್ಕ ಇರಬೇಕಾದುದು ಬಹಳ ಅವಶ್ಯಕ. ಹಿಂದೆ ಮಾತನಾಡಿದಾಗಲೂ ಕೂಡ ಹೇಳಿದ್ದೇನೆ. ನನ್ನ ಕಾನ್ಸ್ಟಿಟ್ಯುಯನ್ಸಿನಲ್ಲಿ ಉಕ್ಕಲಿ ಎಂದು ಒಂದು ಹಳ್ಳಿ ಇದೆ. ಅಲ್ಲಿ 5 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. 21 ಸಾವಿರ ರೂಪಾಯಿ ಲ್ಯಾಂಡ್ ರೆವಿನ್ಯೂ ಕೊಡುತ್ತಾರೆ. ಅಂಥ ಊರಿಗೆ ಊರಿನಿಂದ ಊರಿಗೆ ಹೋಗಲು, ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಹೋಗಲು ರಸ್ತೆ ಸೌಕರ್ಯ ಇಲ್ಲ.

ನಮ್ಮ ಭಾಗದಲ್ಲಿ ರಸ್ತೆಗಳು ಸರಿಯಾಗಿಲ್ಲ. ಅಲ್ಲಲ್ಲಿ ಸೇತುವೆಗಳು ಇಲ್ಲ. ಇದು ಬಹಳ ದುರ್ದೈವದ ಸಂಗತಿ. ಮಳೆಗಾಲದಲ್ಲಿ ಆರು ತಿಂಗಳು ಸಂತೆಗಾಗಿ ಮತ್ತೊಂದು ಊರಿಗೆ ಹೋಗಲಿಕ್ಕೆ ಬರುವದಿಲ್ಲ. ಸರಿಯಾದ ರಸ್ತೆಗಳು ಇಲ್ಲದ ಮೂಲಕ ಇದ್ದ ಊರಲ್ಲಿಯೇ ಇರಬೇಕಾಗುತ್ತದೆ. ಮಧ್ಯೆ ದೋಣಿ ಇದೆ. ತಾಲ್ಲೂಕುಸ್ಥಳಕ್ಕೆ ಹೋಗಲು 8–10 ಮೈಲು ನಡೆಯಬೇಕಾಗುತ್ತದೆ. ದೋಣಿ ಭಾಗದ ಅಭಿವೃದ್ಧಿ ಯೋಜನೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗಾಗಲೇ ಮಲೆನಾಡ ಅಭಿವೃದ್ಧಿ ಯೋಜನೆಯನ್ನು ಸರಕಾರ ಮಾಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ರಸ್ತೆಗಳ ನಿರ್ಮಾಣಕ್ಕೆ ಆದ್ಯಗಮನ ಕೊಡಬೇಕು. ಹೋದ ಸಾರಿ ಪರಿಹಾರ ಕಾರ್ಯ ಕೈಗೊಂಡರೂ ನನ್ನ ಕ್ಷೇತ್ರದಲ್ಲಿ ಒಂದೂ ಕಾರ್ಯಕೈಗೊಳ್ಳಲಿಲ್ಲ. ಆ ಕ್ಷೇತ್ರದಿಂದ ಸ್ವತಂತ್ರಸದಸ್ಯರು ಆರಿಸಿ ಬಂದಿದ್ದಾರೆಂದು ಈರೀತಿ ಭೇದಭಾವ ಮಾಡುವದಾದಲ್ಲಿ ಕರನಿರಾಕರಣೆ ಚಳವಳಿಯನ್ನು ಆರಂಭಿಸಬೇಕಾಗುತ್ತದೆ. ಮುಂದಿನ ಸಲ ಟ್ಯಾಕ್ಸ ಕೊಡವಾರದು ಎಂದು ಸತ್ಯಾಗ್ರಹ ಮಾಡಬೇಕಾಗುತ್ತದೆ.

ಇನ್ನೊಂದು ವಿಷಯ ಹೇಳಬೇಕಾಗಿದೆ. ನಮ್ಮ ಸ್ಟೇಟಿನಲ್ಲಿ 1,57,316 ಜನರು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಾರೆ. ಒಟ್ಟು 1496 ಫ್ಯಾಕ್ಟರಿಗಳು ಇವೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಬಾಗಲಕೋಟೆಯ ಸಿಮೆಂಟ ಫ್ಯಾಕ್ಟರಿಯನ್ನು ಬಿಟ್ಟರೆ ಬೇರೆ ದೊಡ್ಡ ಫ್ಯಾಕ್ಟರಿ ಯಾವುದೂ ಇಲ್ಲ. ಆದುದರಿಂದ ನಮ್ಮ ಭಾಗದಲ್ಲಿ. ದೊಡ್ಡ ಪ್ರಮಾಣದ ಮೇಲೆ ಫ್ಯಾಕ್ಟರಿಗಳನ್ನು ಪ್ರಾರಂಭಿಸಬೇಕು. ಬೆಂಗಳೂರಿನಂಥ ದೊಡ್ಡ ಪಟ್ಟಣದಲ್ಲಿಯೇ ಎಲ್ಲ ಫ್ಯಾಕ್ಟರಿಗಳನ್ನು ತೆರೆಯುವುದಕ್ಕಿಂತ ನಮ್ಮ ಭಾಗದಲ್ಲಿ ಪ್ರಾರಂಭಿಸಬೇಕು. ಇಂಥ ಕೆಲಸ ಮಾಡುವಾಗ ಹಳೆಯ ಮೈಸೂರು ಹೊಸ ಮೈಸೂರು ಎಂದು ಭೇದಭಾವಮಾಡಬಾರದು. ಹೊಸದಾಗಿ ಈ ರಾಜ್ಯಕ್ಕೆ ಬಂದಿರುವ ಪ್ರದೇಶದಲ್ಲಿ ಬೇಕಾದಷ್ಟು ಖನಿಜ ಸಂಪತ್ತು ಇದೆ. ಬಿಜಾಪುರ ಜಿಲ್ಲೆಯಲ್ಲಿ ಹತ್ತಿ ಚೆನ್ನಾಗಿ ಬೆಳೆಯುತ್ತದೆ. ನಮ್ಮ ಜಿಲ್ಲೆಯಲ್ಲಿ 2,25,957 ಹತ್ತಿಬೇಲ್ಸ್ ಆಗುತ್ತವೆ. ಆದುದರಿಂದ ಬಿಜಾಪುರ ಜಿಲ್ಲೆಯಲ್ಲಿ ಹತ್ತಿ ನೂಲಿನ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕು. ಎಣ್ಣೆ ತೆಗೆಯುವದಕ್ಕೆ ಎಣ್ಣೆಕಾಳು ಹೆಚ್ಚಾಗಿ ಬೆಳೆಯುತ್ತವೆ. ಎಣ್ಣೆಯ ಕಾರ್ಖಾನೆಯೊಂದನ್ನು ತೆರೆಯಬೇಕು ಬಾಗಲಕೋಟೆಯ ಹತ್ತಿರ ತಾಮ್ರ ಮ್ಯಾಂಗನೀಸು ಬೇಕಾದಷ್ಟು ಸಿಕ್ಕುತ್ತದೆ. ಹೆಚ್ಚಾಗಿರುವದನ್ನು ಪರದೇಶಕ್ಕೂ ಸಹ ಕಳಿಸಬಹುದು. ಮುಖ್ಯವಾಗಿ ಹಳ್ಳಿಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು. ದೇಶದಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವುದಕ್ಕೆ ಹಳ್ಳಿಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆರೆಯುವುದು ಒಂದು ಒಳ್ಳೆಯ ಮಾರ್ಗವಾಗಿದೆ. ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸುವುದು ಅವಶ್ಯವಾಗಿದೆ. ಆದುದರಿಂದ ನಾನು ಪುನಃ ಹೇಳುವುದು ಏನೆಂದರೆ ಬಿಜಾಪುರ ಜಿಲ್ಲೆಯಲ್ಲಿ ಒಂದು ಹತ್ತಿ ಕಾರ್ಖಾನೆ, ಬಿಸ್ಕಟು ಫ್ಯಾಕ್ಟರಿ ಮತ್ತು ಎಣ್ಣೆಯ ಕಾರ್ಖಾನೆಯನ್ನು ತಾವು ಪ್ರಾರಂಭಿಸಬೇಕು.

ಇನ್ನು ನಮ್ಮ ದೇಶದಲ್ಲಿ ವ್ಯವಸಾಯ ಬೆಳೆಯಬೇಕಾದರೆ ಅಭಿವೃದ್ಧಿಯಾಗಬೇಕಾದರೆ ಪಶು ಸಂಪತ್ತು ಮುಖ್ಯವಾಗಿದೆ. ಒಕ್ಕಲತನ ಅಭಿವೃದ್ಧಿಯಾಗಬೇಕಾದರೆ ಪಶುಸಂಗೋಪನೆ ಸರಿಯಾದ ಒಂದು ವ್ಯವಸ್ಥಿತ ರೀತಿಯಲ್ಲಿ ಆಗಬೇಕು. ಹಿಂದಕ್ಕೆ ಮುಂಬಯಿ ಸರಕಾರದವರು ಒಳ್ಳೇ ತಳಿ ತಯಾರುಮಾಡುವುದಕ್ಕೆ ಒಂದು ಹೋರಿಗೆ ಅರ್ಧದಷ್ಟು ಹಣವನ್ನು ಕೊಡುತ್ತಿದ್ದರು. ತಳಿ ಸುಧಾರಣೆ ಮುಖ್ಯವಾಗಿ ಆಗಬೇಕು. ಹಾಗು ಪಶು ಸಂಗೋಪನೆ ಮಾಡಬೇಕು. ಅಕಸ್ಮಾತ್ ಯಾವದಾದರೂ ಒಂದು ಬೇನೆ ಬಂದು ದನಗಳು ಸತ್ತು ಹೋದರೆ ರೈತನಿಗೆ ಬಹಳ ಲುಕ್ಸಾನಾಗುತ್ತದೆ. ಸಂಚಾರಿ ಪಶುವೈದ್ಯ ಆಸ್ಪತ್ರೆಯ ಸೌಲಭ್ಯ ಒದಗಿಸಬೇಕು. ಹಾಗು ಅಲ್ಲಲ್ಲಿ ವೆಟೆರಿನರಿ ದವಾಖಾನೆಗಳನ್ನು ಪ್ರಾರಂಭಿಸಬೇಕು. ತಾಳೀಕೋಟೆ ಗ್ರಾಮದಲ್ಲಿ ಒಂದು ವೆಟೆರಿನರಿ ದವಾಖಾನೆಯು ಆಗಬೇಕೆಂದು ಜನರು ಕೇಳುತ್ತಿದ್ದಾರೆ. ಅದರ ಅವಶ್ಯಕತೆ ಅಲ್ಲಿ ಬಹಳ ಇದೆ. ಅಲ್ಲಿ ಒಂದು ವೆಟೆರಿನರಿ ದವಾಖಾನೆಯನ್ನು ಮಾಡಬೇಕು. ಈ ರೀತಿ ಮಾಡಿ ಪಶುಸಂಪತ್ತನ್ನು ರಕ್ಷಣೆ ಮಾಡಬೇಕಾಗಿದೆ.

ನಮ್ಮ ಜಿಲ್ಲೆಯಲ್ಲಿ ಟ್ರ್ಯಾಕ್ಟರ ಸಲುವಾಗಿ ಬೇಡಿಕೆ ಹೆಚ್ಚಾಗಿದೆ. ನಮ್ಮ ವ್ಯವಸಾಯ ಮಂತ್ರಿಗಳು ಇದರ ಬಗ್ಗೆ ಯೋಚನೆಮಾಡಿ ಸುಲಭವಾಗಿ ಎಲ್ಲರಿಗೂ ಟ್ರ್ಯಾಕ್ಟರ್ ದೊರೆಯುವ ಹಾಗೆ ಒಂದು ವ್ಯವಸ್ಥೆ ಮಾಡುವರೆಂದು ನಾನು ನಂಬಿದೆ ನೆ.

ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಕೈಮಗ್ಗಗಳು ಹೆಚ್ಚಾಗಿವೆ. ಬಿಜಾಪುರ ಒಂದೇ ಜಿಲ್ಲೆಯಲ್ಲಿ 32,520 ಕೈಮಗ್ಗಗಳು ಕೆಲಸ ಮಾಡುತ್ತವೆ. ಈ ಕೈಮಗ್ಗಗಳಿಗೆ ವಿದ್ಯುತ್ ಶಕ್ತಿಯನ್ನು ಒದಗಿಸಿಕೊಟ್ಟರೆ ಬಹಳ ಅನುಕೂಲವಾಗುವುದು. ಕೈಮಗ್ಗಾ ಕೈಗಾರಿಕೆಯು ಅಭಿವೃದ್ಧಿಗೆ ಬರುವುದು ವಿದ್ಯುಚ್ಛಕ್ತಿಯಿಂದ ನೀರಾವರಿಗೂ ಸಹ ಹೆಚ್ಚಾಗಿ ಉಪಯೋಗವಾಗುತ್ತದೆ.

(ಶ್ರೀ ಕೆ. ಎ. ಪಾಟೀಲ್)

ನಮ್ಮ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಾಗಿ ಇನ್ನು ಹೆಚ್ಚು ಹಣ ಬಡ್ಜೆಟ್ಟಿನಲ್ಲಿ ಒದಗಿಸಿ ಕೊಟ್ಟು ಅನುಕೂಲ ಕಲ್ಪಿಸಿಕೊಡಬೇಕು. ಇನ್ನೊಂದು ವಿಷಯ. ಶ್ರೀಮಾನ್ ಶಂಕರಗೌಡ ಪಾಟೀಲರು ದೋಣಿ ಯೋಜನೆ ಆಗಬೇಕು ಎಂದ ಹೇಳಿದರು. ಆದರೆ ಅದನ್ನು ನಾನು ವಿರೋಧಿಸುತ್ತೇನೆ. ಕಾಂಗ್ರೆಸಪಕ್ಷದ ಸದಸ್ಯರು ಹೇಳಿದ್ದನ್ನು ವಿರೋಧಿಸಬೇಕು ಎಂದು ನಾನು ಹೇಳುತ್ತಿಲ್ಲ. ದೋಣಿ ನೀರು ಉಪ್ಪು ಇರುವುದರಿಂದ ಜಮೀನು ಹಾಳಾಗುತ್ತದೆ. ದೋಣಿ ಯೋಜನೆಯಿಂದ ಪ್ರಯೋಜನವಾಗುವುದಿಲ್ಲ. ಈ ವರ್ಷ ಮಳೆ ಹೆಚ್ಚಾಗಿ ದೋಣಿಯನೀರು ಹೊರಸೂಹಿ ಸುತ್ತಮುತ್ತಲಿನ ಭೂಮಿಯಲ್ಲಿ ಈ ಉಪ್ಪು ನೀರು ಬಂದು ಬೆಳೆ ನಷ್ಟವಾಗಿದೆ ಎಂಬುದು ಎಲ್ಲರಿಗೆ ತಿಳಿದ ವಿಷಯವಾಗಿದೆ. ಆದುದರಿಂದ ಈ ದೋಣಿ ಯೋಜನೆಯನ್ನು ಮಾಡಬಾರದೆಂದು ನಾನು ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಗೋಧಿ ಬೆಳೆಗೆ rust ಅಂದರೆ ಕುಂಕುಮ ರೋಗ ಬಂದು ಪ್ರತಿವರ್ಷ ಬಹಳ ಲುಕ್ಸಾನ ಆಗುತ್ತದೆ. ಗೋಧಿಬೆಳೆಗೆ ಈ ರೋಗಬಾರದಹಾಗೆ ಅದನ್ನು ತಡೆಗಟ್ಟಲು ಏನಾದರೂ ಉಪಾಯ ಕೈಕೊಳ್ಳಬೇಕಾಗಿದೆ. ಈ ಕುಂಕುಮ ರೋಗವನ್ನು ತಡೆಗಟ್ಟುವುದಕ್ಕೆ ಸಂಶೋಧನೆ ನಡೆಸಿ ಉಪಾಯವನ್ನು ಕಂಡುಹಿಡಿಯುವದಕ್ಕೆ ಹೆಚ್ಚು ಆಸ್ಥೆವಹಿಸಬೇಕೆಂದು ನಾನು ಸೂಚಿಸುತ್ತೇನೆ.

5-30 P.M.

ನಮ್ಮ ಜಿಲ್ಲೆಯಲ್ಲಿ 30 ಅಡಿ ತೆಗೆದರೆ ಬಾವಿಗಳಲ್ಲಿ ನೀರು ಸಿಕ್ಕುತ್ತದೆ. ಆದ್ದರಿಂದ ದೋಣಿ ಯೋಜನೆಗಿಂತ ಬಾವಿ ಕಡೆ ಹೆಚ್ಚು ಲಕ್ಷ ಕೊಡಬೇಕು. ನಾನು ಆ ಕ್ಷೇತ್ರಗಳಲ್ಲಿ ಅಡ್ಡಾಡಿ ಜನರ ಅಭಿಪ್ರಾಯ ಹೇಳುತ್ತಿದ್ದೇನೆ. ದೋಣಿ ಯೋಜನೆ ಮಾಡಿದರೆ ಅದರಿಂದ ಅನುಕೂಲ ಅಷ್ಟಾಗಿ ಆಗುವುದಿಲ್ಲ. ಅಲ್ಲಿ ಜನರು ಬಾವಿಯಿಲ್ಲದೆ ಮಳೆಗಾಲದಲ್ಲಿ ಕೆರೆಕಟ್ಟೆಗಳ ಕಡೆಯಿಂದ ನೀರನ್ನು ತಂದು ಕುಡಿಯುತ್ತಾರೆ. ಆದ್ದರಿಂದ ಕುಡಿಯುವ ನೀರಿಗಾಗಿ ನಳ ಹಾಕುವ ಯೋಜನೆಮಾಡಬೇಕು. ಮೂರು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳಿವೆ. ಅದಕ್ಕೆಲ್ಲಾ ಕುಡಿಯುವ ನೀರಿನ ಯೋಜನೆ ಮಾಡಿದರೆ ಉತ್ತಮ. ಅಲ್ಲದೆ ಅಲ್ಲಿ ಬಾವಿ ತೆಗೆದರೆ ಉಪ್ಪು ನೀರು ಸಿಕ್ಕುತ್ತದೆ, ಅದನ್ನು ಕುಡಿಯುವುದಕ್ಕಾಗುವುದಿಲ್ಲ. ಆದ್ದರಿಂದ ಆರು ತಿಂಗಳು ಕೆರೆಕಟ್ಟೆಗಳ ನೀರನ್ನು ಕುಡಿಯುತ್ತಾರೆ. ದೋಣೂರು, ಕಡಕೋಳ ಈ ಗ್ರಾಮಗಳಲ್ಲಿ ಮತ್ತು ಇನ್ನು ಕೆಲವುಕಡೆ ಮೂರುಮೈಲಿ ದೂರದಿಂದ ನೀರನ್ನು ತರಬೇಕು. ಶ್ರೀಮಂತರಾದರೆ ಎತ್ತುಗಾಡಿ ಇಟ್ಟುಕೊಂಡು ದೂರದಿಂದ ನೀರನ್ನುತರಬಹುದು, ಬಾಕಿಯವರಿಗೆ ಸಾಧ್ಯವಿಲ್ಲ, ಬಡವರಿಗೆ ಕಷ್ಟಪರಿಸ್ಥಿತಿಯಿದೆ. ಸರ್ಕಾರಕ್ಕೆ ಈ ವಿಚಾರ ಹೇಳಿದರೂ ಇಂಥ ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿಲ್ಲ. ಇದಕ್ಕಾಗಿ ಸರ್ಕಾರದವರು ನಳ ಹಾಕುವ ಯೋಜನೆ ಮಾಡುವುದು ಬಹಳ ಮುಖ್ಯ. ಅಲ್ಲದೆ ಅಲ್ಲಿಯ ಕೆರೆಯ ಸಿಲ್ಟ್ ತೆಗೆಸಿಯಾದರೂ ಕೆಲವು ಕಾಲ ನೀರನ್ನೊದಗಿಸಬೇಕು.

ಇನ್ನೊಂದು ಸೋಷಿಯಲ್ ವೆಲ್‌ಫೇರ್ ವಿಚಾರ. ಅದನ್ನು ಸೆಲ್ಫ್ ವೆಲ್‌ಫೇರ್ ಎಂದು ಹೇಳಬೇಕಾಗುತ್ತದೆ. ಈ ಬಾಬಿಗಾಗಿ ಸರ್ಕಾರದವರು ಎಷ್ಟೋ ಹಣ ಖರ್ಚು ಮಾಡುತ್ತಿದ್ದಾರೆ. ಸಂಬಂಧಪಟ್ಟ ಛೇರ್ಮನ್‌ರವರಿಗೆ ಜೀಪು ಮೊದಲಾದ ಸೌಕರ್ಯ ಒದಗಿಸಿರುತ್ತಾರೆ. ಆದರೆ ಅವರು ವೆಲ್‌ಫೇರ್ ಕೆಲಸ ಮಾಡುವುದಿಲ್ಲ; ಮನೆಮುಂದೆ ಜೀಪುನಿಂತಿರುತ್ತದೆ, ಟಿ. ಎ. ಮಾತ್ರಭರ್ತಿ ಮಾಡಿಕೊಳ್ಳುತ್ತಾರೆ, ಒಂದೆರಡು ತಿಂಗಳು ಜೀಪ್‌ನಿಂದ ಬಾಡಿಗೆ ತೆಗೆದುಕೊಳುತ್ತಾರೆ ಎಂದು ಆರೋಪವಿದೆ. ಇದಕ್ಕೆ ಆಫೀಸರನ್ನು ನೇಮಕಮಾಡಿ ಸರಿಯಾಗಿ ವ್ಯವಸ್ಥೆ ಮಾಡುವುದು ಅವಶ್ಯಕ, ಅವರಮೇಲೆ ದೂರು ಬಂದರೆ ಕ್ರಮ ಕೈಕೊಳ್ಳಬೇಕು. ಬಹಳ ಕಡೆ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ.

ಸಮಾಜ ವಿಕಾಸ ಯೋಜನೆ ಎಂದೇನಿದೆ, ಅದನ್ನು ಸ್ವವಿಕಾಸ ಯೋಜನೆ ಎಂದು ಹೇಳಬಹುದು ಸಮಾಜ ವಿಕಾಸ ಯೋಜನೆ ಜನರ ಹಿತಮಾಡುವುದಕ್ಕಿಲ್ಲ. ಇದು ಕಾಂಗ್ರೆಸ್ ಗೂಳಿಗಳು ಮೇಯಲು ಮಾಡಿದ ಹುಲ್ಲುಗಾವಲನಂತೆ ಇದೆಯೇ ವಿನಾ ಇನ್ನೇನೂ ಇಲ್ಲ, ಇದರಿಂದ ಸರ್ಕಾರದ ಹಣ ವ್ಯರ್ಥ ಹಾಳಾಗುತ್ತಿದೆ. ಈ ದಿವಸ ಪಂಚವಾರ್ಷಿಕ ಯೋಜನೆಯಿದೆ. ಇದರಿಂದ ಜನರಿಗೆ ಸಹಾಯವಾಗುವುದಿಲ್ಲ. ಈ ಸಂಬಂಧವಾಗಿ ಆನರೇರಿಯಂ ಕೊಟ್ಟು ಕೆಲವರನ್ನು ನೇಮಕ ಮಾಡುತ್ತಾರೆ.

ಇನ್ನೊಂದು, ಮಂತ್ರಿಗಳ ಪ್ರವಾಸದ ವಿಚಾರ. ಪುಷ್ಯಮಿ ಮಳೆಬರುವ ಹಾಗೆ ಮಂತ್ರಿಗಳು ಬರುತ್ತಾರೆ, ಮೇಲೆ ಮೇಲೆ ಬರುತ್ತಾರೆ. ಪ್ರವಾಸ ಮಾಡಲು, ಅದಕ್ಕೆ ಆಕ್ಷೇಪಣೆಯಿಲ್ಲ. ಅದರಿಂದ ಪ್ರಜೆಗಳಿಗೆ ಸಾಕಷ್ಟು ಅನುಕೂಲವಾಗಬೇಕು, ಒಂದು ಸ್ಥಳಕ್ಕೆ ಹೋದಾಗ ಅಲ್ಲೇನು ತೊಂದರೆಯಿದೆ, ಬಾವಿ ಇಲ್ಲವೆ, ರಸ್ತೆ ಇಲ್ಲವೆ ಎಂದು ವಿಚಾರಮಾಡಿ ಬೇಕಾದ ಅನುಕೂಲ ಕಲ್ಪಿಸಬೇಕೇ ವಿನಾ ತದ್ವಿರುದ್ಧವಾಗಿ ಮಾಡಬಾರದು. ತೊಂದರೆ ನಿವಾರಣೆ ಮಾಡದೆ ಒಂದು ವರ್ಷ ಪ್ರಾವಾಸಮಾಡಿದರೂ ಏನೂ ಅನುಕೂಲವಾಗುವುದಿಲ್ಲ. ಪ್ರವಾಸ ಕೈಕೊಳ್ಳುವುದರಿಂದ ಅನುಕೂಲವಿದೆ. ಕಾಗದದ ಮೇಲೆ ತೀರ್ಮಾನಮಾಡುವುದಕ್ಕಿಂತ ಪ್ರವಾಸ ಹೋಗಿ ನೋಡಿ ತೀರ್ಮಾನ ಮಾಡುವುದು ಒಳ್ಳೆಯದು. ಪ್ರವಾಸಹೋದಾಗ ದವಾಖಾನೆ ಸರಿಯಾಗಿದೆಯೇ ಎಂದು ನೋಡಬೇಕು, ಅವಶ್ಯವಿರುವ ಕಡೆ ಹೋಗಲೇ ಬೇಕು. ಓಪನಿಂಗ್ ಸೆರಿಮನಿ ಮುಂತಾದ ಸಮಾರಂಭಗಳಿಗಾಗಿಯೇ ಪ್ರವಾಸ ಮಾಡುವುದು ಬೇಡ, ಪ್ರವಾಸ ಹೋದಾಗ ಈ ಸಭೆಯ ಸದಸ್ಯರು ಕೆಲವರು ತಮ್ಮ ಕೆಲಸ ಏನೂ ಮಾಡುವುದಿಲ್ಲವೆಂದು ಹೇಳಿ ಅಧಿಕಾರಿಗಳ ಮೇಲೆ ಒಂದು ಇಂಪ್ರೆಷನ್ ಆಗುವಹಾಗೆ ಮಾಡುತ್ತಾರೆ. ಎಂ. ಪಿ. ಸಿ. ಸಿ. ಚುನಾವಣಾ ಪ್ರಚಾರ ಕೂಡ ಪ್ರವಾಸಕಾಲದಲ್ಲಿ ಮಾಡುತ್ತಾರೆ. ಬೊಂಬಾಯಿ ಕರ್ಣಾಟಕದಲ್ಲಿ ಜಾತಿಭಾವನೆ ಕಡಮೆಯಿದೆ. ಆದರೆ ಮಂತ್ರಿಗಳು ಬಂದು ಜಾತಿ ಭಾವನೆ ಬಿತ್ತುತ್ತಿದಾರೆ. ಜಾತಿಭಾವನ ಬೀಜ ಬಿತ್ತುವುದು ಸರಿಯಲ್ಲ; ಅದಕ್ಕೆ ಅವಕಾಶ ಕೊಡಬಾರದು.

ಶಿಕ್ಷಣ ಖಾತೆಯಲ್ಲಿ ಬಹಳವಾಗಿ ಲಂಚಕೋರತನ ಬೆಳೆಯುತ್ತಿದೆ. ನಮ್ಮಲ್ಲಿ ಸ್ಕೂಲುಬೋರ್ಡಿದೆ. ಆ ಬೋರ್ಡಿನವರು ಉಪಾಧ್ಯಾಯರುಗಳನ್ನು ವರ್ಗಾಯಿಸುವ ಅಧಿಕಾರ ಪಡೆದಿರುತ್ತಾರೆ. ಮೂರುವರ್ಷಗಳ ಮೇಲೆ ಒಂದು ಕಡೆ ಇಡಬಾರದೆಂದು ನಿಯಮವಿದೆ, ಆದರೂ ಬೋರ್ಡಿನವರು ತಮ್ಮಮನಸ್ಸಿಗೆ ಬಂದಂತೆ ವರ್ಗ ಮಾಡುತ್ತಾರೆ. ಆದ್ದರಿಂದ ಸ್ಕೂಲುಬೋರ್ಡನ್ನು ಮೊದಲು ತೆಗೆಯಬೇಕು. ಒಂದು ಛಲೋ ಯೋಜನೆ ಮಾಡಬೇಕು. ಈಗ ಸ್ಕೂಲು ಬೋರ್ಡಿಗೆ ಅಧಿಕಾರವಿರುವುದರಿಂದ ಅಲ್ಲಿಯ ಆಫೀಸ್ ಸೂಪರಿಂಟೆ

ಡೆಂಟರು ಒಬ್ಬೊಬ್ಬ ಉಪಾಧ್ಯಾಯರಿಂದ ನೂರು ರೂಪಾಯಿಗಳ ಲಂಚ ತೆಗೆದುಕೊಳ್ಳುತ್ತಾರೆ. ಇದು ನಮ್ಮ ದುರ್ದೈವ. 70 ರೂಪಾಯಿ ಸಿಕ್ಕುವ ಉಪಾಧ್ಯಾಯರು 100 ರೂಪಾಯಿ ಆದರೂ ಲಂಚ ಕೊಡಬೇಕು. ಆದ್ದರಿಂದ ವೊದಲು ಸ್ಕೂಲು ಬೋರ್ಡ್ ಆಡಳಿತ ತೆಗೆದು ಒಂದೇ ಆಡಳಿತವನ್ನಿಡಬೇಕು.

ದೇಶದಲ್ಲಿ ಲಂಚ ಬಹಳ ಜಾಸ್ತಿಯಾಗಿದೆ. ಕೆಲ ಕೆಲವು ಜನರಿಗೆ ಅದೇ ಉದ್ಯೋಗವಾಗಿದೆ. ಬಂದೂಕದ ಲೈಸೆನ್ಸಿಗಾಗಿ ಕಲೆಕ್ಟರಿಗೆ ಹೇಳಿ ಒಬ್ಬೊಬ್ಬರು 500 ರೂಪಾಯಿಗಳನ್ನು ಕೊಡುತ್ತಾರೆ. ಕಲೆಕ್ಟರ ಹತ್ತಿರ ಹೋಗುವುದು, ಬೇಕಾದವರಿಗೆ ಕೆಲಸಮಾಡಿಸಿ ಕೊಡುವುದು, ಇದೇ ಕೆಲವರಿಗೆ ಉದ್ಯೋಗವಾಗಿದೆ, ಈ ರೀತಿ ಜೀವನ ಮಾಡಿಕೊಳ್ಳಲು ಅನೇಕ ಕಾಂಗ್ರೆಸಿಗರು ಪ್ರಯತ್ನ ಪಡುತ್ತಾರೆ. ಇದನ್ನೆಲ್ಲಾ ಲಂಚ ನಿರೋಧ ಇಲಾಖೆಯವರು ಪರೀಕ್ಷೆಮಾಡಬೇಕು. ಪ್ರತಿ ಐದು ವರ್ಷಗಳಿಗೊಮ್ಮೆ ಆಸ್ತಿ ಎಷ್ಟಿದೆ, ಆದಾಯ ಎಷ್ಟಿದೆ ಎಂದು ತನಿಖೆಮಾಡಿ ತಪ್ಪಿತಸ್ತರನ್ನು ಶಿಕ್ಷೆಗೆ ಒಳಪಡಿಸಬೇಕು. ಲಂಚ ನಿರೋಧ ಇಲಾಖೆಯ ಕಾರ್ಯಕ್ರಮ ಬಹಳ ಮಹತ್ವವುಳ್ಳದ್ದು. ತಾಳಿಕೋಟೆ ಕಡೆ ಓ. ಸಿ. ಆಟ ಮತ್ತು ಜೂಜು ವಿಶೇಷವಾಗಿದೆ. ಅದನ್ನು ತಡೆಯಬೇಕೆಂದು ತಿಳಿಸಿದರೂ ಪೋಲೀಸಿನವರು ಸರಿಯಾದ ಕ್ರಮಕೈಕೊಂಡಿಲ್ಲ. ಏನಾದರೂ ದೂರು ಹೇಳಿದರೆ ಸಬ್-ಇನ್ಸ್ಪೆಕ್ಟರು ಹೋಗಿ ಪೋಲೀಸು ಸ್ಟೇಷನ್ನಲ್ಲಿ ಕುಳಿತು ಕೊಂಡು ಸಮಾಚಾರ ತಿಳಿದುಕೊಳ್ಳಲು ಯತ್ನಿಸುತ್ತಾರೆ, ತಾವೇ ಹೋಗಿ ವಿಚಾರ ಮಾಡುವುದಿಲ್ಲ. ಈ ರೀತಿ ನಡೆದರೆ ಸಹಾಯವಾಗುವುದಿಲ್ಲ, ಕಿರುಕುಳ ತಪ್ಪುವುದಿಲ್ಲ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವರು ಸಲಹೆ ಹೇಳಿರುತ್ತಾರೆ. ಈ ನ್ಯೂನತೆ ಸರಿಪಡಿಸಲು ಒಂದು ಸಮಿತಿಯನ್ನು ಮಾಡಿ ಸರಿಯಾಗಿ ಕೆಲಸ ನಡೆಯುವಂತೆ ಮಾಡಬೇಕು. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಡಿ. ಎಚ್. ರುದ್ರಪ್ಪ (ಕಡೂರು).—ಈಗ ನಮ್ಮ ಮುಂದೆ ಅರ್ಥಸಚಿವರು ಇಟ್ಟಿರುವ 1958-59 ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿಚ್ಛಿಸುತ್ತೇನೆ. ವಿದ್ಯಾಭ್ಯಾಸಕ್ಕಾಗಿ ಒಟ್ಟು ಬಡ್ಜೆಟ್ಟಿನಲ್ಲಿ 1/4 ಭಾಗದಷ್ಟು ಕೊಡಲಾಗಿದೆ. ಇಷ್ಟು ಹಣವನ್ನು ನಾವು ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಿದ್ದರೂ ನಾವು ಕೊಡುತ್ತಿರುವ ವಿದ್ಯಾಭ್ಯಾಸ ಯಾವ ಮಟ್ಟದಲ್ಲಿದೆಯೆಂಬುದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಬರೀ ಎಲ್ಲರನ್ನೂ ಡಿಗ್ರಿ ಹೋಲ್ಡರುಗಳನ್ನಾಗಿ ಮಾಡಿ, ನಾಳೆ ದಿವಸ ಅವರೆಲ್ಲರೂ ಕೆಲಸ ಕೊಡಿಯೆಂದರೆ ಎಲ್ಲಿಂದ ಕೊಡುವುದು ? ಡಿಗ್ರಿ ಪಡೆದು ನಾಳೆಯ ದಿವಸ ಹಳ್ಳಿಗೆ ಹೋಗಿ ಏನು ಮಾಡಬೇಕು ? ಈ ದೃಷ್ಟಿಯಿಂದ ಮಲ್ಟಿಪರ್ಪಸ್ ಹೈಸ್ಕೂಲುಗಳನ್ನು ಆದಷ್ಟು ತೀವ್ರವಾಗಿ ಕೈಕೊಂಡರೆ, ಅದನ್ನೇ ಒಂದು ಸರ್ಕಾರಿ ಕೈಗಾರಿಕಾ ನೀತಿಯೆಂದು ಭಾವಿಸಿ ಮುಂದುವರಿಸಿದರೆ, ನಮ್ಮ ಹುಡುಗರಿಗೆ ಮುಂದೆ ಕೆಲಸಸಿಕ್ಕದೆ ಇದ್ದರೂ ಏನಾದರೂ ಸ್ವಂತವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗಿಲ್ಲದೆ, ಈಗಿನ ರೀತಿಯಲ್ಲಿ ವಿದ್ಯಾಭ್ಯಾಸ ಕೊಡುವುದರಿಂದ ದೇಶಕ್ಕೂ ಹಾನಿ ಮತ್ತು ಜನರಿಗೂ ಅನುಕೂಲವಿಲ್ಲವೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ನ್ಯೂನತೆಯನ್ನು ನಾವು ಕಾಣುತ್ತಿದ್ದೇವೆ. ಯಾರನ್ನಾದರೂ ಪರದೇಶಕ್ಕೆ ಉಚ್ಚಶಿಕ್ಷಣಕ್ಕೆ ಕಳುಹಿಸುತ್ತೀರಿ. ಅವರು ನೀವು ಹೇಳಿದಂತೆ ಶಿಕ್ಷಣ ಪಡೆದು ಬಂದರೆ, ಅವರನ್ನು ತೆಗೆದುಕೊಂಡು ಹೋಗಿ ಬೇರೆ ಯಾವುದೋ ಇಲಾಖಾ ಮುಖ್ಯಾಧಿಕಾರಿಯಾಗಿ ಹಾಕಿಬಿಡುತ್ತೀರಿ. ಅವರನ್ನು ಮುಂಚೆ ಕಳುಹಿಸುವಾಗ ನಿಮ್ಮ ಸ್ಕೀಮ್ ಏನಿತ್ತು ಎಂಬುದನ್ನು ನೋಡುವುದೇ ಇಲ್ಲ. ಈ ರೀತಿ ಮಾಡುವುದರಿಂದೇನು ಪ್ರಯೋಜನ ?

ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮದು ಮಲೆನಾಡು ಡಿಸ್ಟ್ರಿಕ್ಟು. ವಿದ್ಯಾಭ್ಯಾಸದ ವಿಷಯದಲ್ಲಿ ಮಲೆನಾಡು ಪ್ರದೇಶ ಬಹಳ ಹಿಂದುಳಿದಿದೆ. ಅಲ್ಲಿ ವಿದ್ಯಾಭ್ಯಾಸದ ಅನುಕೂಲತೆಯನ್ನು ಜಾಸ್ತಿಮಾಡುವುದಕ್ಕೋಸ್ಕರ ಹಾಗೂ ಟೆಕ್ನಿಕಲ್ ವಿದ್ಯಾಭ್ಯಾಸದ ಸೌಕರ್ಯವನ್ನು ಒದಗಿಸುವುದಕ್ಕೋಸ್ಕರ ಶ್ರೀಮಾನ್ ಬಸವೇಗೌಡರು ಒಂದು ಲಕ್ಷ ರೂಪಾಯಿ ಡೊನೇಷನ್ ಕೊಟ್ಟು ಚಿಕ್ಕಮಗಳೂರಿನಲ್ಲಿ ಒಂದು ಪಾಲಿಟೆಕ್ನಿಕ್ ಇನ್ಸ್ಟಿಟ್ಯೂಟ್ ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೋ ಇದುವರೆಗೂ ಗೊತ್ತಾಗಿಲ್ಲ. ಈ ರೀತಿ ತಾವು ಮಾಡುವುದಾದರೆ ಮುಂದೆ ಯಾರು ತಾನೆ ದಾನ ಕೊಟ್ಟಾರು? ಕಟ್ಟಡಕ್ಕೆ ದುಡ್ಡುಕೊಡಿ ಎಂದು ತಾವು ಸಾರ್ವಜನಿಕರನ್ನು ಕೇಳುತ್ತೀರಿ. ಆದರೆ ದುಡ್ಡುಕೊಟ್ಟರೆ ಕಟ್ಟಡವನ್ನು ಎಷ್ಟು ವರ್ಷಗಳಾದರೂ ಕಟ್ಟಿಸಿ ಕೊಡುವುದಿಲ್ಲ, ದಾನ ಕೊಡುವ ಉದ್ದೇಶವೇನೆಂದರೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದಿದ್ದರೆ, ಟ್ರೆಜರಿಯಲ್ಲಿ ದುಡ್ಡನ್ನು ಇಟ್ಟುಕೊಂಡು ಕುಳಿತರೆ ಏನು ಮಾಡುವುದು? ಹುಡುಗರಿಗೆ ಅನುಕೂಲವೂ ಮಾಡುವುದಿಲ್ಲ, ದುಡ್ಡನ್ನೂ ವಾಪಸು ಕೊಡುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಕಟ್ಟಡಗಳನ್ನು ಪ್ರಾರಂಭ ಮಾಡಿ ಹುಡುಗರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ವ್ಯವಸಾಯದ ವಿಚಾರ. ಇದಕ್ಕೆ ಬಡ್ಜೆಟ್ಟಿನಲ್ಲಿ ಒಂದು ಕೋಟಿರೂಪಾಯಿಗಳನ್ನು ಇಟ್ಟಿದ್ದೀರಿ. ಇದು ಬಹಳ ಕಡಮೆಯೆಂದೇ ನಾನು ಹೇಳಬೇಕು. ಇದರಲ್ಲಿಯೇ ಕೊ-ಆಪರೇಷನ್, ವೆಟರಿನರಿ ಬೇರೆ ಸೇರಿಕೊಂಡಿವೆ. ಈ ಮೂರು ಬಾಬುಗಳಿಗೆ ಸೇರಿ ಒಂದು ಕೋಟಿರೂಪಾಯಿಗಳೆಂದರೆ ಏನೂ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಎಲ್ಲ ಸಂಬಳ ಸಾರಿಗೆಗೇ ಆಗಿ ಹೋಗುತ್ತದೆ.

ಗೊಬ್ಬರ, ಬೀಜ ಮುಂತಾದುವುಗಳನ್ನು ಒದಗಿಸುವ ಒಂದು ಏರ್ಪಾಡಿಟ್ಟು ಕೊಂಡಿದ್ದೀರಿ. ಹೋದಸಾರಿ ನಮ್ಮ ಕಡೆ ಬಂದು ಡಿಪೋವಿನಲ್ಲಿ ಗೊಬ್ಬರ ಕೊಡುವಾಗ್ಗೆ ತೂಕದಲ್ಲಿ ಕಡಮೆ ಕೊಡುತ್ತಿದ್ದ ವಿಷಯವನ್ನು ನಾನು ಮಂತ್ರಿಗಳ ಗಮನಕ್ಕೂ, ಕೂಡ ತಂದೆ. ಅವರೇನು ಮಾಡಿದರೋ ಗೊತ್ತಿಲ್ಲ. ರೈತರಿಗೆ ಹೀಗೆ ಅನ್ಯಾಯ ಮಾಡಕೂಡದು. ಅಲ್ಲಿರತಕ್ಕ ಅಧಿಕಾರಿಗಳಿಗೆ ಗೊತ್ತಿದ್ದೂ ಈ ರೀತಿ ಆಗುತ್ತಿತ್ತೋ, ಹೇಗೋ ಏನೋ, ಗೊತ್ತಿಲ್ಲ. ಅದೇನೇ ಇರಲಿ, ಅಧಿಕಾರಿಗಳು ದಕ್ಷತೆಯಿಂದ ವರ್ತಿಸಿ ರೈತರಿಗೆ ತೂಕ-ಅಳತೆ ಮುಂತಾದವುಗಳಲ್ಲಿ ಮೋಸವಾಗುವುದನ್ನು ತಪ್ಪಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಸರ್ಕಾರದವರು ಟ್ರಾಕ್ಟರುಗಳನ್ನು ತಂದು Hire Purchase system ಮೇಲೆ ಕೊಡಬೇಕೆಂದು ಒಂದು ಏರ್ಪಾಡುಮಾಡಿದ್ದಾರೆ. ಜಮೀನೇ ಸಾಕಾದಷ್ಟು ಯಾರೊಬ್ಬರಿಗೂ ಇಲ್ಲದಿರುವಾಗ, ಅರ್ಧ ಎಕರೆ, ಎರಡು ಎಕರೆ ಇಟ್ಟುಕೊಂಡಿರುವವರಿಗೆ ಟ್ರಾಕ್ಟರುಗಳಿಂದೇನು ಪ್ರಯೋಜನ? ಹತ್ತಿಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಟ್ರಾಕ್ಟರ್ ಕೊಂಡು

(ಶ್ರೀ ಡಿ. ಎಚ್. ರುದ್ರಪ್ಪ)

ಕೊಂಡು ಒಂದೆರಡು ಎಕರೆ ಉಳುಮೆ ಮಾಡುವುದರಿಂದೇನು ಪ್ರಯೋಜನ ಅವನಿಗೆ ಲಭಿಸುತ್ತದೆ? ಈ ಕ್ಲಿಷ್ಟಪರಿಸ್ಥಿತಿಯನ್ನು ಯಾವರೀತಿ ಸರಿಪಡಿಸಬೇಕೋ ನೀವೇ ಯೋಚನೆಮಾಡಬೇಕು.

ವಿದ್ಯುಚ್ಛಕ್ತಿಯ ಬಾಬು. ನಮ್ಮ ಕಡೂರು ತಾಲ್ಲೂಕಿನಲ್ಲಿ ಹೆಚ್ಚಿಗೆ rural partsನಲ್ಲಿ ಇಷ್ಟು ದಿವಸಗಳಾದರೂ ವಿದ್ಯುಚ್ಛಕ್ತಿ ಬಂದಿಲ್ಲ. ಅನೇಕಸಾರಿ ಮಾನ್ಯ ಮಂತ್ರಿಗಳಿಗೆ ಈ ವಿಷಯದಲ್ಲಿ ಹೇಳಿಕೊಂಡಿದ್ದೇವೆ. ಅವರೂ ಕೂಡ ಮಾಡಿಸಿಕೊಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಕಡೂರು ತಾಲ್ಲೂಕು ಒಂದು ದೊಡ್ಡ ತಾಲ್ಲೂಕು. ರೈಲ್ವೆ ಸೆಸ್ ಎಂದು ಹೇಳಿ 10-15 ಲಕ್ಷ ರೂಪಾಯಿಗಳು ಅಲ್ಲಿಂದ ವಸೂಲಾದ್ದಿದೆ. ಆದರೆ, ಈಗ ಅಲ್ಲಿಗೆ ರೈಲ್ವೆ ಬರುವುದಿಲ್ಲವೆಂದು ಹೇಳಿದ್ದಾರೆ. ರೈಲ್ವೆ ಇಲ್ಲದಿರುವಾಗ ವಿದ್ಯುಚ್ಛಕ್ತಿಯನ್ನಾದರೂ ಕೊಟ್ಟು ರಸ್ತೆ, ಸೇತುವೆಗಳನ್ನು ಉತ್ತಮಪಡಿಸಿದರಾದರೂ ನಮ್ಮ ಭಾಗ ಮುಂದುವರಿಯುವುದಕ್ಕೆ ಒಂದು ಅವಕಾಶಮಾಡಿದಂತಾಗುತ್ತದೆ. ನಮ್ಮ ಕಡೆ ಕೆಲವು ಪ್ರದೇಶಗಳು ಯಾವ ರೋಡಿನ ಸಂಪರ್ಕವೂ ಸಹ ಇಲ್ಲದೆ ಬಹಳ ಹಿಂದುಳಿದಿವೆ. ಆಸಂದಿ ಎಂಬುದರಲ್ಲಿ ಸೇತುವೆ ಕೆಲಸ ಆಗಿಲ್ಲ. ಹಳೆಯ ಮೈಸೂರಿನ ಭೂಕಂದಾಯದ ಉತ್ಪತ್ತಿಯಲ್ಲಿ 1/6 ಭಾಗದಷ್ಟು ಉತ್ಪತ್ತಿಕೊಡುವಂಥ ದೊಡ್ಡ ತಾಲ್ಲೂಕಾದರೂ ಈ ತಾಲ್ಲೂಕು, ಅಸ್ಥಿರತಕ್ಕ ಅನುಕೂಲಗಳನ್ನು ಇತರ ಕಡೆಗಳಿಗೆ ಹೋಲಿಸಿ ನೋಡಿದರೆ, ಅಲ್ಲಿರುವುದು ತೀರ ಕಡಮೆ. ಅಲ್ಲೊಂದು ಸೇತುವೆ ಇಲ್ಲ. ಹತ್ತಿಪ್ಪತ್ತು ಮೈಲುಗಳಿಂದ ತಾಲ್ಲೂಕ್ ಹೆಡ್‌ಕ್ವಾರ್ಟರಿಗೆ ಬರುವ ಜನರಿಗೆ ಬಹಳ ತೊಂದರೆಯಾಗಿದೆ. ಎಗ್ಸಿಕ್ಯೂಟಿವ್ ಎಂಜಿನಿಯರಿಗೆ ಈ ತೊಂದರೆ ಹೇಳಿದ್ದೇನೆ. ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದಾಯಿತು. ಇಷ್ಟಾದರೂ ಆ ಒಂದು ಸೇತುವೆಮಾಡಿ ಕೊಟ್ಟಿಲ್ಲ. ಸ್ಟೇಟ್ ಫಂಡ್ ರಸ್ತೆಯೂ ಸಹ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಕೇವಲ 70-80 ಮೈಲಿಗಳಷ್ಟು ಮಾತ್ರ ಇದೆ. ಬಹಳ ಹಿಂದುಳಿದಿರುವ ನಮ್ಮ ಮಲೆನಾಡಿನ ರೈತರಿಗೆ ಇಂಥ ಅನುಕೂಲತೆ ಕೊಡದಿದ್ದರೆ ಅವರು ಮುಂದುವರಿಯುವುದು ಹೇಗೆ? ನಮ್ಮ ಕಡೆಯ ನೆಲವೂ ಕರೀಮಣ್ಣಿನದು. ಬಹಳ ಬೇಗ ಕೆಟ್ಟುಹೋಗುತ್ತದೆ. ಮಾನ್ಯ ಮಂತ್ರಿಗಳು ಇತ್ತ ಹೆಚ್ಚು ಗಮನಕೊಡಬೇಕೆಂದು ಹೇಳುತ್ತೇನೆ.

ಗ್ರಾಮಾಂತರ ನೀರು ಸರಬರಾಯಿಯ ವಿಚಾರದಲ್ಲಿ ಹೋದ ಸಲವೂ ಏನೂ provision ಮಾಡಲಿಲ್ಲ. ಆ ಸ್ಕೀಮನ್ನೇ ಬಿಟ್ಟರೋ ಏನೋ ಗೊತ್ತಿಲ್ಲ. ಆದಷ್ಟು ಮಟ್ಟಿಗೆ ಹೊಸ ಭಾವಿಗಳನ್ನು ತೆಗೆಯಿಸುವುದಕ್ಕೆ ಇನ್ನಾದರೂ ಏರ್ಪಾಡುಮಾಡುತ್ತೀರೆಂದು ನಂಬಿದ್ದೇನೆ.

ನಮ್ಮ ದೇಶಕ್ಕೆ 200 ಕೋಟಿ ರೂಪಾಯಿಗಳ ಸಾಲವಿದೆ. ಇಷ್ಟು ಸಾಲವಾದರೆ ದೇಶಕ್ಕೆ ಬಹಳ ಕಷ್ಟ. ಆದ್ದರಿಂದ ಆದಷ್ಟುಮಟ್ಟಿಗೆ ಸಾಲವನ್ನು ಕಡಮೆಮಾಡಬೇಕು. ಅಭಿವೃದ್ಧಿ ಯೋಜನೆಗಳನ್ನು ಮಾಡಿದಷ್ಟು ಮುಂದೆ ಉತ್ಪತ್ತಿ ಜಾಸ್ತಿಯಾಗುತ್ತದೆಂದೇನೋ ತಾವು ಹೇಳುತ್ತೀರಿ. ಆದರೂ ಕೂಡ ಯಾವ ರೀತಿಯಲ್ಲಿ ಲಾಭ ಬರುತ್ತದೆ, ಉತ್ಪತ್ತಿಬರುತ್ತದೆ, ಎಲ್ಲೆಲ್ಲಿ ಯಾವ ಯಾವ ಬಾಬಿಗೆ ಖರ್ಚುಮಾಡಿದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಸ್ನೇಹಿತರು ಹೇಳುತ್ತಿದ್ದರು. N.E.S. ಸ್ಕೀಂ ತೆಗೆದುಕೊಂಡರೆ ಅದರಲ್ಲಿ ಅನ್ಯಾಯವಾಗಿ ಹಣ ಖರ್ಚಾಗುವುದೇ ಜಾಸ್ತಿ. ರಸ್ತೆಗಳಿಗೆ ಮಣ್ಣನ್ನು ಮಾತ್ರ ಹಾಕಿ, ಬಿಲ್‌ಮಾಡಿ, ದುಡ್ಡನ್ನು ತೆಗೆದುಕೊಳ್ಳುತ್ತಾರೆ. ಮಳೆಗಾಲದಲ್ಲಿ ಮಣ್ಣಿನಿಂದ ಮಾಡಿರುವ ರಸ್ತೆಗಳೆಲ್ಲ ಕೊಚ್ಚಿಹೋಗಿ ರಸ್ತೆಗಳೇ ಇರುವುದಿಲ್ಲ. ಆದುದರಿಂದ ಹಣವನ್ನು ಖರ್ಚುಮಾಡುವಾಗ ಪರ್ಮನೆಂಟ್ ಕೆಲಸಗಳಿಗೆ ಎಂದರೆ ಕಾಸ್‌ವೇ, ಸೇತುವೆ, ಮುಂತಾದ ಕೆಲಸಗಳಿಗೆ ಖರ್ಚು ಮಾಡಬೇಕೆಂದು ಸಲಹೆಕೊಡುತ್ತಿದ್ದೇನೆ.

ಪೋಲೀಸ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಮಾನ್ಯ ಸ್ನೇಹಿತರು ಕೆಲವರು ಹೇಳಿದರು. ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಇಲ್ಲ, ಲಂಚ ಜಾಸ್ತಿಯಾಗಿದೆ ಎಂದು. ಅದು ನಿಜ. ಪಾನನಿರೋಧದಿಂದ ಪೋಲೀಸ್ ಇಲಾಖೆಗೆ ಕೆಟ್ಟ ಹೆಸರು ಬಂದಿದೆ. ಪಾನನಿರೋಧವನ್ನು ಸಂಸ್ಥಾನದಲ್ಲೆಲ್ಲ ಪೂರ್ಣವಾಗಿ ಜಾರಿಗೆ ತರಬೇಕು. ಇಲ್ಲವೆ ಎಲ್ಲ ಕಡೆಯೂ ತೆಗೆದುಹಾಕಬೇಕು. ಪಾನನಿರೋಧವನ್ನು ಜಾರಿಗೆ ತಂದಿರುವುದರಿಂದ ಸರ್ಕಾರಕ್ಕೆ ಬರುವ ಉತ್ಪತ್ತಿಯನ್ನು ಕಳೆದುಕೊಂಡಿದ್ದೇವೆ. ಎಲ್ಲೋ ಕೆಲವರು ಮಾತ್ರ ಕುಡಿಯುತ್ತಿದ್ದುದನ್ನು ತಪ್ಪಿಸುತ್ತೇವೆಂದು ಮಾಡಿ ಈಗ ಎಲ್ಲ ಜನರೂ ಕುಡಿಯುವುದನ್ನು ಕಲಿತುಕೊಂಡಿದ್ದಾರೆ. ಈ ಮಟ್ಟದಲ್ಲಿ ಪಾನನಿರೋಧವನ್ನು ಜಾರಿಗೆ ತರುತ್ತೇವೆಂದರೆ, ಅದನ್ನು ಹೇಳಿಕೊಳ್ಳುವುದಕ್ಕೂ ನಾಚಿಕೆಯಾಗುತ್ತದೆ. ಮತ್ತು ಅದು ಯಶಸ್ವಿಯಾಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಏನಾದರೂ ದುಡ್ಡು ಬರುತ್ತದೆಯೇ ಎಂದರೆ ಏನೂ ಬರುವುದಿಲ್ಲ. ಪೋಲೀಸಿನವರ ಜೇಬಿಗೆ, ಮತ್ತು ಜುಲ್ಮಾನೆಯ ರೂಪದಲ್ಲಿ ಕೋರ್ಟಿಗೆ ಹಣವನ್ನು ಕೊಡುತ್ತಾರೆ. ಪ್ರತಿಯೊಂದು ಹಳ್ಳಿಯಲ್ಲೂ, ಮನೆ ಮನೆಯಲ್ಲೂ ಕಳ್ಳಭಟ್ಟಿ ತಯಾರಾಗುತ್ತಿದೆ. ಅವರನ್ನು ಹಿಡಿಯುವುದು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ನನ್ನ ಸಲಹೆ ಹೀಗಿದೆ. ಪಾನನಿರೋಧವನ್ನು ಸಂಪೂರ್ಣವಾಗಿ ತೆಗೆದುಹಾಕಿ, ಜನಗಳು ಏನಾದರೂ ಮಾಡಿಕೊಳ್ಳಲಿ. ಜನರಲ್ಲಿ ತಿಳಿವಳಿಕೆ ಇದ್ದು ಅವರು ತಿಳಿದುಕೊಂಡರೆ ತಾನಾಗಿಯೇ ಕಡಮೆಯಾಗುತ್ತದೆ. ನಾನು ಮೇಲೆ ಹೇಳಿರುವುದನ್ನು ಪ್ರಯತ್ನಮಾಡಿ ನೋಡಬೇಕೆಂಬುದು ನನ್ನ ಸಲಹೆ. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಡಿಸ್ಟಿಲೆರಿಗಳಿವೆ. ಇಡೀ ಜಿಲ್ಲೆಯಲ್ಲಿ ಎಲ್ಲಿಹೋದರೂ ಡಿಸ್ಟಿಲೆರಿಗಳಿವೆ. ಸರ್ಕಾರದವರು ಇದನ್ನೆಲ್ಲ ತೀವ್ರವಾಗಿ ಆಲೋಚನೆಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಪಾನನಿರೋಧವನ್ನು ತೆಗೆಯುವುದು ಒಳ್ಳೆಯದು, ಅದರಿಂದ ಸರ್ಕಾರಕ್ಕೂ ಮರ್ಯಾದೆ ಬರುತ್ತದೆ, ಜನಗಳಿಗೂ ಮರ್ಯಾದೆ ಬರುತ್ತದೆಂದು ಹೇಳುತ್ತೇನೆ. ಕಡೂರು ಮತ್ತು ತರೀಕೆರೆ ತಾಲ್ಲೂಕ್‌ಗಳಲ್ಲಿ ಮತ್ತು ಡಿಸ್ಟ್ರಿಕ್ಟುಗಳಲ್ಲಿ ಎರಡು ವರ್ಷಗಳಿಂದ 10-15 ಖೂನಿ ಆಗಿವೆ. ಒಂದನ್ನೂ investigate ಮಾಡಿಲ್ಲ. ಈ ಪರಿಸ್ಥಿತಿ ಇರುವಾಗ ಜನರು ಹೊರಗಡೆ ಒಂದು ಊರಿಗೆ ಹೋಗಬೇಕಾದರೆ, ಯಾವುದಾದರೂ ಕೆಲಸದ ಮೇಲೆ ಹೋಗಬೇಕಾದರೆ, ಸಾಮಾನ್ಯ ಜನಗಳಿಗೆ ಹೇಗೆ ಧೈರ್ಯವಿರುತ್ತದೆಂಬುದನ್ನು ಯೋಚಿಸಬೇಕು. ಪೋಲೀಸ್ ಇಲಾಖೆಯು ದಕ್ಷತೆಯಿಂದ ಕೆಲಸ ಮಾಡಬೇಕು, ನಮ್ಮ ಜಿಲ್ಲೆಯಲ್ಲಿ ನಡೆದಿರುವ ಖೂನಿ ಕೇಸುಗಳನ್ನು ಪತ್ತೆಹಚ್ಚಬೇಕು. ಕಡೂರು ಮತ್ತು ತರೀಕೆರೆ ತಾಲ್ಲೂಕಿನ ಹಳ್ಳಿಗಾಡಿನ ಜನಗಳಿಗೆ ಬಹಳ ಹೆದರಿಕೆ ಯುಂಟಾಗಿರುವುದರಿಂದ ಪೋಲೀಸ್ ಇಲಾಖೆಯವರು ಸರಿಯಾಗಿ ಕೆಲಸಮಾಡುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಮೊನ್ನೆ ಒಂದು ಪ್ರಶ್ನೆಯನ್ನು ನೋಡಿದೆ. 25 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಬಾಕಿ ಇರುವವರು 45 ಜನರಿದ್ದಾ

ರೆಂದು ಮಾನ್ಯ ಮಂತ್ರಿಗಳು ಉತ್ತರಕೊಟ್ಟರು. ಒಬ್ಬ ರೈತ ಎರಡು ರೂಪಾಯಿ ಕಂದಾಯವನ್ನು ಕೊಡದೆ ಇದ್ದರೆ ಅವನ ಮನೆ, ಮಠ ಹರಾಜು ಹಾಕಿ ವಸೂಲ್ಮಾಡುತ್ತಾರೆ. ಹೀಗಿರುವಲ್ಲಿ ಸೇಲ್ಸ್ ಟ್ಯಾಕ್ಸ್ ವಸೂಲ್ಮಾಡುವುದಕ್ಕಾಗುವುದಿಲ್ಲವೆಂದರೆ ಕಾರಣವೇ ನೆಂದು ಕೇಳುತ್ತೇನೆ. ರೈತನಮೇಲೆ ಹಾಕುವ ತೆರಿಗೆ ಯನ್ನು ಅವನು ಸಲೀಸಾಗಿ ಕೊಡಬೇಕು. ದೊಡ್ಡ ದೊಡ್ಡವರು ಸೇಲ್ಸ್‌ಟ್ಯಾಕ್ಸ್ ಉಳಿಸಿಕೊಂಡರೆ ಅವ ರನ್ನು ಕೇಳುವವರೇ ಇಲ್ಲ. ನಾನು ಸರ್ಕಾರವನ್ನು ಟೀಕೆಮಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳ ಬಾರದು. ಸರಿಯಾಗಿ ವಸೂಲು ಮಾಡದೆಹೋದರೆ ಸರ್ಕಾರಕ್ಕೆ ದುಡ್ಡು ಹೇಗೆ ಬರುತ್ತದೆ? ಲೆಕ್ಕಮಾತ್ರ ಇಟ್ಟುಕೊಂಡರೆ ದುಡ್ಡು ಎಲ್ಲಿಂದ ಬರುತ್ತದೆ?

ಆಡಳಿತದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶ್ರೀಯುತ ಕೆ. ಪುಟ್ಟಸ್ವಾಮಿಯವರು ಸಾವಿರರೂಪಾಯಿಗಿಂತ ಹೆಚ್ಚಿಗೆ ಸಂಬಳವನ್ನು ಯಾರಿಗೂ ಕೊಡಬಾರದೆಂದು ಈ ಮಾನ್ಯ ಸಭೆ ಯಲ್ಲಿಯೇ ನಿರ್ಣಯವಾಗಿದೆ ಎಂದು ಹೇಳಿದರು. ಈ ಸಭೆಯಲ್ಲಿ ಏನೇ ತೀರ್ಮಾನವಾಗಲಿ ಅದನ್ನು ಸರ್ಕಾರ ದವರು ಕಾರ್ಯರೂಪಕ್ಕೆ ತರಬೇಕು ಎಂದು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಯಾರಿಗೇ ಆಗಲಿ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳ ವಿಲ್ಲದಂತೆ ಬದಲಾವಣೆ ಮಾಡಬೇಕಾದುದು ಯೋಗ್ಯ ವಾದದ್ದು. ಸಂಬಳಸಾರಿಗೆಗಳಿಗೆ ನಮ್ಮ ಆದಾಯ ದಲ್ಲಿ ಶೇಕಡ 30ರಷ್ಟು ಕೊಡುತ್ತಿದ್ದೇವೆ. ಸಿಬ್ಬಂದಿಯ ಸಂಬಳ ಸಾರಿಗೆಗಳಿಗೇ ಶೇಕಡ ಮೂವತ್ತರಷ್ಟು ಖರ್ಚು ಮಾಡಿದರೆ ಬಹಳ ಕಷ್ಟವಿದೆ. ಅದನ್ನು ಶೇಕಡ 10-15 ಇರುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಟೆನೆನ್ಸಿ ರೂಲ್ಸ್ ಬಗ್ಗೆ ಮಾತ ನಾಡಲು ನನಗೆ ಅವಕಾಶ ಕೊಡಲಿಲ್ಲ. ಈಗ ಅದರ ವಿಚಾರವಾಗಿ ಎರಡು ಮಾತನ್ನು ಹೇಳುತ್ತೇನೆ. ಟೆನೆನ್ಸಿವಿಷಯದಲ್ಲಿ ಸೀಲಿಂಗ್ ಹಾಕಬೇಕು ಎಂದು ಮಾಡಿದ್ದಾರೆ. ಜಮೀನು ಇಲ್ಲದವರಿಗೆ ಇರತಕ್ಕ ಜಮೀನನ್ನು ಹಂಚಬೇಕು. ವ್ಯವಸಾಯ ಮಾಡ ತಕ್ಕವನಿಗೆ ಜಮೀನಿದ್ದರೆ ಕೊಡಬೇಕು. ಕೊನೆಯಪಕ್ಷ ಜಾಸ್ತಿ ಜಮೀನಿರುವವರ ಹತ್ತಿರ ತೆಗೆದುಕೊಳ್ಳು ವಷ್ಟನ್ನು ಸರ್ಕಾರಕ್ಕೆ ತೆಗೆದುಕೊಂಡು ಹಂಚಬೇಕು. ಆದರೆ ಸೀಲಿಂಗ್ ನಿಗದಿ ಮಾಡುವುದರಲ್ಲಿ ಎಲ್ಲ sector ಗಳಲ್ಲಿಯೂ ಜಾರಿಗೆ ತರದೆ ಬರೀ ವ್ಯವಸಾಯಗಾರ ನಿಗೆ ಮಾತ್ರ ಅನ್ವಯಿಸುವಂತೆ ಮಾಡುತ್ತಿದ್ದೀರಿ. ರೈತನಿಗೆ ಸೀಲಿಂಗ್‌ಹಾಕಿ, ಆತನನ್ನೂ ಕಡ್ಡಾಯ ಮಾಡಿ ನೀನು ಇಷ್ಟೇ ಜಮೀನನ್ನು ಉಳಿಸಿಕೊಂಡು ಬಾಕಿಯದನ್ನು ಬಿಡು ಎಂದರೆ ಬಹಳ ತೊಂದರೆ ಬರು ತ್ತದೆ, ದೇಶ ಬಡತನಕ್ಕೆ ಸಿಕ್ಕುತ್ತದೆ, ಮತ್ತು ಬಹಳ ಅನ್ಯಾಯವಾಗುತ್ತದೆಂದು ಕಾಣುತ್ತದೆ. ಆದುದ ರಿಂದ ಸೀಲಿಂಗ್ ಲಿಮಿಟ್ ಎಲ್ಲ sectorಗಳಲ್ಲಿಯೂ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಜತ್ತಿಸಮಿತಿಯ ವರದಿಯಲ್ಲಿ ಪ್ಲಾಂಟೇಷನ್‌ಗಳಿಗೆ ವಿನಾಯಿತಿ ಕೊಡಬೇಕು ಎಂದು ಸೂಚನೆ ಮಾಡಿದ್ದಾರೆ ನಮ್ಮ ಕಡೆ ಅಡಿಕೆ ಬೆಳೆಯುತ್ತಾರೆ. ಇದು ಬಹಳ ಕಡಮೆ ಪ್ರದೇಶದಲ್ಲಿ ಬೆಳೆಯುತ್ತಿದೆ. ಅಡಿಕೆ ಬೆಳೆಯು ತಕ್ಕ ಒಟ್ಟು ಪ್ರದೇಶವನ್ನು ಲೆಕ್ಕ ಹಾಕಿದರೆ ಸುಮಾರು 20 ಎಕರೆ ಜಮೀನು ಸಿಕ್ಕಿದರೆ ಹೆಚ್ಚು ಎಂದು ಕಾಣು ತ್ತದೆ. ಅಡಿಕೆಯನ್ನು ಎಲ್ಲ ಕಡೆಗಳಲ್ಲಿಯೂ ಬೆಳೆ ಯುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ತೆಂಗಿನಕಾಯಿ, ಕಾಫಿ ಮುಂತಾದುವನ್ನೂ ಎಲ್ಲ ಕಡೆಯೂ ಬೆಳೆಯು ವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಅಡಿಕೆ, ಕಾಫಿ, ಟೀ, ತೆಂಗು ಮೊದಲಾದ ಬೆಳೆಗಳನ್ನು ಬೆಳೆಯುವ ಜಮೀನಿಗೆ ವಿನಾಯಿತಿ ಕೊಡಬೇಕು, ಸೀಲಿಂಗ್ ಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ.

ಧರ್ಮ ಸಂಸ್ಥೆಗಳಿಗೆ ಜಮೀನು ಬಿಡುವ ವಿಷಯದಲ್ಲಿ ಹೇಗಿರಬೇಕು ಎಂದು ನನ್ನ ಸ್ನೇಹಿತರು ಕೆಲವರು ಕೇಳುತ್ತಾರೆ. ಅದಕ್ಕೆ ಹೇಳುತ್ತೇನೆ. ನಮ್ಮಲ್ಲಿ ಧರ್ಮ ಸಂಸ್ಥೆಗಳೂ ಮಠಗಳೂ ಇವೆ. ಅವು ಚೆನ್ನಾಗಿ ನಡೆದುಕೊಂಡು ಬರುತ್ತಿವೆ. ಅಂಥ ಸಂಸ್ಥೆಗಳಿಂದ ಜಮೀನನ್ನು ತೆಗೆದುಕೊಂಡರೆ ಆ ಸಂಸ್ಥೆಗಳಿಗೆ ಸರಿ ಯಾದ ಉತ್ಪತ್ತಿ ಬರುವ ರೀತಿಯಲ್ಲಿ ಅವುಗಳಿಗೆ ತೊಂದರೆಯಾಗದ ರೀತಿಯಲ್ಲಿ ಏರ್ಪಾಡು ಮಾಡ ಬೇಕು. ಇಲ್ಲದೆ ಇದ್ದರೆ ಅವು ಸರಿಯಾಗಿ ನಡೆಯ ಲಾರವು. ಧರ್ಮಸಂಸ್ಥೆಗಳು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸುವಂಥ ವ್ಯವಸ್ಥೆ ಮಾಡಬೇಕು ಎಂದು ಹೇಳಿ. ಮಾನ್ಯ ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

6 P.M.

ಶ್ರೀ ಬಸನ್ನಗೌಡ (ಲಿಂಗಸುಗೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀಮಾನ್ ಮರಿಯಪ್ಪ ನವರು ನಮ್ಮ ಮುಂದೆ ಇಟ್ಟಿರುವ ಆಯವ್ಯಯ ಪಟ್ಟಿಯು ಇವೊತ್ತಿನ ದಿವಸ ಚರ್ಚೆಯಲ್ಲಿದೆ. ಅದನ್ನು ನಾನು ಸ್ವಾಗತಿಸುತ್ತೇನೆ.

ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಸಂಸ್ಥಾನ ಬಹಳ ದೊಡ್ಡದಾಗಿದೆ. ಅನೇಕ ಪ್ರದೇಶಗಳು ಒಂದು ಗೂಡಿ ಕರ್ಣಾಟಕ ರಾಜ್ಯವಾಗಿದೆ. ಆದ್ದರಿಂದ ಮಹತ್ವವಾದ ಸಮಸ್ಯೆಗಳು ನಮ್ಮ ಮುಂದಿವೆ. ಅವು ಗಳನ್ನು ಬಗೆಹರಿಸುವುದು ನಮ್ಮ ಕರ್ತವ್ಯ, ಎಷ್ಟೋ ಅಭಿವೃದ್ಧಿ ಕಾರ್ಯಗಳು ಆಗಿವೆ. ಆಹಾರ ಸಮಸ್ಯೆ ಬಂದಿದೆ. ಖನಿಜ ಸಂಪತ್ತು ಇದೆ; ಅರಣ್ಯಸಂಪತ್ತು ಇದೆ; ಇವುಗಳನ್ನು ಬೆಳೆಸಬೇಕು.

ಈಗತಾನೆ ತಂದಿರುವ ಬಡ್ಜೆಟ್ಟಿನ ಕೆಲವು ಅಂಶ ಗಳನ್ನು ನೋಡಿದರೆ ನಿರಾಶೆಯಾಗುತ್ತದೆ. ಏಕೆಂದರೆ ಹೈದರಾಬಾದ್ ಭಾಗಕ್ಕೆ ಯಾವ ಹೊಸ ಯೋಜನೆ ಯನ್ನೂ ತೆಗೆದುಕೊಂಡಿಲ್ಲ. ಉದಾಹರಣೆಗೆ ಕೃಷ್ಣ ನದಿ ಮೇಲೆ ಬ್ರಿಡ್ಜ್ ಹಾಕಬೇಕೆಂದು ತೋರಿಸಿದ್ದಾರೆ. ಎಸ್ಟಿಮೇಟ್ ಮೂವತ್ತೈದು ಲಕ್ಷ ರೂಪಾಯಿ; ಪ್ರೊವೈಡ್ ಮಾಡಿರುವುದು ಐವತ್ತು ಸಾವಿರ ಎಲ್ಲಿ ಬ್ರಿಡ್ಜ್ ಆಗಬೇಕೆನ್ನುವುದು ನಿರ್ಧಾರವಾಗಿಲ್ಲ. ಏಕೆಂದರೆ "Or" ಎಂದು ಬರೆದಿದ್ದಾರೆ. ಇನ್ನೂ ಈ ವಿಚಾರದಲ್ಲಿ ಒಂದು ನಿರ್ದಿಷ್ಟಕ್ಕೆ ಬಂದಿಲ್ಲವೆಂದರೆ ತಪ್ಪಾಗುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಶಾಖೆಯ ಮಂತ್ರಿಗಳು).—ಮೂವತ್ತೈದು ಲಕ್ಷ ರೂಪಾಯಿ ಒಂದೇವರ್ಷ ಖರ್ಚುಮಾಡುವುದಕ್ಕಾಗು ವುದಿಲ್ಲ. ಟೆಕ್ನಿಕಲ್ ಕಾರಣದಿಂದ ಐವತ್ತು ಸಾವಿರ ರೂಪಾಯಿ ಖರ್ಚು ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ಈ ವಿಷಯದಲ್ಲಿ ಸ್ವಲ್ಪ ಭಿನ್ನ ಅಭಿಪ್ರಾಯವಿದೆ ಸ್ಥಳದಿಂದಲೂ ಅಭಿಪ್ರಾಯ ಬಂದಿದೆ; ತಜ್ಞರಿಂದಲೂ ಅಭಿಪ್ರಾಯ ಬಂದಿದೆ. ಇನ್ನೂ ಯೋಜನೆಯನ್ನು finalise ಮಾಡಿಲ್ಲ. ಅಲ್ಲಿ ಸನ್ನಿವೇಶ ನನಗೆ ಸ್ವಲ್ಪ ಮಟ್ಟಿಗೆ ತಿಳಿದಿದೆ. ಇದನ್ನು ಇಂಜಿನಿಯರು ಗಳಿಗೆ ಬಿಡುವುದು ಒಳ್ಳೆಯದು, ಅವರು ಟೆಕ್ನಿಕಲ್ ಅಂಶಗಳಿಂದ ಕನ್ಸಿಡರ್ ಮಾಡಿ ತೀರ್ಮಾನ ಮಾಡ ಬೇಕು.

ಶ್ರೀ ಬಸನ್ನಗೌಡ.—ಇದಕ್ಕಿಂತ ಮೊದಲು ಹೈದರಾಬಾದ್ ಸರ್ಕಾರದವರು ಸರ್ವೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ದೇವದುರ್ಗ ರಸ್ತೆ ಇರುವುದು ಬ್ಲಾಕ್‌ಸಾಯಿಲಿನಲ್ಲಿ. ಕಾರಣ ಖರ್ಚು ಹೆಚ್ಚು ಬರಬಹುದು. ಅದಕ್ಕಾಗಿ ಸುರಪುರ, ಲಿಂಗಸೂರ ರೋಡಿನ ಮೇಲೆ ಸೇತುವೆ ಕಟ್ಟುವುದರಿಂದ ಖರ್ಚು ಕಡಿಮೆ ಬರುವುದು. ಗಂಗಾವತಿ ರೋಡ್‌ಗೆ ಬ್ರಿಡ್ಜ್ ಕಟ್ಟುವುದಕ್ಕೆ ಆರು ಲಕ್ಷ ರೂಪಾಯಿ ಪ್ರೊವೈಡ್ ಮಾಡಿದೆ. ಅದನ್ನು ಆದಷ್ಟು ತೀವ್ರವಾಗಿ ಮಂಜೂರು ಕೊಟ್ಟು ಕೆಲಸ ಮಾಡಿಸಬೇಕು. ಮಳೆಗಾಲದಲ್ಲಿ ಬಹಳ ತ್ರಾಸಾಗುತ್ತದೆ. ಟ್ರಾಫಿಕ್ ನಿಂತುಹೋಗುತ್ತದೆ. ಹೋದವರ್ಷವೂ ಇದೇ ವಿಷಯವಾಗಿ ಸೂಚನೆ ಕೊಟ್ಟಿದ್ದೆ.

ಹುನಗುಂದದಿಂದ ಮುದಗಲ್ ರೋಡಿನಲ್ಲಿ ಮಾರ್ಕೆಟ್ಟು ಸೇರುವುದಕ್ಕೂ ದೊಡ್ಡ ನಾಲೆಗಳಿವೆ. ನಮ್ಮ ಅಧ್ಯಕ್ಷರಿಗೆ ಅನುಭವವಿದೆ. ಬಹಳ ದೊಡ್ಡ ನಾಲೆ. ಮೂರು ನಾಲ್ಕು ತಿಂಗಳು ಬಸ್ಸುಗಳು ಬಂದ್ ಆಗುತ್ತವೆ. ಇದನ್ನು ಕೂಡ ಈ ವರ್ಷದ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿದ್ದರೆ ಬಹಳ ಚೆಂದಾಗಿದ್ದಿತು. ಶಕ್ಯತೆ ಇದ್ದರೆ ಅದನ್ನೂ ಮಾಡಬೇಕು.

ಹೊಸ ರಸ್ತೆಗಳನ್ನು ತೆಗೆದುಕೊಂಡಿಲ್ಲ. ನಾವು ಎರಡು ರಸ್ತೆ ಸಲುವಾಗಿ ಅರಿಕೆ ಮಾಡಿಕೊಂಡಿದ್ದೆವು. ಒಂದು ಮುದಗಲ್ಲಿಂದ ಮಸ್ಕಿ ಗ್ರಾಮದವರೆಗೆ 14 ಮೈಲಿ, 12 ಮೈಲಿ ಲಿಂಗಸುಗೂರಿನಿಂದ ಚಿತ್ತಾಪುರ ಗ್ರಾಮದವರೆಗೆ ಮಾಡಿ ಕೊಟ್ಟರೆ ವ್ಯಾಪಾರಕ್ಕೆ ಅನುಕೂಲವಾಗಿ, ಲಿಂಗಸುಗೂರು ಮತ್ತು ಚಿತ್ತಾಪುರದ ಜನಗಳಿಗೆ ಅನುಕೂಲವಾಗುತ್ತದೆ.

ಇನ್ನೊಂದು ಸೂಚನೆ. ನಮ್ಮಲ್ಲಿ ಲಿಂಗಾಪುರ ತಾಲ್ಲೂಕಿನಲ್ಲಿ ಒಂದು ಬಂಗಲೆ ಇದೆ. ಅದು ಮಾರಲದಿನ್ನಿ ಗ್ರಾಮದಲ್ಲಿದೆ, ಅದನ್ನು ಕಾಯಲಿಕ್ಕೆ ಇಬ್ಬರನ್ನು ಬಿಟ್ಟಿದ್ದಾರೆ. ಅವರುಗಳಿಗೆ 40 ರೂಪಾಯಿ ಸಂಬಳ ಕೊಡುತ್ತಾರೆ. ಆ ಬಂಗಲೆ P.W.D.ಗೆ ಸೇರಿದೆ. ಅದನ್ನು ಹರಾಜು ಮಾಡಿದರೆ ಸರ್ಕಾರಕ್ಕೆ ತಿಂಗಳಿಗೆ 80 ರೂಪಾಯಿ ಸಂಬಳ ಕೊಡುತ್ತಿರುವುದು ಉಳಿತಾಯವಾಗುತ್ತದೆ. ಅಂತಹ ಇನ್ನೊಂದು ಬಂಗಲೆ ಗಲಗ ಗ್ರಾಮ ತಾಲ್ಲೂಕು ದೇವದುರ್ಗದಲ್ಲಿದೆ. ಅದನ್ನು ಕಾಯಲಿಕ್ಕೆ ಅಲ್ಲಿಯೂ ಕೂಡ ಇಬ್ಬರು ಚಪ್ರಾಸಿಗಳನ್ನು ಬಿಟ್ಟಿದ್ದಾರೆ. ಆ ಬಂಗಲೆಯನ್ನೂ ಮಾರಿಬಿಡಬಹುದು.

ಇದಾದ ನಂತರ ಅರಣ್ಯ ಖಾತೆ ಮಂತ್ರಿಗಳ ಮತ್ತು ಮುಖ್ಯ ಮಂತ್ರಿಗಳ ಗಮನ ಸೆಳೆಯಬೇಕಾಗಿದೆ. ಅರಣ್ಯ ಸಂಪತ್ತು ದೇಶಕ್ಕೆ ಬಹಳ ಮಹತ್ವದ್ದು. ನಮ್ಮ ಭಾಗದ ಅರಣ್ಯಕ್ಕೂ, ಈ ಕಡೆ ಅರಣ್ಯಕ್ಕೂ ಬಹಳ ವ್ಯತ್ಯಾಸವಿದೆ. ಅದು ಗುಡ್ಡಗಾಡು ಪ್ರದೇಶ. ಒಳ್ಳೆಯ ಕಟ್ಟಿಗೆ ಬೆಳೆಯುವುದಿಲ್ಲ. ಒಳ್ಳೆಯ ಕಟ್ಟಿಗೆ ಬೆಳೆಯಲಿಕ್ಕೆ ಹೈದರಾಬಾದ್ ಸರ್ಕಾರದವರು ಬೇಕಾದಷ್ಟು ರುಪಾಯಿ ಕೊಟ್ಟಿದ್ದಾರೆ. ನೀರು ಕಟ್ಟಿದರೂ ನೆಲ ತಂಪಾಗಿಲ್ಲ. ಸಸಿ ನೆಟ್ಟರೂ ಏನೂ ಉಪಯೋಗವಾಗಿಲ್ಲ. ಈಗ ಇನ್ನೊಂದು ಪರಿಸ್ಥಿತಿ ಏನಾಗಿದೆಯೆಂದರೆ ಎಷ್ಟೋ ಜಮೀನುಗಳಲ್ಲಿ ಐದಾರು ವರ್ಷಗಳಿಂದ ರೈತರು ಬಿತ್ತನೆ ಮಾಡಿ, ಬೇಸಾಯ ಮಾಡಿಕೊಂಡು ಬಂದಿದ್ದಾರೆ. ಹಣ ಖರ್ಚು ಮಾಡಿ ಅವರು ಭೂಮಿ ಮಾಡಿದ್ದಾರೆ. ರೆವಿನ್ಯು ಇಲಾಖೆಯವರು ಅವರನ್ನು ಆ ಜಮೀನುಗಳಿಂದ ತೆಗೆಯಲಿಕ್ಕೆ ಹಚ್ಚಿದ್ದಾರೆ. ಈ ಕಾರ್ಯಕ್ರಮವನ್ನು ನೋಡಿದರೆ ಕಣ್ಣೀರು ಬರಲಿಕ್ಕೆ ಹತ್ತಿದೆ. ಆರೈತರಿಗೆ ಬೇರೆ ಜಮೀನು ಇಲ್ಲ ಎಂದು ಮನವಿ ಕಳುಹಿಸಿ ಕೊಟ್ಟಿದೆ. ಇದುವರೆಗೂ ಅದಕ್ಕೆ ಉತ್ತರ ಬಂದಿಲ್ಲ. ಬಿತ್ತನೆ ಕಾಲ ಸಮೀಪಕ್ಕೆ ಬಂದಿದೆ. ಸರ್ಕಾರದವರು ಬೇಗ ತನಿಖೆ ನಡೆಸಿದರೆ ಜನರಿಗೆ ತೃಪ್ತಿಯಾಗುತ್ತದೆ. ಆ ಜಮೀನುಗಳಲ್ಲಿ ಜಿರಾಯತ್ ಕೆಲಸ ಸಾಕಷ್ಟು ನಡೆದಿದೆ. ನಮ್ಮದು ಬರಗಾಲ ದೇಶ. ನಮ್ಮ ಕಡೆ ಮೂರು ವರ್ಷಕ್ಕೊಮ್ಮೆ ಬರಗಾಲವಿರುತ್ತದೆ. ಅಲ್ಲಿ ಬಾವಿ ತೋಡಿಸುವ ಅವಶ್ಯತೆ ಇದೆ. ಆದರೆ ಒಂದು ಬಾವಿ ಪ್ರಯುಕ್ತವೂ ಹಣ ಸಂದಿಲ್ಲ.

ನಮ್ಮಲ್ಲಿ ಭೂಮಿ ಬಹಳ ವಿಸ್ತಾರವಾಗಿದೆ. ಎರಡು ವರ್ಷಗಳಿಂದ ಟ್ರ್ಯಾಕ್ಟರುಗಳ ಅಭಾವದ ದೆಶೆಯಿಂದ ರೈತರಿಗೆ ಕಷ್ಟವಾಗಿದೆ. ಟ್ರಾಕ್ಟರುಗಳನ್ನು ಕ್ಯಾಷ್ ಕೊಟ್ಟವರಿಗೆ ಕೊಡುತ್ತೇವೆಂದರೆ, ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಶ್ರೀಮಂತರಿಗೆ ಮಾತ್ರ ಸಾಧ್ಯ. ಈ ನೀತಿಯಿಂದ ಬಡವರಿಗೆ ಏನೂ ಸಹಾಯವಾಗಿಲ್ಲ. ತಕಾವಿ ಸಾಲದ ರೂಪವಾಗಿ ಟ್ರಾಕ್ಟರುಗಳನ್ನು ಒದಗಿಸಿ, ಮೂರನೆಯ ವರ್ಷದಿಂದ ಅದರ ಮೊಬಲಗನ್ನು ವಸೂಲು ಮಾಡಿದರೆ, ಬಡವರಿಗೆ ಸೌಲಭ್ಯವಾಗುತ್ತದೆ. ಆದಷ್ಟು ಬೇಗ ಹೀಗೆ ಮಾಡಿದರೆ ಬೇಸಾಯಗಾರರಿಗೆ ಅನುಕೂಲವಾಗುತ್ತದೆ. ಟ್ರಾಕ್ಟರುಗಳು ಬಂದು ಬಿಟ್ಟರೆ ಕೆಲಸ ಬಹಳ ಬೇಗ ಆಗುತ್ತದೆ. ಗುಡ್ಡಗಾಡು ಪ್ರದೇಶಗಳಲ್ಲಿ ಟ್ರಾಕ್ಟರುಗಳು ನಡೆಯುವುದಿಲ್ಲ. ಆದ್ದರಿಂದ ಆಕಡೆಗೋಸ್ಕರ ಕಿರ್ಲೋಸ್ಕರ್ ಕಂಪೆನಿಯಲ್ಲಿ ತಯಾರಾದ ಕಬ್ಬಿಣ ಸಲಕರಣೆಗಳನ್ನು ಕೊಟ್ಟುಬಿಟ್ಟರೆ ಅನುಕೂಲವಾಗುತ್ತದೆ.

ಹಿಂದಿನ ಅನುಭವದಿಂದ ಈ ಬೀಜ ಒದಗಿಸಿದ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕಾಗಿದೆ. ಬೀಜ ಸಂಗ್ರಹಣೆಯನ್ನು ಕಣ ಮಾಡುವ ಕಾಲದಲ್ಲಿ ಮಾಡುತ್ತಾರೆ. ಆದರೆ ಆದನ್ನು ಸಕಾಲದಲ್ಲಿ ಡಿಸ್ಟ್ರಿಬ್ಯೂಟ್ ಮಾಡದಿರುವುದರಿಂದ ಅದರ ಉದ್ದೇಶ ನಿಷ್ಫಲವಾಗುತ್ತಿದೆ. ಬೀಜ ವೇಳೆಗೆ ಸರಿಯಾಗಿ ರೈತನನ್ನು ಮುಟ್ಟುವುದಿಲ್ಲ. ಮಳೆ ಬರುವುದಕ್ಕೆ ಮುಂಚೆ ಆದಷ್ಟು ಬೇಗ ಬೀಜ ಕೊಟ್ಟುಬಿಟ್ಟರೆ ಬಿತ್ತನೆಗೆ ಸಾಧ್ಯ.

ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ತಹಸೀಲುದಾರರಿಗೆ ದರಖಾಸ್ತು ಕೊಟ್ಟರೆ ಅದು ಏನಾಗಿದೆ ಎನ್ನುವುದೇ ಗೊತ್ತಾಗುವುದಿಲ್ಲ. ಏನು ಕೆಲಸವಾಗಬೇಕಾದರೂ ವಕೀಲರನ್ನು ಇಟ್ಟು ಕೆಲಸ ಮಾಡಿಸಕೊಳ್ಳಬೇಕಾಗಿದೆ. ಬಡವರಿಗೆ ಅದು ಬಹಳ ಕಷ್ಟವಾಗಿ ಹೋಗಿದೆ. ಸರ್ಕಾರದವರಿಗೆ ಈ ತರಹ ಕಷ್ಟ ರೈತರಿಗೆ ಆಗುವ ಹಾಗೆ ಉಪಾಯಗಳನ್ನು ಹುಡುಕಬೇಕು. ದರಖಾಸ್ತು ಕೊಟ್ಟರೆ ಅದಕ್ಕೆ ರಶೀತಿ ಕೊಡುವ ಏರ್ಪಾಡನ್ನು ಮಾಡಬೇಕು. ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ತಹಸೀಲ್‌ದಾರರು ಯಾವ ರೀತಿಯಿಂದಲೂ ಸಹಾಯ ಮಾಡುವುದಿಲ್ಲ. ಗ್ರಾಮದಿಂದ ಗ್ರಾಮಕ್ಕೆ ಓಡಾಡುತ್ತಾರೆ. ಆದರೆ ಗ್ರಾಮದ ಒಳಗೆ, ಹಳ್ಳಿಗಳೊಳಗೆ ಹೋಗುವುದೇ ಇಲ್ಲ. ಅವರಿಗೆ ಏನು ತೊಂದರೆ ಇದ್ದರೂ ಕೂಡ ನೋಡುವುದೇ ಇಲ್ಲ. ಅದಕ್ಕೇ ಅವರಿಗೆ ಸರಿಯಾದ ಇನ್‌ಸ್ಟ್ರಕ್ಷನ್ ಕೊಡಬೇಕು. ಸುಮ್ಮನೆ ಹೋಗಿ ಬಂದೆ ಎಂದು ಹೇಳಿ ಟಿ. ಎ. ತೆಗೆದುಕೊಂಡುಬಿಡುತ್ತಾರೆ. ಹಳ್ಳಿಗಳಲ್ಲಿ ಮನೆ ಕಟ್ಟುವ ಕೆಲಸ ಮಾಡಬೇಕಾಗಿದೆ. ಬಹಳ ಕಾಲದಿಂದ ಸರ್ಕಾರದವರಿಗೆ ಅ ವಿಷಯ ತಿಳಿಸಿದ್ದಾಗ್ಯೂ ಇನ್ನೂ ಪರಿಸ್ಥಿತಿ ಸುಧಾರಿಸಿಲ್ಲ. ಹಿಂದೆ ಒಂದು ಯೋಜನೆ ಮಾಡಿದ್ದರು. ಪ್ರತಿಯೊಂದು ಗ್ರಾಮದಲ್ಲೂ ಗ್ರಾಮ ಬಡಾವಣೆ ಸಲುವಾಗಿ ಇಷ್ಟಿಷ್ಟು ಜಾಗ ಬಿಡಬೇಕೆಂದು ತಿಳಿಸಿದ್ದರು. ಅದರಿಂದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲವಾಗಿತ್ತು. ಅದೇ ರೀತಿ ಬಾವಿಗಳನ್ನು ತೆಗೆಸುವುದೂ

ಸಹ ಬಹಳ ಮುಖ್ಯವಾದ ಕೆಲಸವಾಗಿದೆ. ಅದನ್ನು ಮಾಡದಿದ್ದರೆ ಹಳ್ಳಿಯಲ್ಲಿರತಕ್ಕ ಜನರಿಗೆ ನೀರಿನ ಸೌಕರ್ಯವಿಲ್ಲದೇ ಬಹಳ ಕಷ್ಟವಾಗುತ್ತದೆ. ಬಡವರಿಗೆ ಯಾವ ಸೌಕರ್ಯವೂ ಸಿಕ್ಕುತ್ತಿಲ್ಲ ಎಂದು ಅವರು ಬಹಳವಾಗಿ ಬೇಜಾರುಪಡುತ್ತಾರೆ. ನಮ್ಮ ಭಾಗದಲ್ಲಿ ಒಂದು ಕಡೆ ಇಪ್ಪತ್ತು ವರ್ಷದಿಂದ ಕಾಲೋನಿ ಏರ್ಪಡುವ ಕೆಲಸ ನಡೆದಿದೆ. ಈ ರೀತಿ ಆದರೆ ಜನರಿಗೆ ಅನುಕೂಲವಾಗುವುದಿಲ್ಲ.

ಪೋಲೀಸ್ ಇಲಾಖೆಯ ವಿಷಯದಲ್ಲಿ ನಮ್ಮ ಸ್ನೇಹಿತರು ಬಹಳ ಕಟುತರವಾದ ಟೀಕೆ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಪೋಲೀಸ್‌ನವರು ಮಾಡಿದ ಅಪಚಾರ ಏನೆಂಬುದನ್ನು ತಿಳಿಸಿದ್ದಾರೆ. ಅವರು ಹೇಳಿರುವಂತೆ ಒಬ್ಬ ಪೋಲೀಸ್ ಕಾನ್ಸ್ಟೇಬಲ್ ಏನೋ ಆ ರೀತಿ ಮಾಡಿದ. ಅವನನ್ನು ಅರೆಸ್ಟ್ ಮಾಡಿದ್ದಾರೆ. ಪೋಲೀಸ್‌ನವರು ಬಹಳ ಕೆಟ್ಟ ಕೆಲಸ ಮಾಡುತ್ತಾರೆ ಎನ್ನುವುದು ತಪ್ಪು. ಪೋಲೀಸ್ ಸ್ಟೇಷನ ಉಸ್ತುವಾರಿಗೆ ಸಬ್ ಇನ್ಸ್‌ಪೆಕ್ಟರು ಇರುತ್ತಾರೆ. ಸಿ.ಐ.ಡಿ. ಮತ್ತು ಆಂಟಿಕರ್‌ಪ್ಷನ್ ಡಿಪಾರ್ಟ್‌ಮೆಂಟಿನವರು ಬಂದು ಅವರನ್ನು ಅಸಿಸ್ಟ್ ಮಾಡುತ್ತಾರೆ. ಪೋಲೀಸ್‌ನವರೂ ಏನೂ ಕೆಲಸ ಮಾಡದೆ ಹೋದಪಕ್ಷದಲ್ಲಿ ಈ ಇಲಾಖೆ ಏಕೆ ಇರಬೇಕು ಎನ್ನುವ ಪ್ರಶ್ನೆ ಬರುತ್ತದೆ. ಆದ್ದರಿಂದ ಈ ಇಲಾಖೆಯ ಮಟ್ಟ ಯಾವ ಮಟ್ಟಕ್ಕೆ ಇರಬೇಕೋ ಆ ಮಟ್ಟಕ್ಕೆ ತರಬೇಕು ಎಂದು ಹೇಳುತ್ತೇನೆ. ನಮ್ಮ ಭಾಗದ ಅನುಭವದಿಂದ ಹೇಳುವುದಾದರೆ ಅನೇಕ ಜನ ನಮ್ಮಲ್ಲಿ ವಿದ್ಯಾವಂತರಾದ ಪೋಲೀಸ್ ಕಾನ್ಸ್ಟೇಬಲ್‌ಗಳು ಇಲ್ಲ. ಶಿಕ್ಷಣ ಹೊಂದದೆ ಭರ್ತಿ ಆಗಿದ್ದಾರೆ. ಅಂತಹ ಜನರಿಗೆ ಟ್ರೈನಿಂಗ್ ಕೊಡಬೇಕು ಮತ್ತು ಒಂದು ವಿದ್ಯಾರ್ಹತೆ ಇರಬೇಕು. ವಿದ್ಯಾರ್ಹತೆ ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ ಆದ್ದರಿಂದ ಇವತ್ತಲ್ಲ ನಾಳೆ ಒಂದು ಸ್ಟ್ಯಾಂಡರ್ಡ್‌ಗೆ ಬರಬಹುದು ಎಂಬ ನಂಬಿಕೆ ಇದೆ. ಈಗ ಈ ಸಭೆಯಲ್ಲಿ ಮಾಡಿರುವ ಟೀಕೆಯಿಂದ ಸಾರ್ವಜನಿಕರಿಗೆ ಬಹಳ ಕೆಡಕುಂಟಾಗುತ್ತದೆ. ಪೋಲೀಸ್‌ನವರ ಅವಶ್ಯಕತೆ ನಮ್ಮ ದೇಶದಲ್ಲಿ ಬಹಳವಾಗಿದೆ. ಆದ್ದರಿಂದ ಅವರಿಗೆ ಗೌರವ ಕೊಡಬೇಕು. ಕೊಟ್ಟಪಕ್ಷದಲ್ಲಿ ನಮ್ಮ ದೇಶಕ್ಕೆ ಹಿತವಾಗುತ್ತದೆ.

ಮೂರನೆಯದು ಎಂದರೆ ಅಬ್ಕಾರಿ ವಿಷಯ. ಪಾನನಿರೋಧ ಒಂದು ಭಾಗದಲ್ಲಿ ಮಾಡಿ, ಇನ್ನೊಂದು ಭಾಗದಲ್ಲಿ ಮಾಡದಿದ್ದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಎಷ್ಟೋ ಜನ ನಮ್ಮ ತಾಲ್ಲೂಕಿನಲ್ಲಿ ಮನೆಯಲ್ಲೇ ಭಟ್ಟಿ ಇಳಿಸುತ್ತಾರೆ. ಅದನ್ನು ಮಾರುತ್ತಾರೆ. ಅದರ ಒಂದು ದೊಡ್ಡ ವ್ಯಾಪಾರ ನಡೆಯುವುದರಿಂದ ಅವರು ದೊಡ್ಡ ವ್ಯಾಪಾರಸ್ಥರಾಗಿದ್ದಾರೆ. ಆದ್ದರಿಂದ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ ಪಾನನಿರೋಧವನ್ನು ಪೂರಾ ತೆಗೆದು ಬಿಡಬೇಕು. ಇಲ್ಲದೇ ಹೋದರೆ ಎಲ್ಲ ಕಡೆಯಲ್ಲೂ ಜಾರಿಗೆ ತರಬೇಕು. ಆರೀತಿ ಮಾಡಿ ದೇಶಕ್ಕೆ ಒಂದು ಉಪಕಾರ ಮಾಡಬೇಕು.

ಹುಬ್ಬಳ್ಳಿ ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವಾಗ ಶೇಕಡ 50 ರ ಮಾರ್ಕ್ಸ್ ತೆಗೆದುಕೊಂಡವರಿಗೆ ಸೀಟುಕೊಟ್ಟು ಇನ್ನೂ ಹೆಚ್ಚು ಮಾರ್ಕ್ಸ್ ತೆಗೆದುಕೊಂಡಿದ್ದವರಿಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇದು ಬಹಳ ವಿಷಾದಕರವಾದ ಮಾತು. ಮುಂದಿನ ವರ್ಷವಾದರೂ ಕೂಡ ಹೆಚ್ಚು ಮಾರ್ಕ್ಸ್ ತೆಗೆದುಕೊಂಡಿರತಕ್ಕ ಡಿಸರ್ವಿಂಗ್ ಕ್ಯಾಂಡಿಡೇಟ್ಸ್‌ಗೆ ಸೌಕರ್ಯ ಒದಗಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ಭೂಸುಧಾರಣೆಯ ಸಂಬಂಧ ಬಹಳವಾಗಿ ಚರ್ಚೆ ನಡೆದಿದೆ. ಹೈದರಾಬಾದ್ ಟೆನೆನ್ಸಿ ಕಾಯಿದೆ ಈಗ ನಮ್ಮಲ್ಲಿ ಜಾರಿಯಲ್ಲಿದೆ. ನಮ್ಮ ಕಡೆ ಸೀಲಿಂಗ್ ಬೇಡ ಎಂದು ಹೇಳುವಂಥ ಪ್ರಸಂಗ ಇದೆ. ಆದ್ದರಿಂದ ಈಗ ನಮ್ಮಲ್ಲಿ ಯಾವ ಒಂದು ಟೆನೆನ್ಸಿ ಕಾಯಿದೆ ಇದೆ ಅದನ್ನೇ ಮುಂದುವರಿಸಿದರೆ ದೇಶಕ್ಕೆ ಒಂದು ದೊಡ್ಡ ಉಪಕಾರ ಮಾಡಿದಂತಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆಂಪಮ್ಮ (ಕೊಳ್ಳೇಗಾಲ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇಟ್ಟಿರುವ ಈ ಬಡ್ಜೆಟ್ಟನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ಮಳೆಯ ಆಶ್ರಯದ ಮೇಲೆ ಆಗಬೇಕಾಗಿರತಕ್ಕ ಫಸಲು ಕೆಲವು ತಾಲ್ಲೂಕುಗಳಿಗೆ ಅನ್ವಯಿಸುತ್ತದೆ. ಅಂತಹ ತಾಲ್ಲೂಕುಗಳಲ್ಲಿ ಇರುವಂತಹ ಕೆರೆಗಳ ಹೂಳನ್ನು ತೆಗೆಯಲು ಈ ಬಡ್ಜೆಟ್ಟಿನಲ್ಲಿ ಸೇರಿಸಿಕೊಳ್ಳಬೇಕೆಂದು ಕೋರುತ್ತೇನೆ.

ಸ್ವಾಮಿ, ಯಳಂದೂರು ತಾಲ್ಲೂಕಿನಲ್ಲಿ ಹದಿಮೂರು ಕೆರೆಗಳಿರುತ್ತವೆ. ಕೊಳ್ಳೇಗಾಲದ ತಾಲ್ಲೂಕಿನಲ್ಲಿ ಒಂಭತ್ತು ಕೆರೆಗಳಿರುತ್ತವೆ. ಈ ಎರಡು ತಾಲ್ಲೂಕಿನ ಕೆರೆಗಳು ಮಳೆಯ ನೀರಿನ ಆಶ್ರಯದಿಂದಲೇ ತುಂಬಿ ಕೆರೆಗಳ ಬೈಲಿನಲ್ಲಿರುವಂಥ ಜಮೀನುಗಳಿಗೆ ನೀರು ಒದಗಬೇಕಾಗುತ್ತದೆ. ಈ ಕೆರೆಗಳಿಗೆ ಮಳೆಯ ನೀರು ಮೂರು ನಾಲ್ಕು ಸಾರಿ ತುಂಬಿದರೆ ಮಾತ್ರ ಫಸಲುಗಳು ಸರಿಯಾಗಿ ಆಗುತ್ತದೆ. ಪ್ರತಿ ಒಂದೊಂದು ಕೆರೆಯೂ ಮೂರು ನಾಲ್ಕು ಅಡಿ ಹೂತಿರುತ್ತದೆ. ಹೆಚ್ಚಿಗೆ ನೀರು ಸೇರಿದರೆ ಕೆರೆಯು ಒಡೆದು ಹೋಗುತ್ತದೆ. ಕೆರೆಗಳು ಆಳವಿಲ್ಲದೆ ಮೈದಾನವಾಗಿರುವುದರಿಂದ ನೀರು ಜಾಸ್ತಿ ಸೇರಲು ಅವಕಾಶವಾಗುವುದಿಲ್ಲ. ಇದರ ಎಸ್ಟಿಮೇಟು ಅಂದಾಜನ್ನು ಎರಡನೆಯ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ನಾನು ಸಲಹೆ ಕೊಡುತ್ತೇನೆ. ಮತ್ತು ಕೆರೆಗಳ ಹೂಳು ತೆಗೆಯುವಾಗ ದೊಡ್ಡದೊಡ್ಡ ಕೆರೆಗಳಿಗೆ ಮದಗವನ್ನು ಮಾಡಿಸಬೇಕು. ಇದರಿಂದ ಬಹಳ ಅನುಕೂಲವಾಗುತ್ತದೆ. ಕೆರೆಯಲ್ಲಿ ನೀರು ಜಾಸ್ತಿ ಸೇರಿದರೆ ಕೆರೆಯು ಕೀಳದ ಹಾಗೆ ಮದಗವನ್ನು ತೆಗೆದರೆ ನೀರು ಹೋಗುತ್ತದೆ. ನೀರಿನ ಜೊತೆಯಲ್ಲಿ ಕೆರೆಯಲ್ಲಿ ಹೂತಿರುವಂಥ ಮಣ್ಣು ಸಹ ಹೋಗುತ್ತದೆ. ಕೆರೆಯು ಹೂಳಲು ಇದರಿಂದ ಅವಕಾಶವಾಗುವುದಿಲ್ಲ. ಮದಗವಿಲ್ಲದ ಕೆರೆಗಳು ಕಿತ್ತುಹೋದರೆ ಅದನ್ನು ಕಟ್ಟಿಸಲು ಸರ್ಕಾರಕ್ಕೆ ಎಂಬತ್ತು ಸಾವಿರ ರೂಪಾಯಿಗಳ ನಷ್ಟವು ಆಗುವುದಲ್ಲದೆ ರೈತರಿಗೂ ಸಹ ತೊಂದರೆಯಾಗುತ್ತದೆ. ಇನ್ನು ಕೊಳ್ಳೇಗಾಲ ತಾಲ್ಲೂಕಿನ ಆಸ್ಪತ್ರೆಗೆ ಮದ್ರಾಸ್ ಸರ್ಕಾರದವರು ಒಂದು ತಿಂಗಳಿಗೆ ನಾಲ್ಕು ಸಾವಿರ ರೂಪಾಯಿಗಳ ಔಷಧಿ ಸಾಮಾನುಗಳನ್ನು ಒದಗಿಸುತ್ತಿದ್ದರು. ನಮ್ಮ ತಾಲ್ಲೂಕು ಮೈಸೂರು ಸರ್ಕಾರಕ್ಕೆ ಸೇರಿದ ಮೇಲೆ ಅದರಲ್ಲಿ ಅರ್ಧ ಭಾಗದಷ್ಟು ಸಹ ಸಾಮಾನುಗಳು ಒದಗುತ್ತಿಲ್ಲ. ಹಳೆಯ ಮೈಸೂರಿಗೆ ಸೇರಿರುವಂಥ ಯಳಂದೂರು ತಾಲ್ಲೂಕಿನ ಆಸ್ಪತ್ರೆಯಲ್ಲಿಯೂ ಸಹ ಔಷಧಿ ಸಾಮಾನುಗಳು ಇರುವುದಿಲ್ಲ. ಅಲ್ಲಿಯ ಜನರು ಗಾಯಗಳ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋದರೆ, ಮನೆಯಿಂದ ಬ್ಯಾಂಡೇಜ್ ಬಟ್ಟೆಯನ್ನು ತಗೆದುಕೊಂಡು ಹೋಗಬೇಕಾಗುತ್ತದೆ. ಇದರಿಂದ ಜನರಿಗೆ ಬಹಳ ಬೇಜಾರು ಆಗಿದೆ. ಇಂಜಕ್ಷನ್ ಕೊಡಲು ಡಾಕ್ಟರ ಹತ್ತಿರ ಇಂಜಕ್ಷನ್ ಟ್ಯೂಬ್ ಇರುವುದಿಲ್ಲ. ಜನರೇ ತಂದು

(ಶ್ರೀಮತಿ ಕೆಂಪಮ್ಮ)

ಕೊಡಬೇಕಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಆ ತಾಲ್ಲೂಕಿನ ಬಡಜನರ ಸೌಕರ್ಯಕ್ಕಾಗಿ ಔಷಧಿ ಸಾಮಾನುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ, ಎಳಂದೂರ ತಾಲ್ಲೂಕು ಮಾಂಬಳ್ಳಿಯಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೈಸ್ಕೂಲು ಕಟ್ಟಡವನ್ನು ಕಟ್ಟಬೇಕೆಂದು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಹೆಣ್ಣು ಮಕ್ಕಳು ಐದಾರು ಮೈಲು ದೂರದಿಂದ ಬಂದು ಶಿಕ್ಷಣ ಪಡೆಯುವುದು ಕಷ್ಟವಾಗುತ್ತದೆ. ಹೈಸ್ಕೂಲು ಕಟ್ಟಡವಿಲ್ಲದ್ದರಿಂದ ವಿದ್ಯಾರ್ಥಿನಿಯರಿಗೆ ಬಹಳ ಕಷ್ಟವಾಗಿದೆ. ಆದುದರಿಂದ ಸರ್ಕಾರದವರು ಈ ವಿಚಾರವನ್ನು ತೀವ್ರ ಗಮನಕ್ಕೆ ತೆಗೆದುಕೊಂಡು ಆದಷ್ಟು ಜಾಗ್ರತೆ ಹೈಸ್ಕೂಲು ಕಟ್ಟಡ ಕಟ್ಟಿಸಿಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಎಸ್. ಪಟ್ಟಣ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮೇಲೆ ನನ್ನ ಅಭಿಪ್ರಾಯವನ್ನು ಸೂಚಿಸುವುದಕ್ಕೆ ನಾಲ್ಕು ಮಾತುಗಳನ್ನಾಡಬೇಕೆಂದಿದ್ದೇನೆ. ಈ ಬಜೆಟ್ ಎಸ್ಟಿಮೇಟು ಪ್ರಕಾರ ಏನೇನು ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು ಮತ್ತು ಇದರಲ್ಲಿ ಏನಾದರೂ ಹಣ ಅಪವ್ಯಯ ಆಗುತ್ತದೆಯೇ ಎಂಬುದನ್ನು ಆಲೋಚನೆ ಮಾಡಿ ನೋಡಬೇಕಾಗಿದೆ. ಒಂದು ನಾಲ್ಕಾಣೆ ಭಾಗದಷ್ಟು ಹಣ ಅಪವ್ಯಯವಾಗುತ್ತದೆಂದು ನನ್ನ ಅಭಿಪ್ರಾಯ. ಅದು ಹೇಗೆ ಎಂದರೆ, ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನಲ್ಲಿ ನೂರಕ್ಕೆ 50ರಷ್ಟು ಕೆಲಸ ಮಾತ್ರ ಮಾಡಲಾಗುತ್ತಿದೆ. ಉಳಿದ ಅರ್ಧದಷ್ಟು ಕೆಲಸಕ್ಕೆ ಖರ್ಚಾಗುವ ಹಣ ಅಪವ್ಯಯವಾಗುತ್ತದೆ. ಬೆಳಗಾಮ್ ಜಿಲ್ಲೆಯಲ್ಲಿ 10-11 ಕೂಲಿಗಾರರ ಸಂಘಗಳು ಇವೆ. ಆದರೆ ಅವುಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತಿಲ್ಲ. ಅವರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಅವರ ಮೇಲೆ ಅಪವಾದ ಹೊರಿಸುತ್ತಿದ್ದಾರೆ. ರಾಮದುರ್ಗ ತಾಲ್ಲೂಕಿನಲ್ಲಿಯೂ ಸಹ ಈ ಕೂಲಿಕಾರ ಸಂಘದವರಿಗೆ ಸರಿಯಾಗಿ ಕೆಲಸ ಕೊಡುತ್ತಿಲ್ಲ. ಕೆಲಸ ಕೊಟ್ಟರೂ ಅವರಿಗೆ ಸರಿಯಾಗಿ ಹಣ ಒದಗಿಸುತ್ತಿಲ್ಲ. ಹಣ ಒದಗಿಸದೇ ಇರುವುದರಿಂದ ಈ ಸಂಘಗಳು ನಿಶ್ಯಕ್ತವಾಗುತ್ತಾ ಇವೆ.

ಇನ್ನು ಹಳ್ಳಿಯ ಶಾನುಭೋಗರ ವಿಷಯ. ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಾರೆ ಎಂಬುದಕ್ಕೆ ರಿಕಾರ್ಡುಗಳಲ್ಲಿ ಹೆಸರು ಬರೆಯುವಾಗ ಶಾನುಭೋಗರಿಗೆ ದುಡ್ಡು ಕೊಟ್ಟುಬಿಟ್ಟರೆ ಯಾರ ಹೆಸರನ್ನಾದರೂ ಅವರು ಬರೆಯುತ್ತಾರೆ. ಈ ರೀತಿಯಾಗಿ ಯಾರದಾದರೂ ಹೆಸರನ್ನು ಬರೆಯಿಸುವ ಪ್ರಯತ್ನ ನಡೆದಿದೆ. ಇಂಥವುಗಳನ್ನೆಲ್ಲಾ ಮಂತ್ರಿಗಳಿಗೆ ತಿಳಿಸಬೇಕೆಂದರೆ, ಅವರು ಪ್ರವಾಸಕ್ಕೆ ಬಂದಾಗ್ಗೆ ತಾಲ್ಲೂಕು ಕಾಂಗ್ರೆಸ್ ಕಮಿಟಿಯ ಆಫೀಸಿಗೆ ಹೋಗಿ ಭೇಟಿ ಕೊಡುತ್ತಾರೆ. ನಮ್ಮಂಥ ಜನ ಪ್ರತಿನಿಧಿಗಳಿಗೆ ಅಲ್ಲಿ ಆಸ್ಪದವಿರುವುದಿಲ್ಲ. ಜನರ ಬೇಡಿಕೆಗಳು ಏನು ಇವೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದ್ದರೆ ಹಳ್ಳಿಗಳಿಗೆ ಬಂದು ಜನರ ಪ್ರತಿನಿಧಿಗಳನ್ನು ಭೇಟಿ ಮಾಡಬೇಕು. ಅಂದರೆ ಸಮಕ್ಷಮ ಭೇಟಿ ಮಾಡಿ ಎಲ್ಲವನ್ನೂ ತಿಳಿಸಲು ಆಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗವಾದ ಲಮಾಣಿ ಜನರಿಗೆ ಅದರಲ್ಲೂ ಲಮಾಣಿ ಹೆಣ್ಣುಮಕ್ಕಳನ್ನು ದನಗಳ ಹಾಗೆ ನಡೆಸಿಕೊಳ್ಳುತ್ತಾರೆ. ಮುಖ್ಯವಾಗಿ ಲಮಾಣಿ ಜನರು ಅಡವಿಯಿಂದ ಕಟ್ಟಿಗೆ ತಂದು ಮಾರಿ ಉಪಜೀವನ ಮಾಡುತ್ತಾರೆ. ಅವರಿಗೆ ಬಹಳ ಹಿಂಸೆ ಕೊಡುತ್ತಿರುವುದನ್ನು ತಪ್ಪಿಸಬೇಕು.

6-30. P.M.

ನಮ್ಮ ಕರ್ನಾಟಕದಲ್ಲಿ ಸೊಂಡೂರಿನಲ್ಲಿಯ ಮ್ಯಾಂಗನೀಸ್ ಅದುರು ಪ್ರಾಮುಖ್ಯವಾದ ಖನಿಜ ಸಂಪತ್ತು ಆಗಿದೆ. ಇದರ ಉಪಯೋಗ ಸರಿಯಾಗಿ ಆಗುತ್ತಿಲ್ಲ. ದೇಶದ ಸಂಪತ್ತು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಸೊಂಡೂರಿನ ಖನಿಜ ಸಂಪತ್ತು ಹಾಳಾಗುತ್ತಾ ಇವೆ. ಇದಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು. ಉಪ್ಪು, ಕಬ್ಬಿಣ, ಗೊಬ್ಬರ, ತಾಲ್ಲೂಕು ತಹಶಿಲ್ದಾರರ ಕಡೆಗೆ ಹಂಚಿಕೆಗಾಗಿ ಕೊಡುತ್ತಿದ್ದಾರೆ. ಹಂಚುವವರು ಮಿಸ್‌ಗೈಡಾಗಿ ಬೇಕಾದವರಿಗೆ ಕೊಡುತ್ತಿದಾರೆ. ಅವರು ಕೆಲವೇ ಜನರಿಗೆ ಕೊಡುತ್ತಿದ್ದಾರೆ. ಆದ್ದರಿಂದ ಸರಿಯಾದ ರೀತಿಯಲ್ಲಿ ಏರ್ಪಾಡು ಮಾಡಬೇಕು. ತಾಲ್ಲೂಕು ಸಮಿತಿಯವರು ವಿಚಾರಮಾಡಿ ತಿಳಿದು ಸರಿಯಾಗಿ ಹಂಚಲು ವ್ಯವಸ್ಥೆ ಮಾಡಬೇಕು. ಹಂಚಿಕೆ ಅಧಿಕಾರ ಯಾರಿಗೋ ಒಬ್ಬರಿಗೆ ಕೊಟ್ಟರೆ ಬ್ಲ್ಯಾಕ್ ವ್ಯಾಪಾರ ಮಾಡುತ್ತಾರೆ; ಅದೇ ಕೆಲವರಿಗೆ ಉದ್ಯೋಗವಾಗಿದೆ. ಇದರಿಂದ ಬೇಕಾದವರಿಗೆ ಸಿಕ್ಕುವುದಿಲ್ಲ.

ತುಂಗಭದ್ರ ಅಣೆಗೆ ಸಂಬಂಧಪಟ್ಟ ಹಾಗೆ ಕಾಲುವೆ ತೋಡಿಕೊಂಡು ಹೋಗಿದ್ದಾರೆ. ಆದರೆ ಅದರ ನೀರನ ಪಡೆಯುವ ಸುತ್ತಮುತ್ತಲಿರುವ ಜಮೀನುಗಳಿಗೆ ಗೊಬ್ಬರ ವಗ್ಯೆರೆ ತೆಗೆದುಕೊಂಡು ಹೋಗುವುದಕ್ಕೆ, ಗಾಡಿ ಹೋಗುವುದಕ್ಕೆ ಬರುವುದಕ್ಕೆ ರಸ್ತೆಯಿಲ್ಲದೆ ಅನಾನುಕೂಲವಾಗಿವೆ. ಆದ್ದರಿಂದ ಕಾಲುವೆ ಮಾಡುವಾಗ ಸರಿಯಾದ ಮಾರ್ಗಮಾಡಿ ಕಾಲುವೆ ವ್ಯವಸ್ಥೆ ಮಾಡಬೇಕು.

ಹರಿಜನರ ಉದ್ಧಾರ ಮತ್ತು ಅವರಿಗೆ ಕೊಡುವ ಸೌಲತ್ತಿನ ವಿಚಾರವೇನಿದೆ ಅದು ಕಾಗದದ ಮೇಲಿದೆಯೇ ಹೊರತು ಯಾವ ತಾಲ್ಲೂಕಿನಲ್ಲೂ ಹರಿಜನರ ಉದ್ಧಾರವಾಗಿದೆಯೆಂದು ಹೇಳುವುದು ಬಹಳ ಕಷ್ಟವಾಗಿದೆ. ಹರಿಜನರಿಗೆ ಸೌಲತ್ತು ಕೊಡುವ ವಿಚಾರದಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಅವರಿಗೆ ಮನೆ ಕಟ್ಟಲು ಹಣ ಕೊಟ್ಟಿದೆ. ಎಷ್ಟು ಕೊಟ್ಟಿದ್ದಾರೆಂದು ತಾಲ್ಲೂಕು ಆಫೀಸಿನಲ್ಲಿ ವಿಚಾರ ಮಾಡಿದರೆ ಒಂದು ತಾಲ್ಲೂಕಿಗೆ ಮೂರೂವರೆ ಸಾವಿರ ರೂಪಾಯಿ ಕೊಟ್ಟಿದ್ದಾರೆಂದು ಗೊತ್ತಾಯಿತು. ಆದರಲ್ಲಿ ಹರಿಜನರಲ್ಲಿ ಒಬ್ಬೊಬ್ಬರಿಗೆ ಎರಡು ಅಂಕಣ ಮನೆ ಕಟ್ಟಿಕೊಳ್ಳುವುದಕ್ಕೆ ರೊಕ್ಕ ಕೊಟ್ಟರೆ ಅನುಕೂಲವಾಗುತ್ತದೆ. ಆದರೆ ತಾಲ್ಲೂಕು ಆಫೀಸಿಗೆ 3,600 ರೂಪಾಯಿಗಳು ಬಂದರೆ 12 ಮಂದಿಗೆ ಹಂಚಬೇಕಾಕಾಗುತ್ತದೆ. ಆಗ ಒಬ್ಬೊಬ್ಬರಿಗೆ 300 ರೂಪಾಯಿಗಳಂತೆ ಸಹಾಯ ಮಾಡಬಹುದು. ಅದಕ್ಕಿಂತ ಹೆಚ್ಚಾಗಿ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕು ಆಫೀಸಿನಲ್ಲಿ ನಾನು ಆರ್ಡರನ್ನು ಓದಿ ನೋಡಿದ್ದೇನೆ. ಅಲ್ಲಿ 300 ರೂಪಾಯಿಗಳಿಗಿಂತ ಹೆಚ್ಚಾಗಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆ ಹಣವನ್ನೂ ಮೊದಲು ಕೊಡುವುದಿಲ್ಲ. ಗೋಡೆ ಕಟ್ಟಿ ಮೇಲು ಮುದ್ದೆ ಹಾಕುವಾಗ ಬಿದಿರು, ಕಟ್ಟಿಗೆ, ಹೆಂಚು ಒದಗಿಸುತ್ತೇವೆಂದು ಹೇಳುತ್ತಾರೆ. ಅದನ್ನೊದಗಿಸುವಾಗ ಮಳೆ

ಗಾಲ ಮುಗಿದು ಹೋಗುತ್ತದೋ ಏನೋ, ಯಾವಾಗ ಸಿಕ್ಕುತ್ತದೋ ಹೇಳುವುದಕ್ಕಾಗುವುದಿಲ್ಲ. ಕೊಡುವ ಹಣ ಸಕಾಲದಲ್ಲಿ ಕೊಟ್ಟರೆ ಬಾಕಿಯಾದ್ದನ್ನು ಒದಗಿಸಿಕೊಳ್ಳಬಹುದು. ಈಗ ಹರಿಜನರಲ್ಲಿ ಕೆಲವರಿಗೆ ಒಂದು ಅಂಕಣ ಮನೆ ಸಹ ಇಲ್ಲ.

ಅರಣ್ಯ ಭೂಮಿ ಗಿಡವಿಲ್ಲದಿರುವುದು ಬೇಕಾದಷ್ಟಿದೆ. ಹರಿಜನರು ಭೂಮಿಗಾಗಿ ಅಂಗಲಾಚಿ ಬೇಡುತ್ತಿದ್ದಾರೆ. ತಾಲ್ಲೂಕು ಆಫೀಸಿನವರು ಅದನ್ನು ಕೊಡುವ ವಿಚಾರದಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಮಂತ್ರಿಗಳಲ್ಲಿ ಕಳಕಳಿಯಿರಬಹುದು ; ಆದರೆ ನಿರ್ವಹಿಸುವ ಅಧಿಕಾರಿಗಳಲ್ಲಿ ಕಳಕಳಿಯಿಲ್ಲದಿದ್ದರೆ ಆರ್ಡರುಗಳನ್ನು ಸಕಾಲದಲ್ಲಿ ಜಾರಿಗೆ ತಂದು ಜನರಿಗೆ ಸಹಾಯ ಮಾಡುವುದಿಲ್ಲ. ತಾಲ್ಲೂಕು ಆಫೀಸಿಗೆ ಹೋದರೆ ಮಾಮಲೇದಾರರಿರುವುದಿಲ್ಲ. ಹೀಗಾಗಿ ಹರಿಜನರಿಗೆ ಮತ್ತು ಹಿಂದುಳಿದವರಿಗೆ ಭೂಮಿ ಸಿಕ್ಕುವುದು ಬಹಳ ಕಷ್ಟವಾಗಿದೆ.

ಇನ್ನು ಪೋಲೀಸ್ ಖಾತೆ ವಿಚಾರ, ಬಡ್ಜೆಟ್ ಪರಿಶೀಲಿಸುವ ಪರಿಸ್ಥಿತಿಯಲ್ಲಿ ನಾನಿಲ್ಲ. ಇದು ಕನ್ನಡ ಅಸೆಂಬ್ಲಿಯಿದೆ, ಕರ್ಣಾಟಕವಿದೆ, ಎಲ್ಲವೂ ಕನ್ನಡದಲ್ಲಿ ನಡೆಸಲು ಅನುಕೂಲವಿದೆ ಎಂದು ನನ್ನನ್ನು ಈ ಸಭೆಗೆ ಕಳುಹಿಸಿದರು. ಇಲ್ಲಿ ನೋಡಿದರೆ ದಪ್ಪವಾದ ಇಂಗ್ಲಿಷ್ ಬುಕ್‌ಗಳನ್ನು ನಮಗೆ ಕೊಟ್ಟಿರುತ್ತಾರೆ. ಕೊಟ್ಟಿದ್ದನ್ನು ಬಗಲಲ್ಲಿಟ್ಟುಕೊಂಡು ಹೋದೆ. ಆದರೆ ಅದು ಇಂಗ್ಲೀಷಿನಲ್ಲಿದ್ದುದರಿಂದ ಅದರಲ್ಲಿರುವ ವಿಚಾರ ತಿಳಿದುಕೊಳ್ಳುವುದಕ್ಕೆ ಅವಕಾಶವಾಗಲಿಲ್ಲ. ಕರ್ನಾಟಕದ ಅಸೆಂಬ್ಲಿಯಲ್ಲಿ ಆದಷ್ಟು ಕನ್ನಡದಲ್ಲೇ ಎಲ್ಲವೂ ಇರಬೇಕು. ಈ ಸಭೆಯ ಸದಸ್ಯರಿಗೆಲ್ಲಾ ತಿಳಿಯುವ ಹಾಗೆ ಇನ್ನು ಮುಂದೆ ಬಡ್ಜೆಟ್ ಮುಂತಾದ್ದನ್ನು ಪ್ರಶ್ನೋತ್ತರಗಳನ್ನು ಕನ್ನಡದಲ್ಲೇ ಮುದ್ರಿಸಿ ಹಂಚಬೇಕು. ನಮ್ಮ ಪ್ರಾಂತ ಯಾವುದು, ಆರಿಸಿ ಬಂದಿರುವವರು ಯಾರು. ಯಾವ ತಾಯಿ ಹೊಟ್ಟೆಯಲ್ಲಿ ಹುಟ್ಟಿದ್ದಾರೆ ಎಂದು ನೋಡಿ ದಯವಿಟ್ಟು ಸರ್ಕಾರದವರು ಇನ್ನು ಮುಂದಾದರೂ ಬಡ್ಜೆಟ್ ಪುಸ್ತಕಗಳನ್ನು ಕನ್ನಡದಲ್ಲೇ ಮುದ್ರಿಸಿ ಕನ್ನಡ ಸದಸ್ಯರು ವಿಚಾರ ತಿಳಿದುಕೊಳ್ಳುವುದಕ್ಕೆ ಅನುಕೂಲ ಮಾಡಬೇಕು.

ನಮ್ಮ ಮಿತ್ರರು ಪೋಲೀಸರಿಲ್ಲದೆ ರಾಜ್ಯ ನಡೆಯುವುದಿಲ್ಲವೆಂದು ಹೇಳಿದರು. ಆದರೆ ರಾಜ್ಯದ ಆಡಳಿತ ಈ ದಿವಸ ಹದಗೆಡುವುದಕ್ಕೆ ಯಾರು ಕಾರಣರೆಂದರೆ ಮೊಟ್ಟಮೊದಲು ಪೋಲೀಸು ಖಾತೆಯವರು. ಈ ದಿವಸ ಪಾನನಿರೋಧದಿಂದ ಕೋಟಿಗಟ್ಟಲೆ ರೊಕ್ಕ ಸರ್ಕಾರಕ್ಕೆ ಹಾನಿಯಾಗುತ್ತಿದೆ. ಪಾನನಿರೋಧ ಸರಿಯಾಗಿ ಜಾರಿಗೆ ಬಂದಿಲ್ಲ ಅಮಲಬಜಾವಣೆ ಸರಿಯಾಗಿ ಆಗಿಲ್ಲ ಎಂದು ವಿರೋಧಿ ಪಕ್ಷದ ಪತಿಯಿಂದ ಮತ್ತು ಈ ಅಸೆಂಬ್ಲಿಯ ಕಾಂಗ್ರೆಸ್ ಸದಸ್ಯರ ಕಡೆಯಿಂದ ಕೇಳಿ ಬರುತ್ತಿದೆ. ಪಾನನಿರೋಧ ಜಯಪ್ರದವಾಗುವುದಕ್ಕೆ ಸಾಧ್ಯವಿಲ್ಲ, ದೇಶಕ್ಕೆ ಅನ್ಯಾಯವಾಗಿ ಹಣ ಅಪವ್ಯಯವಾಗುತ್ತಿದೆ. ಆದ್ದರಿಂದ ಪಾನನಿರೋಧವನ್ನು ತೆಗೆದು ಹಾಕಿ ಬೇರೆ ಯೋಜನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪೋಲೀಸು ಆಡಳಿತ. ತಾಲ್ಲೂಕು ಸಬ್ ಇನ್ಸ್‌ಪೆಕ್ಟರು ಮತ್ತು ಪೋಲೀಸು, ಪಟೇಲ ಕೂಡಿಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲೂ ಅಮಲಬಜಾವಣೆ ಸರಿಯಾಗಿ ನಡೆಸುತ್ತಿಲ್ಲ. ಅವರು ದುಷ್ಟರನ್ನು ಮರ್ದನ ಮಾಡಲಿಕ್ಕೆ ತಯಾರಿಲ್ಲ. ಅಪರಾಧ ಮಾಡಿಲ್ಲದಿರುವವರನ್ನು ಹಿಡಿದು ಲಂಚ ತೆಗೆದುಕೊಳ್ಳುತ್ತಿದ್ದಾರೆ. ಅಪರಾಧಿಯಲ್ಲದವರನ್ನು ಹಿಡಿದು ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ಮರ್ಯಾದೆಯಿಂದ ಬಾಳುವವರಿಗೆ ಅವಕಾಶವಿಲ್ಲದಂತಾಗಿದೆ. ಅವರನ್ನು ತೊಂದರೆಗೆ ಸಿಕ್ಕಿಸಿ ಇಲ್ಲಸಲ್ಲದ ಆರೋಪ ಹೊರಿಸಿ ರೊಕ್ಕ ಪಡೆಯಲು ಸನ್ನಾಹ ನಡೆಸುತ್ತಿದ್ದಾರೆ. ತಮ್ಮ ಮಾತು ಕೇಳದವರ ಮೇಲೆ ಫಿರ್ಯಾದು ಮಾಡಿ ಅವರ ಮಾನ ಮರ್ಯಾದೆಗಳಿಗೆ ಚ್ಯುತಿ ತರುತ್ತಿದ್ದಾರೆ. ಜಾಮೀನಿನ ಮೇಲೆ ಬಿಡಿ ಎಂದರೆ 500 ರೂಪಾಯಿ ಕೊಡಬೇಕೆಂದು ಯಾರ ಮೇಲೆ ಫಿರ್ಯಾದಿದೆ ಅವರನ್ನು ಕೇಳುವ ಪರಿಸ್ಥಿತಿಯಿದೆ. ಹೀಗಾಗಿ ಜನರಿಗೆ ಯಾವಾಗ ಏನು ಮಾಡುತ್ತಾರೋ ಎಂದು ಹೆದರಿಕೆಯುಂಟಾಗಿದೆ.

ರಾಜ್ಯದ ಆಡಳಿತ ಕಾಂಗ್ರೆಸ್ಸಿನ ಕೈಯಲ್ಲದೆ ; ನಮ್ಮ ಕೈಯಲ್ಲಿದೆ. ಆದರೆ ವಾಸ್ತವವಾಗಿ ನೋಡಿದರೆ ಅದು ಪೋಲೀಸರ ಕೈಯಲ್ಲಿದೆಯೆನ್ನಬೇಕು. ಅವರ ಕೈಕೆಳಗಿರತಕ್ಕ ಕೆಲವು ಉಚ್ಚ ಜನರ ಕೈಯಲ್ಲಿದೆ. ಯಾವ ಮಂತ್ರಿಗಳದೂ ಅವರ ಮುಂದೆ ನಡೆಯುವುದಿಲ್ಲ ; ಯಾವ ಕಾಂಗ್ರೆಸ್ಸಿನದೂ ನಡೆಯುವುದಿಲ್ಲ. ಪೋಲೀಸಿನವರು ಅಪರಾಧಗಳನ್ನೇನಾದರೂ ಮಾಡಿದರೆ ಸರ್ಕಾರ ಉಳಿಯುವುದಿಲ್ಲ. ಆದ್ದರಿಂದ ಆದಷ್ಟು ತೀವ್ರವಾಗಿ ಈ ಇಲಾಖೆಯನ್ನು ಸುಧಾರಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಾ, ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀಮತಿ ದ್ಯಾಮಮ್ಮ (ಗಂಡಸಿ).—ಮಾನ್ಯ ಅಧ್ಯಕ್ಷರೆ, ನಾನು ಈಗ ನಮ್ಮ ಮುಂದಿಟ್ಟಿರುವ ಬಡ್ಜೆಟ್ಟನ್ನು ಅನುಮೋದಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಹಾಸನ ಜಿಲ್ಲೆಯಲ್ಲಿ ಗಂಡಸಿ ಕ್ಷೇತ್ರವು 304 ಹಳ್ಳಿಗಳಿಂದ ಕೂಡಿದ ಒಂದು ಮುಖ್ಯ ಗ್ರಾಮಾಂತರ ಪ್ರದೇಶವಾಗಿದೆ. ಹಳ್ಳಿಗಳ ಕಡೆ ಸಂಚಾರಕ್ಕೆ ರಸ್ತೆಗಳೇ ಮುಖ್ಯ. ಅಂಥದರಲ್ಲಿ ನಮ್ಮಲ್ಲಿ ಅನೇಕ ಕಡೆ ಸಂತೆ ವಗೈರೆಗಳಿಗೆ ಸಂಚಾರಮಾಡಲು ರಸ್ತೆಗಳೇ ಇಲ್ಲ ; ನಾಲ್ಕು ಮೈಲಿಯಿಂದ ಸೇರಿಕೊಳ್ಳುವ ಪ್ರದೇಶಕ್ಕೆ 15 ಮೈಲಿಯಿಂದ ಸುತ್ತಿಕೊಂಡು ಬರುವ ಪರಿಸ್ಥಿತಿಯಿದೆ ಅಲ್ಲಿ. ಮತ್ತು ನಮ್ಮ ಭಾಗದಲ್ಲಿ ಕೆರೆ ಕಟ್ಟೆಗಳೂ, ಮೇಜರ್ ಕೆರೆಗಳೂ ಕೂಡ ಕಾಮಗಾರಿಯಾಗದೆ ನಿಂತಿರುವುದು ಅನೇಕವಾಗಿವೆ. 60-70 ಕೆರೆಗಳು ಕಾಮಗಾರಿಯಾಗದೆ ಇದ್ದು, ಆ ಬಗ್ಗೆ ಹಳ್ಳಿಯವರು ತಮ್ಮ ಪಾಲಿನ ಅರ್ಧ ಹಣವನ್ನು ಕೊಟ್ಟರೂ ಸಂಬಂಧಪಟ್ಟ ಇಲಾಖೆಯವರು ಸರ್ವೆ ನಡೆಸಿರುವುದಿಲ್ಲ. ಕೆಲವು ಕೆರೆಗಳ ವಿಚಾರದಲ್ಲಿ ಹಣದ ಮಂಜೂರಾತಿಯನ್ನು ಕೊಟ್ಟಿಲ್ಲವೆಂದು ನಾನು ತಿಳಿದಿದ್ದೇನೆ ಈ ಕಾಮಗಾರಿಯನ್ನು ಜರೂರು ನಡೆಸಿ ಆಹಾರದ ಬೆಳೆಗಳಿಗೆ ಅವಕಾಶಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ಕ್ಷೇತ್ರದಲ್ಲಿ ಐದು ಹೋಬಳಿಗಳಿದ್ದರೂ ಅಲ್ಲಿ ಒಂದು ಹೈಸ್ಕೂಲಿಲ್ಲದೆ ತುಂಬ ಕೊರತೆಯಾಗಿದೆ. ಈ ವರ್ಷ ಒಂದು ಸ್ಕೂಲು ಒದಗಿಸಿ ಹಳ್ಳಿಯ ಜನರಿಗೆ ವಿದ್ಯಾಭ್ಯಾಸದ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಗಂಡಸಿ ಸಂತೆಗೆ ಬರುವ ಜನಜಾನುವಾರುಗಳಿಂದ ಸುಮಾರು 20,000 ರೂಪಾಯಿಗಳವರೆಗೂ ವಾರ್ಷಿಕ ವರಮಾನ ಬರುತ್ತಿದೆ. ಆದರೆ ಆ ಪ್ರದೇಶದಲ್ಲಿ ಕುಡಿಯುವ ನೀರಿನ ಅನುಕೂಲತೆ ಒದಗಿಸಿಕೊಡುವ ಬಗ್ಗೆ 92,000 ರೂಪಾಯಿಗಳ ಅಂದಾಜುಮಾಡಿ ರಿಕಾರ್ಡ್ ನಡೆದಿರುತ್ತೆ. ಆದರೆ ಐದು ವರ್ಷಗಳಿಂದಲೂ ಈ ಕಾರ್ಯ ಕೈಗೊಳ್ಳದೆ ಹಾಗೆಯೇ ಉಳಿದಿದೆ. ಇದರಿಂದಾಗಿ

(ಶ್ರೀಮತಿ ದ್ಯಾವಮ್ಮ)

ಆ ಭಾಗದ ಜನರಿಗೆ ತುಂಬ ನಿರಾಶೆಯುಂಟಾಗಿತ್ತದೆ. ಈ ವರ್ಷವಾದರೂ ಈ ಕಾಮಗಾರಿಯನ್ನು ಕೈಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಂದು ಸಾವಿರಕ್ಕೆ ಮೇಲ್ಪಟ್ಟು ಪ್ರಜಾಸಂಖ್ಯೆಯಿರುವ ಎಂಟು ಹತ್ತು ಗ್ರಾಮಗಳು ನಮ್ಮ ತಾಲ್ಲೂಕಿನಲ್ಲಿವೆ. ಅಲ್ಲಿಗೆಲ್ಲಾ ಕೆರೆಯ ಮೂಲಕ ನೀರುಸರಬರಾಯಿಯ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಈಗ ಅನೇಕ ಗ್ರಾಮಗಳಲ್ಲಿ ಶಿಶು ವಿಹಾರ, ಸಮಾಜ ಕಲ್ಯಾಣ ಕೇಂದ್ರಗಳನ್ನು ತೆರೆಯಬೇಕಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳನ್ನೂ, ಕೆಲಸ ಕಾರ್ಯಗಳನ್ನೂ ಆದಷ್ಟುಮಟ್ಟಿಗೆ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅತ್ಯಗತ್ಯವಾಗಿ ಮಾಡಿಕೊಡಬೇಕೆಂದು ಈ ಮೂಲಕ ತಮ್ಮ ಗಮನಕ್ಕೆ ತಂದಿರುತ್ತೇನೆ.

ಕೊನೆಯದಾಗಿ ನಮ್ಮ ಮುಂದಿಟ್ಟಿರುವ ಬಡ್ಜೆಟ್ಟಿಗೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri H. C. LINGA REDDY (Malur).—Mr. Speaker, Sir, I rise to accord my hearty support for the Budget proposals that have been placed before this House by the Hon'ble Finance Minister. The Finance Minister, despite his ill-health, has placed before us a very commendable and a very thorough and thought-provoking Budget. He really deserved congratulations at our hands. But at the same time, I have to bring to the notice of the Government that though liberal provisions will have been made for several nation building activities the Budget provisions will not be sent in time either to the district or to the taluk levels. Last year, for example, a deficit of about nine crores and odd was expected. But we find that the Budget provisions have not been spent and the deficit now is only about 1.7 crores. And again, this year, though liberal amounts have been provided under several heads, my fear is the amounts may not be spent in time in the result these liberal provisions will not be of any use at all. To give you only a few examples, the amelioration funds are just now being sent. The year is at the end. Rather it is over, and the amounts have lapsed. In several places even the amounts that are granted are not properly spent. A direction was sent to the Deputy Commissioners that the Committees would be appointed by the Government. The Government did not appoint the committees. Therefore they could not be consulted and the amount could not be spent. This is just what happened a few days back. We are in the 4th of April and in the month of March it has happened. And again, Sir, several items, I.V.C. and drinking water wells and several other provisions are not communicated in time. Sir, I know, and I also hear from several friends from Bombay that as soon as the Budget is passed, communication is sent to the several departmental heads so that they may go on with the work in several facets, on the basis of allotments made in the previous year. I hear that in those areas, they will be going ahead with works immediately they receive intimation from the Government by telegram. I do not know why the same procedure should not be followed in this State also.

Sri H. K. VEERANNA GOWDH.—In the current year we are adopting the same procedure.

Sri H. C. LINGA REDDY.—I am glad to learn that. A vote on account has been taken for four months and I am glad to learn that communications have been sent to several departments. I only request them to make their officers and heads of departments sufficiently active. Again, Sir,—our Government is something like new wine in old bottles. Or in other words a new engine dragging a train consisting of old bogies. Now what is happening is, no doubt our Ministers appear to be sufficiently enthusiastic, but they do not keep their officers sufficiently active and enthusiastic.

Sri G. ANNA RAO (Afzalpur).—Bogies are left behind, you mean !

Sri H. C. LINGA REDDY.—Yes, bogies are left behind or the engine finds very difficult to drag the train, with the result the train does not reach the place in time and passengers will have to suffer. That has become the fate of our State.

AN HON'BLE MEMBER.—Chickballapur train.

Sri H. C. LINGA REDDY.—Yes, the difficulty will be that passengers will suffer and they will be too late for their programmes and that is happening in our State. We have determined to build

up a Welfare State, to bring the ideal of socialistic pattern of society. For attaining this, unless the Ministers, Officers, Heads of Departments, and all other Officers become active and are made to work, I am afraid the plans and programmes that we are drawing up and the liberal amounts which we have been providing under several heads, will not be of any use. For example, from the Budget speech of the Hon'ble Minister, it is clear that during the first two years of the Second Five-Year Plan, they could not make good progress. What is the reason ? Unless the Five-Year Plans are put into action, unemployment problem cannot be solved; standard of living of the people cannot be raised and there can be no progress in the several directions in several departments. According to the speech of the Finance Minister, during the third year an attempt is made to secure more funds from the Planning Commission and for several reasons they are not in a position to grant liberal amounts. We will be having two more years and nearly 150 crores will have to be spent during the Second Five-Year Plan period. If the pace of progress of the Second Five-Year Plan in the matter of implementing should be so tardy, I am afraid we will not be in a position to realise the ideal of a socialistic pattern of society or Welfare State. Therefore my appeal to the Government is to see that these amounts are spent for the purpose for which they are meant in time before the close of the year and not merely try to convert the deficit into surplus or to enhance surplus or something like that.

With regard to finances of the State, I am glad that there is a surplus Budget and that the finances of the State are sound and that there is an increase in the revenues. But, at the same time I have got to remind the Government of the assurance given by them last year. They stated that they would appoint an expert Committee or an expert Officer who would probe into the finances of the State. Specially in view of the fact that several areas have come into this new Mysore State and several resources have to be exploited and the financial position of the State has to be improved, it was stated that such a committee was necessary. But, such a thing has not been done at all. In view of the fact that we are spending quite a lot of money every year and the heavy amount we are providing for under the Second Five-Year Plan, I would request the Government to appoint an expert Committee to probe into the matter so that we may have a clear picture of our State. The Government have thought it fit to appoint a Malnad Improvement Committee. Hon'ble Members are aware several times we are coming across near famine situations in several parts of the State specially Kolar, Chitaldrug, Tumkur and Bangalore Districts and also several districts in the integrated areas like Raichur and Bidar. When the Government have thought it fit to have a Malnad Improvement Committee for places where situations have improved, they have not acted wisely at all where relief is very necessary. Of course some suggestions like building up of a Relief fund, etc., are there. There is already a Famine Insurance Fund and Finance Commission have already made suggestion that this fund may be built up. But that would not be sufficient. My suggestion is that a Scarcity Area Development Committee should be set up so that they might advise ways and means for affording temporary relief as well as permanent relief.

Now, with regard to Agriculture Department, I wish to state that the services of tractors were of much use hitherto. But, now our Agriculture Minister is informing us that the tractors have fallen sick, and it is only a few of them are in a position to work. It is our experience at the several district Head Quarters that the department is not in a position to supply tractors to the needy ryots. Again, the tractor charge originally was about Rs. 6 or Rs. 9 but now it has been enhanced to Rs. 32 according to what I am told.

SRI H. S. RUDRAPPA.—It is not so. There are different rates.

SRI H. C. LINGA REDDY.—The maximum is Rs. 32. That is very high. Here, the ryots are not in a position to pay.

Sri H. S. RUDRAPPA.—That was the rate prevailing in the integrated areas.

Sri H. C. LINGA REDDY.—The addition of the other areas should be of some help and they should not bring heavy burden. We should also try to help those areas by reducing the rates. What is the use of enhancing our rates to their level ? It will not help anybody.

Sri H. S. RUDRAPPA.— In the former State the rates were different.

Sri H. C. LINGA REDDY.—Therefore let not the maximum in those areas be adopted but at least the average rate be adopted.

With regard to subsidy to wells, the former government was giving Rs. 1,000 per well and subsequently it was reduced to Rs. 500 and now it is Rs. 250. Even this amount of Rs. 250 per well is not liberally given. There are many applications and sufficient money has not been provided at all. So far as the well subsidy is concerned, it is a spill over scheme. In Malur Taluk though sufficient ryots have come forward to dig wells, they are not given the subsidy of Rs. 250 per well.

7 P.M.

With regard to the irrigation works I have to know from the Hon'ble Minister for Public Works why amounts have been reduced. A grant of Rs. 702 lakhs had been provided during the year 1957-58 and the revised amount is Rs. 643.22 lakhs and now the amount budgeted for is Rs. 506·84 lakhs. What has been provided for under irrigation is less than what was even spent and what was even budgeted for during the year 1957-58. This amount hardly meets the requirements of the situation. If at all, there is a case for enhancement and not for reduction. Under minor irrigation also, the amount that was budgeted for last year was Rs. 89·24 lakhs and the revised amount is Rs. 92·89 lakhs. Of course, there is an increase and the reason given is on account of minor irrigation the amount that has been budgeted for during this year is Rs. 119·52 lakhs. Even here there is not sufficient increase while you have been very liberal in providing for major irrigation works, Bhadra project Rs. 295 lakhs, Tunga Rs. 5 lakhs in addition to what has been spent, Ghataprabha Rs. 22 lakhs Kabini Rs. 9 lakhs and Tungabhadra Rs. 100 lakhs and for power schemes also. My point is that the Government has not been providing sufficient amounts for minor irrigation. The Government of India have been giving very liberal amounts and the State Government has to contribute some amount. No doubt, major irrigation works are very important, but more important than the major irrigation works which cover a few areas is the tanks in the several parts of old Mysore. I believe it is so in the other parts of Mysore also—I mean the integrating areas. Well maintained tanks are the life blood or the life spring of a village. If there is water in the tank, there will be water in the wells and the ryots will benefit by it. Water in the pond is very important ; it is something like a sea to the villagers. You don't pay attention to the maintenance of a tank and its repairs. After all, the repairs will be of a minor type. Either the sluice or the bund will be leaky and you do not provide sufficient amount for such repairs. And you think of very big major irrigation projects which take a number of years for completion and for yielding sufficient returns at the cost of minor irrigation works. Again under the Government of India scheme you were thinking of new minor irrigation works. I am glad the Minister for Public Works who paid a visit to our taluk and also the district recently was kind enough to tell us that where there is minor work which helps even 4 acres of land, he will have it taken up under the minor irrigation scheme, but when you think of minor works and all these things even with a little extent or of 4-5 acres, there are other tanks with an atchkat of 300 or 400 or 100 acres and those tanks will have their sluices or tank-bunds or waste-weirs to be put in proper condition. You grudge spending a little money and you think of new irrigation works and you do not provide for the maintenance of the tanks. I put questions and your answer is that either funds are not sufficient or the villagers are not in a position to do their part of the work,

Sri H. K. VEERANNA GOWDH.—That is the only reason.

Sri H. C. LINGA REDDY.—My submission is this. When you think of minor works and spend heavy amounts over works which help four or five acres yield, and if it is important for the Government, I consider that the minor repairs to tanks have also to be provided for. Therefore, I appeal to the Government to have all the tanks surveyed with regard to minor repairs that have got to be effected. If necessary have an expert committee to survey all the tanks even before you think of minor works and have minor irrigation works also surveyed and provide sufficient funds because it is these small works that will yield very good results.

With these few remarks I welcome the budget proposals.

Mr. SPEAKER.—Before we rise for the day, I would like to announce that today 17 members have taken part in the debate. In the general discussion on the Budget, up-to-date 37 members have taken part out of which 15 are from the Opposition and 22 from the Congress Party. Tomorrow we will be meeting at 8-30 in the morning and I propose to sit also in the evening. The House will be sitting from 8-30 to 12-30 and then from 3-30 to 6-30. There will be no question hour tomorrow morning because we want to use full four hours for general discussion on the Budget. I propose to sit in the evening also for three hours from 3-30.

Sri R. CHENNIGARAMAIAH (Minister for Local Self-Government).—Most of the members will go away in the evening.

Mr. SPEAKER.—Then we may have to sit for a short period in the evening.

The House will now rise for the day and meet tomorrow at 8-30 in the morning.

The House adjourned at Seven Minutes past Seven of the Clock to meet again at Thirty Minutes past Eight of the Clock on Saturday, the 5th April 1958.